ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 24 ಶನಿವಾರ 2022

ಸಂಪುಟ: 43 | ಸಂಚಿಕೆ: 159 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಬೆಳಕಿನ ನಡುವೆ ಗಜಪಡೆ ನಡಿಗೆ...



ಮೈಸೂರು,ಸೆ.23(ಎಸ್‌ಬಿಡಿ)–ದಸರಾ ಗಜಪಡೆ ಆನೆಗಳು ಮೊದಲ ಬಾರಿಗೆ ಜಗಮಗಿಸುವ ವಿದ್ಯುತ್ ದೀಪಾಲಂಕಾರದ ನಡುವೆ ಯಶಸ್ವಿ ತಾಲೀಮು ನಡೆಸಿದವು.

ಈ ಬಾರಿ ಜಂಬೂಸವಾರಿ ತಡವಾಗಿ ಆರಂಭವಾಗುವುದರಿಂದ ವಿದ್ಯುತ್ ದೀಪಾಲಂಕಾರದಲ್ಲಿ ಗಜಪಡೆಗೆ ತರಬೇತಿ ನೀಡುವ ಉದ್ದೇಶದಿಂದ ಶುಕ್ರವಾರ ಸಂಜೆ 6ರಿಂದ ರಾತ್ರಿ 8.30ರವರೆಗೆ ರಾಜಮಾರ್ಗದಲ್ಲಿ ದೀಪಾಲಂಕಾರದ ವ್ಯವಸ್ಥೆ ಮಾಡಲಾಗಿತ್ತು. ಮರದ ಅಂಬಾರಿ ಹೊತ್ತ ಗೋಪಾಲಸ್ವಾಮಿ ಜೊತೆಗೆ ಎಲ್ಲಾ 13 ಆನೆಗಳು ಕೊಂಚವೂ ಅಳುಕಿಲ್ಲದೆ ಹೊನಲು ಬೆಳಕಲ್ಲಿ ಶಾಂತವಾಗಿ ಹೆಜ್ಜೆ ಹಾಕಿದವು. ಅರಮನೆ ಅಂಗಳದಿಂದ ಸಂಜೆ 5.30ರ ವೇಳೆಗೆ ಹೊರಟ ಗಜಪಡೆ, ಆಯುರ್ವೇದ ಆಸ್ಪತ್ರೆ ವೃತ್ತದ ಬಳಿ ಬರುವಷ್ಟರಲ್ಲಿ ರಾಜಮಾರ್ಗದುದ್ದಕ್ಕೂ ಅತ್ಯಾಕರ್ಷಕ ವಿದ್ಯುತ್ ದೀಪಗಳು ಬೆಳಕು ಚೆಲ್ಲಿದವು. ಕುಮ್ಕಿ ಆನೆಗಳ ನಡುವೆ ಮರದ ಅಂಬಾರಿ ಹೊತ್ತು ಸಾಗುತ್ತಿದ್ದ ಗೋಪಾಲಸ್ವಾಮಿ ಬೆಳಕಿನ ಪ್ರಜ್ವಲತೆಗೆ ಸ್ವಲ್ಪವೂ ವಿಚಲಿತಗೊಳಲಿಲ್ಲ. ಆತನ ಗಾಂಭೀರ್ಯದ ನಡಿಗೆಯಲ್ಲಿ ▶ 9ನೇ ಪುಟಕ್ಕೆ

ಏಕೆ ಈ ತಾಲೀಮು?

ವಿಜಯದಶಮಿಯಂದು ಶ್ರೀ ಚಾಮುಂಡೇಶ್ವರಿ ಉತ್ಸವ ಮೂರ್ತಿ ಪ್ರತಿಷ್ಠಾಪಿತ ಚಿನ್ನದ ಅಂಬಾರಿಗೆ ಪುಷ್ಪಾರ್ಚನೆ ನೆರವೇರಿಸಿದ ನಂತರ ಅತ್ಯಮೋಘ ಮೆರವಣಿಗೆಯೊಂದಿಗೆ ಜಂಬೂಸವಾರಿ ಬನ್ನಿಮಂಟಪ ತಲುಪುತ್ತಿತ್ತು. ಕತ್ತಲಾಗುವಷ್ಟರಲ್ಲಿ ಜಂಬೂಸವಾರಿ ಮುಕ್ತಾಯವಾಗುತ್ತಿದ್ದ ಕಾರಣ ವಿದ್ಯುತ್ ದೀಪಾಲಂಕಾರದ ನಡುವೆ ಈವರೆಗೆ ತಾಲೀಮು ನಡೆಸಿರಲಿಲ್ಲ. ಆದರೆ ಈ ಬಾರಿ ಪುಷ್ಪಾರ್ಚನೆಗೆ ಅ.5ರ ಸಂಜೆ 5.40ಕ್ಕೆ ಮುಹೂರ್ತ ನಿಗದಿಯಾಗಿದೆ. ಪರಿಣಾಮ ಜಂಬೂಸವಾರಿ ಮಾರ್ಗಮಧ್ಯೆಯೇ ಕಗ್ಗತ್ತಲು ಆವರಿಸುತ್ತದೆ. ಆಗ ಅನಿವಾರ್ಯವಾಗಿ ದೀಪಾಲಂಕಾರದ ನಡುವೆ ಸಾಗಬೇಕಿದೆ. ಹಾಗಾಗಿ ದೀಪಾಲಂಕಾರಕ್ಕೆ ಆನೆಗಳನ್ನು ಒಗ್ಗಿಸುವ ಉದ್ದೇಶದಿಂದ ಇಂದು ವಿಶೇಷ ತಾಲೀಮು ನಡೆಸಲಾಯಿತು.

“ ಜಂಬೂಸವಾರಿ ತಡವಾಗುವ ಕಾರಣದಿಂದ ಆನೆಗಳಿಗೆ ವಿದ್ಯುತ್ ದೀಪಾಲಂಕಾರದ ನಡುವೆ ತಾಲೀಮು ನಡೆಸಬೇಕೆಂಬ ಅರಣ್ಯ ಇಲಾಖೆಯವರ ಕೋರಿಕೆ ಮೇರೆಗೆ ಶುಕ್ರವಾರ ತಾಲೀಮು ಸಂದರ್ಭದಲ್ಲಿ ರಾಜಮಾರ್ಗದಲ್ಲಿ ದೀಪಗಳನ್ನು ಬೆಳಗಿಸಲಾಯಿತು. ಈ ವೇಳೆ ದಸರಾ ಅಂಬಾರಿಗೆ ಹತ್ತಿರವಾಗಬಹುದಾದ ವಿದ್ಯುತ್ ದೀಪಗಳ ಸಾಲನ್ನು ಗುರುತಿಸಿ ಎತ್ತರಿಸಲು ಕ್ರಮ ವಹಿಸಲಾಗಿದೆ. ನಾಳೆಯಿಂದ ಪರೀಕ್ಷಾರ್ಥವಾಗಿ ಕೆಲ ಸಮಯ ದೀಪಾಲಂಕಾರ ಹೊತ್ತಿಸಿ, ಪರಿಶೀಲನೆ ಬಳಿಕ ಆರಿಸಲಾಗುವುದು. ಸೆ.26ರಂದು ಸಂಜೆ ಸಯ್ಯಾಜಿರಾವ್ ರಸ್ತೆ ಹಸಿರು ಚಪ್ಪರದಲ್ಲಿ ಗಣ್ಯರು ಈ ಬಾರಿಯ ದಸರಾ ವಿದ್ಯುತ್ ದೀಪಾಲಂಕಾರಕ್ಕೆ ಅಧಿಕೃತವಾಗಿ ಚಾಲನೆ ನೀಡಲಿದ್ದಾರೆ.

–ಎಸ್.ನಾಗೇಶ್, ಸೆಸ್ಕ್ ಅಧೀಕ್ಷಕ ಇಂಜಿನಿಯರ್, ದೀಪಾಲಂಕಾರ ಉಪಸಮಿತಿ ಕಾರ್ಯಾಧ್ಯಕ್ಷ.

ನಾಡಗೀತೆಯ ಧಾಟಿ, ಕಾಲಮಿತಿ ನಿಗದಿ

ಬೆಂಗಳೂರು,ಸೆ.23– ಕರ್ನಾಟಕ ನಾಡಗೀತೆಗೆ ರಾಜ್ಯ ಸರ್ಕಾರ ಧಾಟಿ ಹಾಗೂ ಕಾಲಮಿತಿ ನಿಗದಿಪಡಿಸಿದ್ದು, ಆ ಮೂಲಕ ನಾಡಗೀತೆ ಕುರಿತು ಭುಗಿಲೆದ್ದಿದ್ದ ವಿವಾದಕ್ಕೆ ತೆರೆ ಎಳೆದಿದೆ.

ಖ್ಯಾತ ರಾಗ ಸಂಯೋಜಕ, ಗಾಯಕ ದಿವಂಗತ ಮೈಸೂರು ಅನಂತಸ್ವಾಮಿ ಸಂಯೋಜಿಸಿದ್ದ ಧಾಟಿಯಲ್ಲಿ ಕುವೆಂಪು ವಿರಚಿತ ನಾಡಗೀತೆಯ ಒಂದಕ್ಷರವನ್ನೂ ಬಿಡದಂತೆ ಹಾಡುವುದಕ್ಕೆ ಈಗ ರಾಜ್ಯ ಸರ್ಕಾರ ಸಮ್ಮತಿ ಸೂಚಿಸಿದ್ದು, ಇದಕ್ಕಾಗಿ ಕಾಲಮಿತಿಯನ್ನೂ ನಿಗದಿಪಡಿಸಿದೆ.

ಅಂತೆಯೇ ಯಾವುದೇ ಆಲಾಪ ಹಾಗೂ ಪುನರಾವರ್ತನೆ ಇಲ್ಲದಂತೆ ಎರಡು ನಿಮಿಷ ಮೂವತ್ತು ಸೆಕೆಂಡ್‌ಗಳಲ್ಲಿ ನಾಡಗೀತೆಯನ್ನು ಹಾಡಲು ಸಾಧ್ಯ ಎಂದು ತಜ್ಞರು ನೀಡಿದ ವರದಿ ಆಧರಿಸಿ ಕನ್ನಡ ▶ 9ನೇ ಪುಟಕ್ಕೆ


ಸೆ.29ಕ್ಕೆ ಪರಿಷ್ಕೃತ ಸಿಇಟಿ ರ‍್ಯಾಂಕಿಂಗ್ ಪಟ್ಟಿ ಪ್ರಕಟ

ಬೆಂಗಳೂರು: ಸೆಪ್ಟೆಂಬರ್ 29ರಂದು ಪರಿಷ್ಕೃತ ಸಿಇಟಿ (CET) ರ‍್ಯಾಂಕಿಂಗ್ ಪ್ರಕಟವಾಗಲಿದ್ದು, ಅಕ್ಟೋಬರ್ 3ರಿಂದ ಕೌನ್ಸೆಲಿಂಗ್ ಪ್ರಕ್ರಿಯೆ ಆರಂಭವಾಗಲಿದೆ ಎಂದು ಸರ್ಕಾರ ತಿಳಿಸಿದೆ. ಪುನಾರಾವರ್ತಿತರ 2021ನೇ ಸಾಲಿನ ಪಿಯು ಅಂಕಗಳನ್ನು 2022ನೇ ಸಾಲಿನ ಸಿಇಟಿಗೆ ಪರಿಗಣಿಸುವ ವಿಚಾರದಲ್ಲಿ ಸಮಸ್ಯೆ ಉದ್ಭವಿಸಿತ್ತು. ಈ ಕುರಿತು ಸಿಇಟಿ ರ‍್ಯಾಂಕಿಂಗ್‌ನಲ್ಲಿ ಪುನರಾವರ್ತಿತ ವಿದ್ಯಾರ್ಥಿಗಳ ಪಿಯು ಅಂಕ ಪರಿಗಣಿಸಿಲ್ಲವೆಂದು ಜುಲೈ 30ರಂದು ಆದೇಶ ಹೊರಡಿಸಿತ್ತು. ರಾಜ್ಯ ಸರ್ಕಾರದ ಈ ಆದೇಶವನ್ನು ಪ್ರಶ್ನಿಸಿ ▶ 9ನೇ ಪುಟಕ್ಕೆ

ಪರಿಶಿಷ್ಟ ಜಾತಿ, ಪಂಗಡ ಮೀಸಲಾತಿ ಸಂಬಂಧ

ವಾರದಲ್ಲಿ ಸರ್ವಪಕ್ಷ ಸಭೆ

- ವಿಧಾನಸಭೆಯಲ್ಲಿ ಸಿಎಂ ಬೊಮ್ಮಾಯಿ ಘೋಷಣೆ
- ಈ ಸಮುದಾಗಳಿಗೆ ಮೀಸಲಾತಿ ಕಲ್ಪಿಸುವ ಇಂಗಿತ



“ ಸರ್ವಪಕ್ಷ ಸಭೆಗೆ ಅಧಿಕಾರಿಗಳು, ತಜ್ಞರನ್ನು ಆಹ್ವಾನಿಸಿ, ಈ ಸಮುದಾಯಕ್ಕೆ ಅನುಕೂಲವಾಗುವಂತಹ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಲಿದೆ. ಜಾತೀವಾರು ಜನಸಂಖ್ಯೆಗನುಗುಣವಾಗಿ ಮೀಸಲಾತಿ ಸೌಲಭ್ಯ ಕಲ್ಪಿಸಿಕೊಡಬೇಕು ಎಂಬ ವಿಷಯದಲ್ಲಿ ಬದ್ಧತೆ ಇದೆ. ಹೀಗಾಗಿ ಸರ್ಕಾರದ ಧೋರಣೆ ಬಗ್ಗೆ ಅನುಮಾನ ಬೇಡ. ಸರ್ಕಾರ ಇಂತಹ ಹೆಜ್ಜೆ ಇಡಲು ಮುಂದಾಗಿರುವುದರಿಂದ ವಾಲ್ಮೀಕಿ ಸಮುದಾಯದ ಸ್ವಾಮೀಜಿಯವರು ಧರಣಿಯನ್ನು ಕೈ ಬಿಡಬೇಕು. **–ಬೊಮ್ಮಾಯಿ, ಮುಖ್ಯಮಂತ್ರಿ**

ಬೆಂಗಳೂರು, ಸೆ. 23 (ಕೆಎಂಶಿ)– ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಾತಿ ಹೆಚ್ಚಳ ಮಾಡುವ ಇಂಗಿತವನ್ನು ವಿಧಾನ ಸಭೆಯಲ್ಲಿ ವ್ಯಕ್ತಪಡಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಸಂಬಂಧ ಚರ್ಚಿಸಲು ಇನ್ನೊಂದು ವಾರದಲ್ಲಿ ಸರ್ವಪಕ್ಷಗಳ ಸಭೆ ಕರೆಯುವುದಾಗಿ ಪ್ರಕಟಿಸಿದರು.

ಬಿಎಂಎಸ್ ಟ್ರಸ್ಟ್ ವ್ಯವಹಾರದಲ್ಲಿ ಹಗರಣ ನಡೆದಿದೆ ಎಂದು ಆರೋಪಿಸಿ ಜೆಡಿಎಸ್ ಸದಸ್ಯರು ಇಂದು ಧರಣಿ ನಡೆಸುತ್ತಿದ್ದ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿ ಮಾತನಾಡಿದ ಅವರು, ಈ ಸಮುದಾಯದ ಬೇಡಿಕೆ ವಿಷಯದಲ್ಲಿ ನಮಗೆ ಸಹಾನುಭೂತಿ ಇದೆ. ನ್ಯಾಯಮೂರ್ತಿಗಳಾದ ನಾಗಮೋಹನದಾಸ್, ಸುಭಾಷ್ ಆಡಿ ಸೇರಿದಂತೆ ಎರಡು ಸಮಿತಿ ವರದಿ ನಮ್ಮ ಮುಂದಿದ್ದು, ಆ ವರದಿಗಳನ್ನು ಮುಂದಿಟ್ಟುಕೊಂಡು ಸರ್ವಪಕ್ಷ ಸಭೆಯಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು, ಈಗ ಪರಿಶಿಷ್ಟ ಜಾತಿಗೆ ಶೇಕಡಾ ಹದಿನಾಲ್ಕು, ಪರಿಶಿಷ್ಟ ಪಂಗಡಕ್ಕೆ ಶೇಕಡಾ ನಾಲ್ಕರಷ್ಟು ಮೀಸಲಾತಿ ಇದೆ. ಇದನ್ನು ಅನುಕ್ರಮವಾಗಿ ಶೇಕಡಾ ಹದಿನೈದು ಮತ್ತು ಶೇಕಡಾ ಏಳರಷ್ಟು ಹೆಚ್ಚಳ ಮಾಡಬೇಕು ಎಂದು ನಾಗಮೋಹನದಾಸ್ ವರದಿ ಶಿಫಾರಸು ಮಾಡಿದೆ. ಈ ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡು ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು ಎಂದರು. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ, ವಾಲ್ಮೀಕಿ ಸಮುದಾಯದ ಸ್ವಾಮೀಜಿಗಳು ಮೀಸಲಾತಿ ಹೆಚ್ಚಳದ ಬೇಡಿಕೆ ಮುಂದಿಟ್ಟು ಧರಣಿ ನಡೆಸುತ್ತಿದ್ದಾರೆ. ಅವರ ಬೇಡಿಕೆ ವಿಷಯದಲ್ಲಿ ನಮ್ಮ ಸಹಮತವಿದೆ. ಹೀಗಾಗಿ ಸರ್ಕಾರ ಸರ್ವಪಕ್ಷ ಸಭೆ ನಡೆಸುವ ತೀರ್ಮಾನಕ್ಕೆ ಮುಖ್ಯಮಂತ್ರಿಗಳು ಬಂದಿರುವುದರಿಂದ ಸ್ವಾಮೀಜಿಗಳು ತಮ್ಮ ಧರಣಿಯನ್ನು ಹಿಂಪಡೆಯುವಂತೆ ಅವರು ಇದೇ ವೇಳೆ ಮನವಿ ಮಾಡಿಕೊಂಡರು.

ಮೈಸೂರಲ್ಲಿ ರಾಷ್ಟ್ರಪತಿಗಳ ಕಾರ್ಯಕ್ರಮ ದಸರಾ ಉದ್ಘಾಟನೆಗಷ್ಟೇ ಸೀಮಿತ

2 ಗಂಟೆ 15 ನಿಮಿಷದ ಅಧಿಕೃತ ಕಾರ್ಯಕ್ರಮದ ನಂತರ ಧಾರವಾಡಕ್ಕೆ ನಿರ್ಗಮನ



ಮೈಸೂರು,ಸೆ.23(ಎಂಟಿವೈ)–ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಚಾಮುಂಡಿಬೆಟ್ಟದಲ್ಲಿ ಸೆ.26ರಂದು 9.45ರಿಂದ 10.05ರೊಳಗೆ ಸಲ್ಲುವ ವೃಶ್ಚಿಕ ಲಗ್ನದಲ್ಲಿ ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಲಾಗುವ ನಾಡದೇವಿ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡಿ, ಈ ಬಾರಿಯ ದಸರಾ ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಇದೊಂದು ಕಾರ್ಯಕ್ರಮಕಷ್ಟೇ ರಾಷ್ಟ್ರಪತಿಗಳ ಮೈಸೂರು ಪ್ರವಾಸ ಸೀಮಿತಗೊಂಡಿದೆ.

ದಸರಾ ಇತಿಹಾಸದಲ್ಲಿ ಇದೇ ಮೊದಲ ಬಾರಿ ರಾಷ್ಟ್ರಪತಿಗಳಿಂದ ದಸರಾ ಮಹೋತ್ಸವ ಉದ್ಘಾಟನೆಗೊಳ್ಳುತ್ತಿದೆ. ಸೆ.26ರಂದು ಬೆಳಗ್ಗೆ 9 ಗಂಟೆಗೆ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ರಾಷ್ಟ್ರಪತಿಗಳು ಆಗಮಿಸಲಿದ್ದಾರೆ. ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಳ್ಳಲಿದ್ದಾರೆ. ಬಳಿಕ ರಾಷ್ಟ್ರಪತಿಗಳು ನೇರವಾಗಿ ಚಾಮುಂಡಿಬೆಟ್ಟಕ್ಕೆ ತೆರಳಿ, ಚಾಮುಂಡೇಶ್ವರಿ ದರ್ಶನ ಪಡೆಯಲಿದ್ದಾರೆ.

ಬಳಿಕ ದೇವಾಲಯದ ಪಕ್ಕದ ಆವರಣದಲ್ಲಿ ನಾಡಹಬ್ಬ ದಸರಾ ಮಹೋತ್ಸವ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಸಂಪ್ರದಾಯದಂತೆ ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಲಾಗುವ ನಾಡದೇವಿಯ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ. ಬಳಿಕ ಅಂದು ಬೆಳಗ್ಗೆ 11.15ಕ್ಕೆ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ಧಾರವಾಡಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಯಾಣ ಬೆಳೆಸಲಿದ್ದಾರೆ. ಅವರೊಂದಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹ ತೆರಳಲಿದ್ದಾರೆ. ನಂತರ ದಸರಾ ಮಹೋತ್ಸವದ ವಿವಿಧ ಕಾರ್ಯಕ್ರಮಗಳು ನಾನಾ ಸ್ಥಳಗಳಲ್ಲಿ ಉದ್ಘಾಟನೆಗೊಳ್ಳಲಿವೆ.

ಜಂಬೂಸವಾರಿಗೂ ಮುಹೂರ್ತ ಫಿಕ್ಸ್: ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಜಂಬೂಸವಾರಿಗೂ ಮುಹೂರ್ತ ಫಿಕ್ಸ್ ಮಾಡಲಾಗಿದ್ದು, ಅ.5ರಂದು ಮಧ್ಯಾಹ್ನ 2.36ರಿಂದ 2.50ರವರೆಗೆ ಸಲ್ಲುವ ಮಕರ ▶ 9ನೇ ಪುಟಕ್ಕೆ

ಬಿ.ಎಸ್.ಯಡಿಯೂರಪ್ಪಗೆ ರಿಲೀಫ್

ಮಾಜಿ ಸಿಎಂ ವಿರುದ್ಧ ತನಿಖೆಗೆ ಹೈಕೋರ್ಟ್ ನೀಡಿದ್ದ ಆದೇಶಕ್ಕೆ 'ಸುಪ್ರೀಂ' ತಡೆ



ನವದೆಹಲಿ, ಸೆ.23– ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಎಫ್‌ಐಆರ್‌ನ ತನಿಖೆಗೆ ಸುಪ್ರೀಂಕೋರ್ಟ್ ತಡೆಯಾಜ್ಞೆ ನೀಡಿದೆ. ತನಿಖೆಗೆ ಅನುಮತಿ ನೀಡಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ಯಡಿಯೂರಪ್ಪ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ವೈ.ಚಂದ್ರ ಚೂಡ್ ಹಾಗೂ ಹಿಮಾ ಕೊಹ್ಲಿ ಅವರನ್ನೊಳಗೊಂಡ ನ್ಯಾಯಪೀಠವು, ದೂರುದಾರರಾದ ಟಿ.ಜೆ.ಅಬ್ರಾಹಂ ಅವರಿಗೆ ನೋಟಿಸ್ ಜಾರಿ ಮಾಡಿದೆ. ಯಡಿಯೂರಪ್ಪ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲರಾದ ಮುಕುಲ್ ರೊಹಟಗಿ ಹಾಗೂ ಸಿದ್ಧಾರ್ಥ ದವೆ, ಜನಪ್ರತಿನಿಧಿಗಳ ವಿರುದ್ಧ ಎಫ್‌ಐಆರ್ ದಾಖಲಿಸುವ ಮುನ್ನ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯಬೇಕು ಎಂಬ ನಿಯಮವನ್ನು ಹೈಕೋರ್ಟ್ ನಿರ್ಲಕ್ಷಿಸಿದೆ ಎಂದರು. ಆಗ ನ್ಯಾಯಪೀಠ, ಪರಿಶೀಲಿಸುವುದಾಗಿ ತಿಳಿಸಿತು.

ಶ್ರೀರಂಗಪಟ್ಟಣ ದಸರೆಯಲ್ಲಿ ಮಹೇಂದ್ರ ಅಂಬಾರಿ ಆನೆ

ಮೊದಲ ವರ್ಷದಲ್ಲೇ ಮಹತ್ತರ ಜವಾಬ್ದಾರಿ

ಎಂ.ಟಿ.ಯೋಗೇಶ್‌ಕುಮಾರ್



ಮೈಸೂರು, ಸೆ.23– ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ದಸರಾದಲ್ಲಿ ಹೊಸ ಆನೆ, ಮತ್ತಿಗೂಡು ಶಿಬಿರದ 39 ವರ್ಷದ ಮಹೇಂದ್ರ, ಅಂಬಾರಿ ಹೊರುವ ಜವಾಬ್ದಾರಿ ನಿಭಾಯಿಸಲಿದ್ದಾನೆ. ಆ ಮೂಲಕ ಮೈಸೂರು ದಸರಾ ಮಹೋತ್ಸವದ ಭವಿಷ್ಯದ ಅಂಬಾರಿ ಆನೆಯಾಗಿ ಹೊರಹೊಮ್ಮುವ ಭರವಸೆ ಮೂಡಿಸಿದ್ದಾನೆ.

ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿರುವ ಮಹೇಂದ್ರ ನಾಡಿನ ವಾತಾವರಣಕ್ಕೆ ಹೊಂದಿಕೊಂಡಿರುವುದಲ್ಲದೇ, ಮಾವುತರು, ಕಾವಾಡಿಗಳ ಸಂಪೂರ್ಣ ಹಿಡಿತದಲ್ಲಿರುವುದು ಮಾತ್ರವಲ್ಲದೆ, ತಾಲೀಮಿನ ವೇಳೆ ಆತ ತೋರಿದ ಪ್ರಬುದ್ಧ ನಡೆ ಯಿಂದಾಗಿ ಮೊದಲ ವರ್ಷದಲ್ಲೇ ಮಹತ್ತರವಾದ ಜವಾಬ್ದಾರಿ ಆತನ ಹೆಗಲಿಗೇರಿದೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಗೆ ಒಳಪಡುವ ಮತ್ತಿಗೂಡು ಆನೆ ಶಿಬಿರದಲ್ಲಿ ವಾಸ್ತವ್ಯ ಹೂಡಿರುವ ಮಹೇಂದ್ರ ದಸರಾ ಗಜಪಡೆಯ ಮೊದಲ ತಂಡದಲ್ಲಿಯೇ ಸ್ಥಾನ ಗಿಟ್ಟಿಸಿಕೊಂಡು, ಆ.7ರಂದು ಗಜಪಯಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮೈಸೂರಿಗೆ ಆಗಮಿಸಿದ್ದ. ಮೈಸೂರಿಗೆ ಬಂದಾಗ 4250 ಕೆಜಿ ಇದ್ದ ಮಹೇಂದ್ರ, ಪೌಷ್ಠಿಕ ಆಹಾರದ ಆರೈಕೆಯಿಂದ ಒಂದೇ ತಿಂಗಳಲ್ಲಿ 200 ಕೆಜಿ ತೂಕ ಹೆಚ್ಚಿಸಿಕೊಂಡಿದ್ದ. ತಾಲೀಮಿನ ವೇಳೆ ಮರಳು ಮೂಟೆ, ಮರದ ಅಂಬಾರಿ ಹೊತ್ತು ಸಾಗಿತ್ತು. ಸುಮಾರು 750 ಕೆಜಿ ಭಾರ ಹೊತ್ತು ಸರಾಗವಾಗಿ ಸಾಗಿದ್ದ ಮಹೇಂದ್ರ ಅರಣ್ಯ ಇಲಾಖೆಯ ಅಧಿಕಾರಿಗಳಲ್ಲಿ ವಿಶ್ವಾಸ ಮೂಡಿಸಿತ್ತು. ವಾಹನ ಸಂಚಾರ, ಮಬ್ಬುಗತ್ತಲು, ಜನರ ಓಡಾಟದ ನಡುವೆಯೂ ಭಾರ ಹೊತ್ತು ಸಂಯಮದಿಂದ ಹೆಜ್ಜೆ ಹಾಕಿದ್ದ ಮಹೇಂದ್ರ ಈ ಬಾರಿ ಶ್ರೀರಂಗಪಟ್ಟಣದ ದಸರಾದಲ್ಲಿ ಅಂಬಾರಿ ಹೊರುವ ಕಾಯಕ ನಿರ್ವಹಿಸಲಿದ್ದಾನೆ.

ಮೂರು ವರ್ಷದ ಹಿಂದಿನವರೆಗೂ ಅಭಿಮನ್ಯು ಶ್ರೀರಂಗಪಟ್ಟಣದ ದಸರೆಯಲ್ಲಿ ಅಂಬಾರಿ ಹೊರುತ್ತಿದ್ದ. ಮೈಸೂರು ದಸರೆಯಲ್ಲಿ ಕಳೆದ ಎರಡು ವರ್ಷಗಳಿಂದ ಅಭಿಮನ್ಯು ಅಂಬಾರಿ ಹೊರುವ ಜವಾಬ್ದಾರಿ ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ದಸರೆಯಲ್ಲಿ ಅಂಬಾರಿ ಹೊರುವ ಆನೆಯಾಗಿ ಕಳೆದ ವರ್ಷ ▶ 9ನೇ ಪುಟಕ್ಕೆ



ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಅವರು ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಮತ್ತು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ, ದಸರಾ ವಸ್ತು ಪ್ರದರ್ಶನದ ಉದ್ಘಾಟನಾ ಸಮಾರಂಭಕ್ಕೆ ಆಗಮಿಸುವಂತೆ ಆತ್ಮೀಯವಾಗಿ ಸ್ವಾಗತಿಸಿದರು.

'ಪೇಸಿಎಂ' ಪೋಸ್ಟರ್ ಅಂಟಿಸಿದ ಸಿದ್ದರಾಮಯ್ಯ, ಡಿಕೆಶಿ ಪೊಲೀಸ್ ವಶಕ್ಕೆ

ಬೆಂಗಳೂರು, ಸೆ.23– ಬಿಜೆಪಿ ಸರ್ಕಾರದ 40 ಪರ್ಸೆಂಟ್ ಕಮಿಷನ್ ಭ್ರಷ್ಟಾಚಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಕಾಂಗ್ರೆಸ್ ನಾಯಕರು ರೇಸ್ ಕೋರ್ಸ್ ರಸ್ತೆಯಲ್ಲಿ 'ಪೇಸಿಎಂ' ಪೋಸ್ಟರ್ ಅಂಟಿಸಿ ಪ್ರತಿಭಟನೆ ನಡೆಸಿದರು. ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲಾ, ರಾಜ್ಯ ಸರ್ಕಾರದ ವಿರುದ್ಧ ಡಿಜಿಟಲ್ ಹೋರಾಟದಲ್ಲಿ ತೊಡಗಿದ್ದ ಕಾಂಗ್ರೆಸ್ ಸದಸ್ಯರ ಬಂಧನ



ಖಂಡಿಸಿ ರೇಸ್‌ಕೋರ್ಸ್ ರಸ್ತೆಯಲ್ಲಿ ಪೇಸಿಎಂ ಪೋಸ್ಟರ್ ಅಂಟಿಸಿ ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ನಾಯಕರನ್ನು ಪೊಲೀಸರು ವಶಕ್ಕೆ ಪಡೆದು, ಬಿಡುಗಡೆ ಮಾಡಿದರು.

10 ಸಾವಿರ ಕೋಟಿ ಬಿಎಂಎಸ್ ಟ್ರಸ್ಟ್ ಹಗರಣ: ಪ್ರಧಾನಿಗೆ ಪತ್ರ

● ಮಾಜಿ ಸಿಎಂ ಕುಮಾರಸ್ವಾಮಿ ಘೋಷಣೆ ● ಉನ್ನತ ಶಿಕ್ಷಣ ಸಚಿವ ಈ ಹಗರಣದಲ್ಲಿ ಭಾರೀ ಕಿಕ್‌ಬ್ಯಾಕ್ ಪಡೆದಿರುವ ಆರೋಪ

ಬೆಂಗಳೂರು, ಸೆ. 23 (ಕೆಎಂಶಿ)– ಬಿಎಂಎಸ್ ಟ್ರಸ್ಟ್ ಪ್ರಕರಣ ಕುರಿತು ರಾಜ್ಯ ಸರ್ಕಾರ ಯಾವುದೇ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಕೆಲವೇ ದಿನಗಳಲ್ಲಿ ನಾನೇ ಪ್ರಧಾನಿ ನರೇಂದ್ರ ಮೋದಿ ಅವರಿಗೆ ದಾಖಲೆ ಸಮೇತ ಪತ್ರ ಬರೆಯುವುದಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಏಳು ವರ್ಷಗಳಿಂದ ಪ್ರಧಾನಿ ಮೋದಿ ಅವರು ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತೇನೆಂದು ಹೇಳುತ್ತಲೇ ಬಂದಿದ್ದಾರೆ. ಅವರದೇ ಪಕ್ಷ ರಾಜ್ಯದಲ್ಲಿ ಅಧಿಕಾರದಲ್ಲಿದೆ. ಅವರ ಸಚಿವರೊಬ್ಬರ ಅಕ್ರಮ ಕುರಿತಂತೆ ನಾನೇ ದಾಖಲೆಗಳ ಸಮೇತ ಪತ್ರ ಬರೆಯುತ್ತೇನೆ, ನೋಡೋಣ ಏನು ಕ್ರಮ ಕೈಗೊಳ್ಳುತ್ತಾರೋ? ಎಂದರು.

ಕೆಂಪುಕೋಟೆ ಮೇಲೆ ನಿಂತು ಭ್ರಷ್ಟಾಚಾರ ನಿರ್ಮೂಲನೆ ಆಗಬೇಕೆಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳುತ್ತಾರೆ. ನಾನು ದಾಖಲೆಗಳ ಸಮೇತ ಅವರಿಗೆ ಪತ್ರ ಕಳುಹಿಸುವೆ. ಇದು ಭಾರೀ ದೊಡ್ಡ ಮೊತ್ತದ ಹಗರಣವಾಗಿದೆ. ಸರ್ಕಾರಕ್ಕೆ ತನಿಖೆ ನಡೆಸಲು ಧೈರ್ಯವಿಲ್ಲ. ಭ್ರಷ್ಟಾಚಾರದಿಂದಲೇ ಸರ್ಕಾರದ ಬುಡಕ್ಕೆ ಬರುತ್ತದೆ ಎಂಬ ಕಾರಣಕ್ಕಾಗಿಯೇ ತನಿಖೆಗೆ ಒಪ್ಪುತ್ತಿಲ್ಲ ಎಂದು ಹೆಚ್.ಡಿ.ಕುಮಾರಸ್ವಾಮಿ ದೂರಿದರು.

ಅಕ್ರಮ ನಡೆದಿದೆ ಎಂದು ಸರ್ಕಾರಕ್ಕೂ ಗೊತ್ತಿದೆ. ಆದರೆ, ಕೆಲವು ಕಾಣದ ಕೈಗಳು ಕಟ್ಟಿಹಾಕಲು ತೆರೆಮರೆಯಲ್ಲಿ ಪ್ರಯತ್ನ ನಡೆಸಿವೆ. ಇದನ್ನು ಯಾರು ಮಾಡಿದ್ದಾರೆ ಎಂಬುದು ರಾಜ್ಯದ ಜನತೆಗೆ ಗೊತ್ತಾಗಬೇಕು. ಏನು ಮಾಡಿಲ್ಲವೆಂದರೆ ತನಿಖೆ ನಡೆಸಲು ವಿನಾ ಮೇಷ ಏಕೆ ಎಂದು ಪ್ರಶ್ನೆ ಮಾಡಿದರು.



ಸಾರ್ವಜನಿಕರು ಸೇರಿದ ಟ್ರಸ್ಟ್ ಅನ್ನು ಸಚಿವರೊಬ್ಬರು ತಮ್ಮ ಕುಟುಂಬಕ್ಕೆ ಪರಭಾರೆ ಮಾಡಿಕೊಳ್ಳಲು ಹೊರಟಿದ್ದಾರೆ. ಇದನ್ನು ಸದನದಲ್ಲಿ ನಾನು ದಾಖಲೆಗಳ ಸಮೇತ ಬಿಚ್ಚಿಟ್ಟಿದ್ದೇನೆ. ಆದರೂ, ಸಚಿವರು ಉಡಾಫೆ ಉತ್ತರ ಕೊಟ್ಟು ಏನೂ ಆಗಿಲ್ಲವೆಂದು ಸಮರ್ಥಿಸಿಕೊಳ್ಳುತ್ತಿದ್ದಾರೆ. ಸರ್ಕಾರ ಕೂಡ ಗೊತ್ತಿದ್ದರೂ, ಗೊತ್ತಿಲ್ಲದಂತೆ ನಾಟಕ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಚಿವರು ದೊಡ್ಡಮಟ್ಟದ ಕಿಕ್ ಬ್ಯಾಕ್ ಪಡೆದಿದ್ದಾರೆ. ನಾನು ಸದನದಲ್ಲಿ ಈ ಮಾತು ಹೇಳಿದಾಗ ಬಿಜೆಪಿ ಪಕ್ಷದ ಯಾವ ಶಾಸಕರಾಗಲೀ, ಸಚಿವರಾಗಲೀ ವಿರೋಧ ವ್ಯಕ್ತಪಡಿಸಲಿಲ್ಲ. ಇದೊಂದು ರೀತಿ ಕುರುಕ್ಷೇತ್ರದ ಘಟನೆ ನೆನಪಾಗುತ್ತಿದೆ ಎಂದು ವ್ಯಂಗ್ಯವಾಡಿದರು.

ಸಚಿವ ಡಾ.ಅಶ್ವತ್ಥನಾರಾಯಣ ಸೂಚನೆ ಮೇರೆಗೆ ಅನುಮೋದನೆ ಕೊಟ್ಟಿದ್ದೆ ಎಂದು ಮಾಜಿ ಸಿಎಂ ಎಸ್. ಯಡಿಯೂರಪ್ಪ ಹೇಳಿದ್ದಾರೆ. ತನಿಖೆ ನಡೆದರೆ ಸತ್ಯಾಂಶ ಹೊರಬರುತ್ತದೆ. ಲೋಕಾಯುಕ್ತ ಸಂಸ್ಥೆಗೆ ದೂರು ನೀಡುವ ಕುರಿತು ಕಾನೂನು ತಜ್ಞರ ಸಲಹೆ ಪಡೆದು ತೀರ್ಮಾನ ಮಾಡುತ್ತೇನೆ. ನಾನು ಈ ಅಶ್ವತ್ಥನಾರಾಯಣ ವಿರುದ್ಧ ಹೋರಾಟ ಮಾಡುವುದಿಲ್ಲ. ಸರ್ಕಾರದ ವಿರುದ್ಧವೂ ನನ್ನ ಹೋರಾಟ ಮುಂದುವರೆಯಲಿದೆ ಎಂದರು.

ಇದಕ್ಕೂ ಮುನ್ನ ಬಿಎಂಎಸ್ ಟ್ರಸ್ಟ್‌ನಲ್ಲಿ ಅಕ್ರಮಗಳು ನಡೆದಿದ್ದು, ಉನ್ನತ ಮಟ್ಟದ ತನಿಖೆಯಾಗಬೇಕೆಂದು ಆಗ್ರಹಿಸಿ ನಿನ್ನೆಯಿಂದ ಆರಂಭಿಸಿರುವ ಧರಣಿಯನ್ನು ಜೆಡಿಎಸ್ ಇಂದು ವಿಧಾನಸೌಧದಲ್ಲಿ ಮುಂದುವರೆಸಿತು.

ಇಂದು ಬೆಳಗ್ಗೆ ಸದನ ಸಮಾವೇಶಗೊಂಡ ಕೂಡಲೇ ಜೆಡಿಎಸ್ ಶಾಸಕರು ಸಭಾಧ್ಯಕ್ಷರ ಪೀಠದ ಮುಂದಿನ ಬಾವಿಗಿಳಿದು ಧರಣಿ ಮುಂದುವರೆಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಲಾರಂಭಿಸಿದರು. ಸದನದಲ್ಲಿ ಗದ್ದಲದ ವಾತಾವರಣ ಉಂಟಾಗಿದ್ದರ ಹಿನ್ನೆಲೆಯಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಸಲಹೆಯಂತೆ ಸದನದ ಕಾರ್ಯ ಕಲಾಪಗಳನ್ನು 10 ನಿಮಿಷ ಮುಂದೂಡಿದರು. ಆಗ ಎಚ್.ಡಿ.ಕುಮಾರಸ್ವಾಮಿ, ನಿಯಮ 69ರ ಅಡಿ ಬಿಎಂಎಸ್ ಟ್ರಸ್ಟ್ ಬಗ್ಗೆ ಎತ್ತಿರುವ ಪ್ರಶ್ನೆಗಳಿಗೆ ಸರ್ಕಾರ ಉತ್ತರ ಕೊಟ್ಟಿಲ್ಲ. ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡಲಾಗಿತ್ತು. ಸರ್ಕಾರ ಟ್ರಸ್ಟ್ ವಿಚಾರದಲ್ಲಿ ಸರಿಯಾದ ನಿರ್ಣಯ ಮಾಡದೆ ಎಡವಿದೆ. ಸರ್ಕಾರ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಲಿಲ್ಲ ಎಂದು ಆರೋಪಿಸಿದರು. ಈ ನಡುವೆ ಮಧ್ಯ ಪ್ರವೇಶಿಸಿದ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ, ಶಿಕ್ಷಣ ಸಚಿವರು 7 ಸಾವಿರ ಕಡತಗಳನ್ನು 10 ನಿಮಿಷದಲ್ಲಿ ವಿಲೇವಾರಿ ಮಾಡಿದ್ದಾಗಿ ಹೇಳಿದ್ದಾರೆ. ಶಿಕ್ಷಣ ಇಲಾಖೆಯಲ್ಲಿ ಲೂಟಿಯಾಗಿ ರುವುದನ್ನು ದಾಖಲೆ ಸಹಿತ ಒದಗಿಸುತ್ತೇನೆ. ಇಲ್ಲದಿದ್ದರೆ ಈ ಸ್ಥಾನ ಬಿಟ್ಟು ಹೋಗುತ್ತೇನೆ ಎಂದು ಗುಡುಗಿದರು. ನಾವು ಒದಗಿಸುವ ದಾಖಲೆ ಬಗ್ಗೆ ತನಿಖೆ ಮಾಡಬೇಕೆಂದು ಆಗ್ರಹಿಸಿ, ಟ್ರಸ್ಟ್ ವಿಚಾರ ಕೇಂದ್ರ ಸರ್ಕಾರದ ಅಧೀನಕ್ಕೆ ಬರಲಿದೆ. ಹೀಗಾಗಿ ಸಿಬಿಐ ತನಿಖೆಗೆ ಕೊಡಿ ಎಂದು ಒತ್ತಾಯಿಸಿದರು.

ಸೆ.26ರಿಂದ ಕುಂದಣ ಕಲೆ ಪ್ರದರ್ಶನ

ಮೈಸೂರು, ಸೆ.23(ಎಂಟಿವೈ)–ದಸರಾ ಹಿನ್ನೆಲೆಯಲ್ಲಿ ಚಾಮರಾಜ ಟೆಕ್ನಿಕಲ್ ಇನ್ಸ್‌ಸ್ಟಿಟ್ಯೂಟ್ ಕಟ್ಟಡದ ಸಭಾಂಗಣದಲ್ಲಿ ಸೆ.26ರಿಂದ ಅ.2ರವರೆಗೆ ಕುಂದಣ ಕಲೆ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಕರ್ನಾಟಕ ಕರಕುಶಲ ಕರ್ಮಿಗಳ ಶ್ರೇಯೋಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ಅಶೋಕ್ ಕುಮಾರ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಸರಾ ಸಂದರ್ಭದಲ್ಲಿ ಒಂದು ಜಿಲ್ಲೆ ಒಂದು ಉತ್ಪನ್ನ ಕಾರ್ಯಕ್ರಮದಡಿಯಲ್ಲಿ ನಗರದ ಕುಂದಣ ಕಲೆ ಪ್ರದರ್ಶಿಸಲು ಅವಕಾಶ ನೀಡಲಾಗಿದೆ. ಕುಂದಣ ಕಲೆ ಕುಶಲಕರ್ಮಿಗಳು ಪ್ರಾತ್ಯಕ್ಷಿಕೆ ನೀಡಲಿದ್ದಾರೆ. ಸೆ.26ರಂದು ಬೆಳಗ್ಗೆ 11 ಗಂಟೆ ನಂತರ ಪ್ರದರ್ಶನ ಉದ್ಘಾಟನೆಗೊಳ್ಳಲಿದೆ. ಮೈಸೂರಲ್ಲಿ ಸುಮಾರು 13 ಸಾವಿರ ಕರಕುಶಲ ಕರ್ಮಿಗಳಿದ್ದರು. ಆದರೆ ಈಗ ಚೀನಾದ ಕರಕುಶಲ ವಸ್ತುಗಳ ಆಮದು, ಕೊರೊನಾ ಸಂಕಷ್ಟ ಸೇರಿದಂತೆ ವಿವಿಧ ಕಾರಣಗಳಿಂದಾಗಿ ಕೇವಲ 1250ಕ್ಕೆ ಕುಸಿದಿದೆ. ಹೀಗಾಗಿ ಸರ್ಕಾರ ಕರಕುಶಲ ವಸ್ತುಗಳ ರಫ್ತಿಗೆ ಅವಕಾಶ ನೀಡಬೇಕು. ಕುಂದಣ ಕಲೆಯಲ್ಲಿ ತರಬೇತಿ ಪಡೆಯಬಯಸುವವರಿಗೆ ಹೆಚ್ಚಿನ ಅವಧಿಗೆ ವಿಸ್ತರಿಸಿ ನೆರವು ನೀಡಬೇಕು ಎಂದರು.

ಮೈಸೂರು– ಮಂಗಳೂರು ನೇರ ರೈಲು ಸಂಪರ್ಕಕ್ಕೆ ಹೋರಾಟ ವೇದಿಕೆ ಒತ್ತಾಯ

ಮೈಸೂರು, ಸೆ.23(ಆರ್‌ಕೆಬಿ)– ಬ್ರಾಡ್‌ಗೇಜ್ ರೇಲ್ವೆ ಹಳಿ ನಿರ್ಮಾಣ ಮೊದಲು ಇದ್ದಂತೆ ಈಗಲೂ ಮೈಸೂರಿನಿಂದ ಮಂಗಳೂರಿಗೆ ನೇರ ರೈಲು ಸಂಪರ್ಕ ಕಲ್ಪಿಸಬೇಕೆಂದು ಮೈಸೂರು ರೇಲ್ವೆ ಹೋರಾಟ ವೇದಿಕೆ ಒತ್ತಾಯಿಸಿದೆ.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಮುಖ್ಯಸ್ಥ ಜಗದೀಶ್ ಹೆಬ್ಬಾರ್, ರಾಜ್ಯದ ಮುಖ್ಯ ನಗರಗಳಲ್ಲಿ ಒಂದಾಗಿರುವ ಮೈಸೂರು ಮತ್ತು ದಕ್ಷಿಣ ಕನ್ನಡದ ಮಂಗಳೂರು ಮಹಾನಗರ ವಾಣಿಜ್ಯ, ಕೈಗಾರಿಕೆಗೆ ಹೆಸರುವಾಸಿಯಾಗಿವೆ. ಕಾರವಾರವೂ ಉತ್ತರ ಕನ್ನಡದ ಮುಖ್ಯ ನಗರವಾಗಿದೆ. ಗೋವಾ ದೇಶದ ಅತ್ಯಂತ ಪ್ರಸಿದ್ಧ ಪ್ರವಾಸೀ ತಾಣಗಳಲ್ಲಿ ಒಂದಾಗಿದೆ. ಆದರೆ ಈಗ ಮೈಸೂರಿನಿಂದ ನೇರ ರೈಲು ಸಂಪರ್ಕ ಇಲ್ಲದೆ ಇವುಗಳ ನಡುವೆ ಪ್ರಯಾಣಿಸುವುದು ಸಮಸ್ಯೆಯಾಗಿದೆ ಎಂದು ಹೇಳಿದರು. ಬೆಂಗಳೂರಿನಿಂದ ರೈಲಿದ್ದರೂ ಮೈಸೂರಿನವರು ಅಲ್ಲಿಂದ ಪ್ರಯಾಣಿಸಲು ಸಾಧ್ಯವಾಗದು. ಅಲ್ಲಿಯೇ ಎಲ್ಲಾ ಸೀಟುಗಳು ಭರ್ತಿಯಾಗಿರುತ್ತವೆ. ಹೀಗಾಗಿ ಮೈಸೂರಿನಿಂದ ಮಂಗಳೂರಿಗೆ ನೇರ ರೈಲು ಸಂಪರ್ಕ ಕಲ್ಪಿಸಬೇಕೆಂದು ಅವರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಹೇಶ್ ಕಾಮತ್, ರಾಕೇಶ್ ಭಟ್, ಸುಪ್ರಭ ಭಟ್ ಉಪಸ್ಥಿತರಿದ್ದರು.

ಸೆ.30, ಕುಣಿಗಲ್‌ನಲ್ಲಿ ಕಟ್ಟಡ ನಿರ್ಮಾಣ, ಅಸಂಘಟಿತ ಕಾರ್ಮಿಕರ ಕಾರ್ಯಾಗಾರ

ಮೈಸೂರು, ಸೆ.23(ಆರ್‌ಕೆಬಿ)– ಕರ್ನಾಟಕ ಕಾರ್ಮಿಕ ಸಂಘದ ವತಿಯಿಂದ ಕಾರ್ಮಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಗಮನ ಸೆಳೆಯಲು ಸೆ.30 ರಂದು ಕುಣಿಗಲ್ ಪಟ್ಟಣದ ಜಿಕೆಬಿಎಂಎಸ್ ಶಾಲಾ ಬಯಲು ರಂಗಮಂದಿರದಲ್ಲಿ ಕಟ್ಟಡ ನಿರ್ಮಾಣ ಮತ್ತು ಅಸಂಘಟಿತ ಕಾರ್ಮಿಕರ ಸಮಾವೇಶ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಕೆ.ಎಸ್. ವೆಂಕಟಸುಬ್ಬಯ್ಯ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಚಿವರಾದ ಅರೆಬೈಲು ಶಿವರಾಮ್ ಹೆಬ್ಬಾರ್, ಬಿ.ಶ್ರೀರಾಮುಲು, ಜ್ಞಾನಪ್ರಕಾಶ ಸ್ವಾಮೀಜಿ ಇನ್ನಿತರರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದರು. ಇಂದಿನ ದಿನಬಳಕೆ ವಸ್ತುಗಳ ಬೆಲೆಯೇರಿಕೆ, ದುಬಾರಿಯಾಗಿರುವ ಕಚ್ಚಾ ವಸ್ತುಗಳು, ಕಾರ್ಮಿಕ ಇಲಾಖೆಯ ದ್ವಂದ್ವ ನೀತಿ, ಕಾರ್ಮಿಕರಿಗೆ ನೋಂದಣಿ ಮಾಡಲು ಸಿಎಸ್‌ಸಿ ಕೇಂದ್ರಗಳಲ್ಲಿ 500 ರೂ. ನಿಂದ ಸಾವಿರದವರೆಗೆ ದುಬಾರಿ ದರ ವಸೂಲಿ ಮಾಡುತ್ತಿರುವ ಬಗ್ಗೆ ಸರ್ಕಾರದ ಗಮನ ಸೆಳೆಯಲಾಗುವುದು. ಜೊತೆಗೆ ಸರ್ಕಾರದ ಸೌಲಭ್ಯಗಳನ್ನು ಶೀಘ್ರವಾಗಿ ದೊರಕಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು ಎಂದು ಹೇಳಿದರು. ಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಎಲ್.ಕೃಷ್ಣ, ಸುರೇಶ್, ರೇವಣ್ಣ ನಾಯಕ್, ಕುಮಾರಸ್ವಾಮಿ ಉಪಸ್ಥಿತರಿದ್ದರು.

ನಾಳೆ ಬಡಗುತಿಟ್ಟು ಯಕ್ಷಗಾನ ಪ್ರದರ್ಶನ

ಮೈಸೂರು,ಸೆ.23(ಆರ್‌ಕೆ)–ಬಂಟರ ಸಂಘ, ಸಂತೋಷ್ ಹೋಟೆಲು ಮಾಲೀಕ ಡಿ.ಚಂದ್ರಶೇಖರಶೆಟ್ಟಿ ಹಾಗೂ ಯಕ್ಷಗಾನ ಅಭಿಮಾನಿಗಳ ಸಹಯೋಗದೊಂದಿಗೆ ಮೈಸೂರಿನ ವಿಜಯನಗರ 3ನೇ ಹಂತದ ಆಶಾ ಪ್ರಕಾಶ್‌ಶೆಟ್ಟಿ ಬಂಟರ ಭವನದಲ್ಲಿ ಸೆ. 25ರಂದು ಸಂಜೆ 4 ಗಂಟೆಗೆ ಬಡಗುತಿಟ್ಟು ಯಕ್ಷಗಾನ ಪ್ರದರ್ಶನ ಏರ್ಪಡಿಸಲಾಗಿದೆ.

"ಗದಾಯುದ್ಧ ಮತ್ತು ಚಂದ್ರಾವಳಿ ವಿಲಾಸ" ಭಾಗದ ಯಕ್ಷಗಾನವನ್ನು ಜನ್ಸಾಲೆ X ಜಲವಳ್ಳಿ ಯಕ್ಷ ಬಳದವರು ಪ್ರದರ್ಶಿಸಲಿದ್ದು, ಭಾಗವತರಾದ ಜನ್ಸಾಲೆ ರಾಘವೇಂದ್ರ ಆಚಾರ್ಯ, ಬ್ರಹ್ಮೂರು ಶಂಕರ ಭಟ್ಟ, ಸುನೀಲ್ ಭಂಡಾರಿ ಕಡತೋಕ (ಮದ್ದಳೆ), ಸುಜನ್‌ಕುಮಾರ್ ಹಾಲಾಡಿ (ಚಂಡೆ) ಹಿಮ್ಮೇಳವಿದೆ.

ಗದಾಯುದ್ಧ ಪ್ರಸಂಗದಲ್ಲಿ ವಿದ್ಯಾಧರ ಜಲವಳ್ಳಿ, ನೀಲ್ಕೋಡು ಶಂಕರ ಹೆಗಡೆ, ಕಾರ್ತಿಕ್ ಚಿಟ್ಟಾಣಿ, ಮಂಕಿ ಈಶ್ವರ ಭಟ್, ಕಾಸರಗೋಡು, ಅಣ್ಣಪ್ಪ ಮಾಗೋಡು, ವಿನಾಯಕ ಅವರು ಪಾತ್ರಾಭಿನಯ ಮಾಡಲಿದ್ದು, ಚಂದ್ರಾವಳಿ ವಿಲಾಸದಲ್ಲಿ ಉಯದ ಹೆಗಡೆ, ಸುಬ್ರಹ್ಮಣ್ಯ ಯಲಗುಪ್ಪ, ಸುಧೀರ್ ಉಪ್ಪೂರು, ಕ್ಯಾದಿಗೆ ಮಹಾಬಲ ಹೆಗಡೆ ಅಭಿನಯಿಸಲಿದ್ದಾರೆ ಎಂದು ಡಿ.ಚಂದ್ರಶೇಖರ ಶೆಟ್ಟಿ ತಿಳಿಸಿದ್ದಾರೆ.

ನಾಳೆ ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರ

ಮೈಸೂರು, ಸೆ.23(ಆರ್‌ಕೆಬಿ)– ಸರಸ್ವತಿಪುರಂ ಕಾಮಾಕ್ಷಿ ಆಸ್ಪತ್ರೆ ರಸ್ತೆಯ ಗ್ಲೋಬಲ್ ಕಾಂಪಿಟಿಟೇಟಿವ್ ಅಕಾಡೆಮಿ ವತಿಯಿಂದ ವಿದ್ಯಾರ್ಥಿಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರ ಆಯೋಜಿಸಿದ್ದು, ವಿದ್ಯಾರ್ಥಿಗಳು ಪ್ರಯೋಜನ ಪಡೆಯಬೇಕೆಂದು ಸಂಸ್ಥಾಪಕ ಮೂರ್ತಿ ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸೆ.25ರಂದು ಪರೀಕ್ಷಾ ಸಿದ್ಧತೆ ಹಾಗೂ ಪ್ರವೇಶಾತಿ ಪರೀಕ್ಷೆ ಕುರಿತಂತೆ ಒಂದು ದಿನದ ಉಚಿತ ಕಾರ್ಯಾಗಾರ ಆಯೋಜಿಸಲಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನವೆಂಬರ್ ತಿಂಗಳಲ್ಲಿ ಸಂಸ್ಥೆ ನಡೆಸುವ ಪ್ರವೇಶಾತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಲ್ಲಿ ಪಿಸಿ, ಪಿಎಸ್‌ಐ ಮತ್ತು ಐಬಿಪಿಎಸ್ ಪರೀಕ್ಷೆಗೆ 3 ತಿಂಗಳ ಉಚಿತ ತರಬೇತಿ ಸಹ ನೀಡಲಾಗುವುದು. ಹೀಗಾಗಿ ಆಸಕ್ತರು ಹೆಚ್ಚಿನ ಮಾಹಿತಿಗೆ ದೂ. 80737 83591 ಸಂಪರ್ಕಿಸಬಹುದಾಗಿದೆ ಎಂದರು. ಸಂಸ್ಥೆಯ ರಾಜೇಶ್, ಗೌರೀಶ್ ಆರಾಧ್ಯ ಉಪಸ್ಥಿತರಿದ್ದರು.

ಕೆಆರ್ ಆಸ್ಪತ್ರೆಯಲ್ಲಿ 4 ಲಕ್ಷ ರೂ. ಮೌಲ್ಯದ ಉಪಕರಣ ಕದ್ದಿದ್ದವ ಸೆರೆ

ಮೈಸೂರು, ಸೆ. 23(ಆರ್‌ಕೆ)– ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ 4 ಲಕ್ಷ ರೂ. ಬೆಲೆಬಾಳುವ ಪ್ರೆಷರ್ ಇಂಜೆಕ್ಟರ್ ಮಾನಿಟರ್ ಟ್ಯಾಬ್ ಉಪಕರಣ ಕಳವು ಮಾಡಿದ್ದ ಆರೋಪಿಯನ್ನು ದೇವರಾಜ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದೇವರಾಜ ಮೊಹಲ್ಲಾ ನಿವಾಸಿ ಶಿವಪ್ರಸಾದ್(25) ಬಂಧಿತನಾಗಿದ್ದು, ಆತನಿಂದ ವೈದ್ಯಕೀಯ ಉಪಕರಣವನ್ನು ವಶಕ್ಕೆ ಪಡೆಯಲಾಗಿದೆ. ಕೆ.ಆರ್. ಆಸ್ಪತ್ರೆಯ ರೇಡಿಯಾಲಜಿ ವಿಭಾಗದ ಸ್ಕ್ಯಾನಿಂಗ್ ರೂಂನಲ್ಲಿ ಅಳವಡಿಸಲಾಗಿದ್ದ 4 ಲಕ್ಷ ರೂ. ಬೆಲೆಬಾಳುವ ಈ ಉಪಕರಣವನ್ನು ಸೆ.13ರಂದು ಕಳವು ಮಾಡಿ ಆತ ತಲೆಮರೆಸಿಕೊಂಡಿದ್ದ. ಪ್ರಕರಣ ದಾಖಲಿಸಿಕೊಂಡಿದ್ದ ದೇವರಾಜ ಠಾಣೆ ಇನ್ಸ್‌ಪೆಕ್ಟರ್ ದಿವಾಕರ್ ತನಿಖೆ ನಡೆಸಿ ಸೆ.16ರಂದು ಆರೋಪಿಯನ್ನು ಬಂಧಿಸಿದ್ದಾರೆ. ಈ ಬಗ್ಗೆ ಪ್ರಶಂಸೆ ಮಾಡಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ.ದಾಕ್ಷಾಯಿಣಿ, ಅತೀ ಕಡಿಮೆ ಅವಧಿಯಲ್ಲಿ ಉಪಕರಣ ಪತ್ತೆ ಮಾಡಿಕೊಟ್ಟಿರುವ ಪೊಲೀಸರಿಗೆ ಧನ್ಯವಾದ ತಿಳಿಸಿದ್ದಾರೆ.

ಗಿರಾಣಿ ವ್ಯಾಪಾರಿ ನಾಪತ್ತೆ



ಮೈಸೂರು, ಸೆ. 23– ಗಿರಾಣಿ ವ್ಯಾಪಾರಿ ನಾಪತ್ತೆಯಾಗಿರುವ ಬಗ್ಗೆ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನನ್ನ ಪತಿ ರಾಮಕೃಷ್ಣೇಗೌಡ (45) ಆಗಸ್ಟ್ 7ರ ಬೆಳಗ್ಗೆ 10.30 ಗಂಟೆಗೆ ಮನೆಯಿಂದ ಹೊರ ಹೋದವರು ವಾಪಸ್ಸಾಗಿಲ್ಲ ಎಂದು ಅವರ ಪತ್ನಿ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಇವರ ಬಗ್ಗೆ ಮಾಹಿತಿ ಇದ್ದಲ್ಲಿ ದೂರವಾಣಿ ಸಂಖ್ಯೆ: 0821–2418339, 2418115, 9686343271, 9480802239 ಮೂಲಕ ತಿಳಿಸುವಂತೆ ಕೋರಲಾಗಿದೆ.



ಮೈಸೂರು ತಾಲೂಕಿನ ಇಲವಾಲ ಹೋಬಳಿಯ ಹೊಸಕೋಟೆ ಹಾಲು ಉತ್ಪಾದಕರ ಸಂಘದ ವಾರ್ಷಿಕ ಸಭೆಯಲ್ಲಿ ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮೈಮುಲ್ ಅಧ್ಯಕ್ಷ ಪ್ರಸನ್ನ, ಮಾಜಿ ಅಧ್ಯಕ್ಷ ಹಾಗೂ ಹಾಲಿ ನಿರ್ದೇಶಕ ಕೆ.ಉಮಾಶಂಕರ್, ಲೀಲಾ ನಾಗರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ನಾಗರಾಜು, ಆರ್ಟಿಕಲ್ಚರ್ ವಿಭಾಗದ ಮಾಜಿ ಅಧ್ಯಕ್ಷ ಯದುವರ್, ಉಪವ್ಯವಸ್ಥಾಪಕ ದಿವಾಕರ್, ವಿಸ್ತರಣಾಧಿಕಾರಿ ಶಿವಕುಮಾರ್, ಸಂಘದ ಅಧ್ಯಕ್ಷ ಮಹದೇವ ಹಾಗೂ ಸಂಘದ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ನಾಳೆ ಎಸ್‌ಸಿ–ಎಸ್‌ಟಿ ನೌಕರರ ಸಂಘದಿಂದ ಪ್ರತಿಭಾ ಪುರಸ್ಕಾರ, ಪ್ರಮುಖರಿಗೆ ಸನ್ಮಾನ

ಮೈಸೂರು,ಸೆ.23(ಆರ್‌ಕೆಬಿ)–ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಜಿಲ್ಲಾ ಸಮಿತಿ ವತಿಯಿಂದ ಸೆ.25ರಂದು ಬೆಳಗ್ಗೆ 10.30 ಗಂಟೆಗೆ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರಿಗೆ ಸನ್ಮಾನ ಹಾಗೂ ಹೋರಾಟಗಾರರು, ಸಾಮಾಜಿಕ ಚಿಂತಕರನ್ನು ಅಭಿನಂದಿಸುವ ಸಮಾರಂಭ ಆಯೋಜಿಸಲಾಗಿದೆ ಎಂದು ಜಿಲ್ಲಾ ಸಮಿತಿ ಅಧ್ಯಕ್ಷ ಡಾ.ಕೆ.ಸಿದ್ದರಾಜು ತಿಳಿಸಿದರು. ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಬಾರಿ 120 ಮಂದಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುತ್ತಿದೆ. ಸಾಮಾಜಿಕ ಹೋರಾಟಗಾರರಾದ ಬೆಟ್ಟಯ್ಯಕೋಟೆ, ಚಿಕ್ಕಜವರಯ್ಯ, ಶಂಭುಲಿಂಗಸ್ವಾಮಿ, ಚೋರನಹಳ್ಳಿ ಶಿವಣ್ಣ ಅವರನ್ನು ಸಹ ಸನ್ಮಾನಿಸಲಾಗುತ್ತಿದೆ. ಅಲ್ಲದೆ, ನಿವೃತ್ತ ಅಭಿಯಂತರರಾದ ಟಿ.ಆರ್. ಶಿವರಾಮು, ರಾಜಶೇಖರ್ ಯಡಹಳ್ಳಿ, ಆರ್.ಕೆ.ರಾಜ, ರಾಮಚಂದ್ರ, ಕೃಷ್ಣಮೂರ್ತಿ ಅವರನ್ನು ಅಭಿನಂದಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ರಾಘವೇಂದ್ರ, ಗಣೇಶ್‌ಮೂರ್ತಿ, ಮಹದೇವ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.09.2022 ಶನಿವಾರ, ಮಳೆ ನಕ್ಷತ್ರ: ಉತ್ತರ 14.09.2022 ರಿಂದ 26.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ : ಪೂಷ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಶರದ್ ವಿರೇಚನ–ಪಂಚಕರ್ಮ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ಈಸ್ಟ್ :** ರೊಟೇರಿಯನ್ಸ್ ಮತ್ತು ನಾನ್ ರೊಟೇರಿಯನ್ಸ್‌ಗೆ ಜಿಲ್ಲಾ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿ. ಸ್ಥಳ: ಫ್ರೆಂಡ್ಸ್ ಸ್ಪೋರ್ಟ್ಸ್ ಜೋನ್, ಕೆ.ಸಿ. ಲೇಔಟ್, ಬೆಳಗ್ಗೆ 8.30ಕ್ಕೆ

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ :** ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿಗಳಿಗೆ ಸನ್ಮಾನ ಕಾರ್ಯಕ್ರಮ, ಅಧ್ಯಕ್ಷತೆ : ಶಾಸಕ ಎಲ್. ನಾಗೇಂದ್ರ, ಉಪಸ್ಥಿತರು : ಸಂಯೋಜನಾಧಿಕಾರಿ ಎಂ.ಬಿ. ಸುರೇಶ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪ್ರಸಾದ್, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಡಾ. ರಾಧಾ, ಗಿರೀಶ್, ಸಿ.ಜಿ. ಮುತ್ತಣ್ಣ, ಸ್ಥಳ: ರಕ್ತನಿಧಿ ಕೇಂದ್ರದ ಸಭಾಂಗಣ, ಬೆಳಗ್ಗೆ 10ಕ್ಕೆ

■ **ಜೆಎಸ್‌ಎಸ್‌ಎಸ್ ಸಿಂಹ ಸುಬ್ಬುಲಕ್ಷ್ಮೀ ಪ್ರಥಮ ದರ್ಜೆ ಕಾಲೇಜು:** ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆ, ಉದ್ಘಾಟನೆ: ಪ್ರಾಂಶುಪಾಲ ಸಿ.ಆರ್.ದಿನೇಶ್, ಅಧ್ಯಕ್ಷತೆ: ಕಾರ್ಯದರ್ಶಿ ವನಜಾ ಬಿ.ಪಂಡಿತ್, ಉಪಸ್ಥಿತರು: ಅನುಪಮ ಪಂಡಿತ್, ಡಾ.ರಾಕೇಶ್, ಭರತ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ

■ **ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ:** ಟಿ.ಎಸ್.ಸುಬ್ಬಣ್ಣನವರ 31ನೇ ವರ್ಷದ ಸಂಸ್ಮರಣೆ, ಉಪಸ್ಥಿತರು: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಉದ್ಘಾಟನೆ: ಉದ್ಯಮಿ ಆರ್.ಗುರು, ಅಧ್ಯಕ್ಷತೆ: ಶಾಸಕ ಸಿ.ಎಸ್.ನಿರಂಜನ್‌ಕುಮಾರ್, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಶಾಸಕ ಎಸ್.ಎ.ರಾಮದಾಸ್ ಸ್ಥಳ: ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ, ವಿದ್ಯಾರಣ್ಯಪುರಂ, ಬೆಳಗ್ಗೆ 10ಕ್ಕೆ

■ **ನಿಸರ್ಗ ಟ್ರಸ್ಟ್:** ಸಾವಯವ ರೈತರ ಸಂತೆ, ಸ್ಥಳ: ನಿಸರ್ಗ ಟ್ರಸ್ಟ್, ಕುವೆಂಪುನಗರ, ಬೆಳಗ್ಗೆ 10 ರಿಂದ.

■ **ವೀರನಗೆರೆ ಮೊಹಲ್ಲಾದ ನಾಯಕರ ಪಡೆ:** ಪಾಳೆಯಗಾರರ ವೀರಸೇನಾನಿಗಳ ಸ್ಮರಣೋತ್ಸವದ ಅಂಗವಾಗಿ ವೀರನಗೆರೆಯ ಶ್ರೀ ಮಹದೇವಮ್ಮ ದೇವಸ್ಥಾನ ಆವರಣದಲ್ಲಿ ಪಾಳೆಯಗಾರರ ವೀರಸೇನಾನಿಗಳ ವೀರಗಲ್ಲುಗಳಿಗೆ ಪುಷ್ಪನಮನ, ಬೆಳಗ್ಗೆ 10ಕ್ಕೆ

■ **ವಿದ್ಯಾವರ್ಧಕ ಕಾನೂನು ಕಾಲೇಜು :** ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಹುಬ್ಬಳ್ಳಿ ಕಾನೂನು ಯೂನಿವರ್ಸಿಟಿ ಕುಲಪತಿ ಪ್ರೊ. ಸಿ. ಬಸವರಾಜು, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಶ್ರೀ ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳು:** ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ 107ನೇ ಜಯಂತಿ ಮಹೋತ್ಸವ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರ ಮಠ, ಮುಖ್ಯ ಅತಿಥಿಗಳು: ಸಿಇಎಸ್‌ಇ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ, ನುಡಿನಮನ: ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ.ಕೆ.ಅನಂತರಾಮು, ಸ್ಥಳ: ಎಸ್‌ಜೆಸಿಇ ಆವರಣ, ಬೆಳಗ್ಗೆ 11ಕ್ಕೆ.

■ **ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 9 ದಶಕಗಳ ರಾಜಕೀಯ ಮೀಸಲಾತಿ: ವಿದ್ಯಮಾನ, ಪರಿಣಾಮ ಮತ್ತು ಬದಲಾವಣೆಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ರಾಮದಾಸ್ ಅತವಾಳೆ, ಆಶಯ ಭಾಷಣ: ಪ್ರೊ.ವಿವೇಕ್‌ಕುಮಾರ್, ಅಧ್ಯಕ್ಷತೆ :ಮೈಸೂರು ವಿವಿ ಕುಲಪತಿ ಪ್ರೊ. ಹೇಮಂತಕುಮಾರ್, ಸ್ಥಳ: ವಿಶ್ವಜ್ಞಾನಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಎನ್‌ಎಸ್‌ಎಸ್ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ, ಕಣ್ಣಿನ ತಪಾಸಣಾ ಶಿಬಿರ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಶಿವಾನಂದ ಸಿಂದನಕೇರಾ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಡಾ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಅರ್ಬನ್ ಹಾತ್ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.

■ **ಆರ್ಟ್ ಆಫ್ ಲಿವಿಂಗ್ :** ಜೀವನ ಕಲೆ ಆನಂದ ಅನುಭೂತಿ ಶಿಬಿರ, ಸ್ಥಳ: ಆರ್ಟ್ ಆಫ್ ಲಿವಿಂಗ್, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6 ರಿಂದ, ಮಧ್ಯಾಹ್ನ 10ರಿಂದ, ಮಧ್ಯಾಹ್ನ 3 ರಿಂದ.

■ **ಮಾದಿಗ ಸಂಘಟನೆಗಳ ಒಕ್ಕೂಟ:** ನ್ಯಾ.ಎ.ಜೆ.ಸದಾಶಿವ ಆಯೋಗದ ವರದಿ ಕುರಿತು ಚಿಂತನ–ಮಂಥನ ಕಾರ್ಯಕ್ರಮ, ಸ್ಥಳ: ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಮಧ್ಯಾಹ್ನ 2ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ, ಶ್ರವಣಬೆಳಗೊಳ :** ರಾಜ್ಯ ಮಟ್ಟದ ಮೂರು ದಿನಗಳ ಕಾರ್ಯಾಗಾರದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷೆ ಡಾ. ವಿಜಯ ಕುಮಾರಿ ಕರಿಕಲ್, ಸಮಾರೋಪ ಭಾಷಣ: ಹಿರಿಯ ಸಂಸ್ಕೃತ ವಿದ್ವಾಂಸ ಡಾ. ಹೆಚ್.ವಿ. ನಾಗರಾಜರಾವ್, ಸ್ಥಳ: ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ಮೈಸೂರು ವಿವಿ., ಮಧ್ಯಾಹ್ನ 3.30 ರಿಂದ.

■ **ಶ್ರೀ ಗಾಯತ್ರಿ ಎಜುಕೇಷನಲ್ ಕಲ್ಚರಲ್ ಮತ್ತು ಚಾರಿಟಬಲ್ ಟ್ರಸ್ಟ್ :** ಪ್ರತಿಭಾ ಪುರಸ್ಕಾರ ವಿತರಣೆ : ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ ಉಪನಿರ್ದೇಶಕ ರಘುನಂದನ್, ಅಧ್ಯಕ್ಷತೆ : ಗೀತಾ ಶಿಶು ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ವನಜಾ ಬಿ. ಪಂಡಿತ್, ಉಪಸ್ಥಿತರು : ಬಿಜೆಪಿ ನಗರ ಅಧ್ಯಕ್ಷ ಟಿ.ಎಸ್. ಶ್ರೀವತ್ಸ, ಉಪಮೇಯರ್ ಜಿ. ರೂಪಾ, ಸ್ಥಳ: ಗೀತಾ ಶಿಶು ಶಿಕ್ಷಣ ಸಂಸ್ಥೆ, ಸಿದ್ದಾರ್ಥನಗರ, ಸಂಜೆ 5ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಶ್ರೀ ವ್ಯಾಸತೀರ್ಥಾಚಾರ್ ಅವರಿಂದ ಜಗನ್ನಾಥ ದಾಸರ ವಿರಚಿತ ಕೃತಿ 'ಫಲವಿದು ಬಾಳ್ವುದಕೆ' ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.40 ಹಾಡು ಹೇಳಿದ ಕಥೆ–ಲೇಖನ ಡಾ.ಡಿ.ಸತೀಶ್ಚಂದ್ರ, 6.50 ರೈತರಿಗೆ ಸಲಹೆ, 9.00 ಚಿತ್ರಗೀತೆ, 10.00 ಕೋವಿಲಡಿ ಆರ್.ಕಲಾ–ಹಾಡುಗಾರಿಕೆ, 11.00 ಅಮೃತ ಸ್ವಾತಂತ್ರ್ಯ ಮಹೋತ್ಸವದ ವಿಶೇಷ ಸರಣಿ "ಸ್ವರಾಜ್"–ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಕಥೆ **ಮಧ್ಯಾಹ್ನ:** 12.45 ಜನಪದ ಸಂಗೀತ–ನರಗನಹಳ್ಳಿ ಮಾಯಮ್ಮ ಮತ್ತು ತಂಡ, 1.20 ಭಾವಗೀತೆ, 3.30 ಮಕ್ಕಳ ಮಂಟಪ–"ನಂದಗೋಕುಲ", ಪ್ರಸ್ತುತಿ–ಕೆ.ಬಿ.ಮೀನಾ, 4.30 ನೆನಪಿನಂಗಳ–ಹಿರಿಯ ಸಂಗೀತ ಕಲಾವಿದ ಆರ್.ಕೆ.ಶ್ರೀಕಂಠನ್ ಅವರೊಂದಿಗೆ ಜಿ.ರಾಜಲಕ್ಷ್ಮಿ ಶ್ರೀಧರ್ ನಡೆಸಿದ್ದ ಸಂವಾದ, 6.50 ಕೃಷಿರಂಗ–ಕಿಸಾನ್‌ವಾಣಿ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಲಾಕ್‌ಡೌನ್ ಕಥಾ ನಾಟಕ "ಸುರುಚಿಯ ಮೇಷ್ಟ್ರು", ಮೂಲಕಥೆ– ಸುರೇಂದ್ರನಾಥ್ ಸಾತ್ವಿಕ್, ಬಾನುಲಿ ರೂಪ–ಎನ್.ನಾಗಚಂದ್ರ, 9.15 ಚಳುವಳಿ ಇಲ್ಲದ ಸಾಹಿತ್ಯ, ಪ್ರೊ.ಎಲ್.ಪ್ರೇಮಶೇಖರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ದ್ರುವ್ ಬೇಡಿ–ಸಿತಾರ್ ವಾದನ, ರಮೇಶ್‌ಕುಮಾರ್ ಮಲ್ಲಿಕ್– ಫಖವಾಜ್, 11.00 ಸವಿನೆನಪು

■ **ಬಿಇಎಂಎಲ್ ಎಸ್‌ಸಿ/ಎಸ್‌ಟಿ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ :** ಡಾ. ಬಿ.ಆರ್. ಅಂಬೇಡ್ಕರ್ 131 ಜನ್ಮ ದಿನಾಚರಣೆ, ಉದ್ಘಾಟನೆ :ಬಿಇಎಂಎಲ್ ವ್ಯವಸ್ಥಾಪಕ ನಿರ್ದೇಶಕ ಅಮಿತ್ ಬ್ಯಾನರ್ಜಿ, ಗೌರವ ಅತಿಥಿಗಳು : ನಿರ್ದೇಶಕ ಎಂ.ವಿ. ರಾಜಶೇಖರ್, ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ನಿರ್ದೇಶಕರಾದ ಅಜಿತ್ ಕುಮಾರ್ ಶ್ರೀವಾತ್ಸವ್, ಅನಿಜ್ ಜೇರತ್, ಅತಿಥಿಗಳು : ಚನ್ನಪ್ಪ ದ್ಯಾನಪ್ಪ ಮಾದಾರ, ಅಧ್ಯಕ್ಷತೆ : ಬಿಇಎಂಎಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಆರ್. ರಾಧಾಕೃಷ್ಣ, ಸ್ಥಳ: ಲಲಿತಕಲಾ ರಂಗಮಂದಿರ, ಮಾನಸಗಂಗೋತ್ರಿ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಶಿವಕಾಂತಾನಂದ ಅವರಿಂದ ಸ್ವಾಮಿ ವಿವೇಕಾನಂದರ ಜೀವನದಲ್ಲಿ ಮಾಯವತಿ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವಿದ್ವಾನ್ ರಾಕೇಶ್ ಸುಧೀರ್ ಅವರಿಂದ ವೇಣುವಾದನ, ವಿದ್ವಾನ್ ಅಮೋಘ್ ನಡದೂರ್–ಪಿಟೀಲು, ವಿದ್ವಾನ್ ಪಿ. ನಟರಾಜ್–ಮೃದಂಗ, ವಿದ್ವಾನ್ ಶ್ರೀನಿಧಿ ಆರ್. ಕೌಂಡಿನ್ಯ–ಘಟ, ಸ್ಥಳ: ಶ್ರೀರಾಮಮಂದಿರ, ಜಯನಗರ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್ :** ಜ್ಞಾನ ಯಜ್ಞ, ಸಂಜೆ 6 ರಿಂದ ಸಾಮೂಹಿಕ ವಿಷ್ಣು ಸಹಸ್ರನಾಮ, ಸಂಜೆ 6.30 ರಿಂದ ಸ್ವಾಮಿ ಗಹನಾನಂದಜೀ ಅವರಿಂದ ಶ್ರೀ ಆದಿಶಂಕರಾಚಾರ್ಯರ ಸಾಧನಾ ಪಂಚಕ ಕುರಿತು ಉಪನ್ಯಾಸ, ಸ್ಥಳ: ಶ್ರೀ ಗುರುದೇವ ದತ್ತ ಸನ್ನಿಧಿ, 148, 6ನೇ ಮುಖ್ಯ ರಸ್ತೆ, ಗೋಕುಲಂ 3ನೇ ಹಂತ.

■ **ದೇವಗೀತಂ ಚಾರಿಟಬಲ್ ಟ್ರಸ್ಟ್ :** ಶ್ರೀ ಎಚ್. ಯೋಗನರಸಿಂಹಂ 126ನೇ ಜನ್ಮ ವರ್ಷಾಚರಣೆ ಪ್ರಯುಕ್ತ ಕಲಾಸುರುಚಿ ಅವರಿಂದ ಭಾರತದ ಖ್ಯಾತ ಗಣಿತಜ್ಞ ಭಾಸ್ಕರಾಚಾರ್ಯ–2 ಜೀವನಾಧಾರಿತ ಲೀಲಾವತಿ ನಾಟಕ ಪ್ರದರ್ಶನ, ರಚನೆ : ಶಶಿಧರ ಡೋಂಗ್ರೆ, ನಿರ್ದೇಶನ : ಪ್ರೊ. ಎಚ್.ಎಸ್. ಉಮೇಶ್, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6.30ಕ್ಕೆ

ವಿವಿಧ ಸಹಕಾರ ಸಂಘಗಳ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

■ **ಭಾರತೀಯ ಜೀವ ವಿಮಾ ಪ್ರತಿನಿಧಿಗಳ ಪತ್ತಿನ ಸಹಕರ ಸಂಘ:** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಪಿ.ಎಂ.ರಾಮಚಂದ್ರ, ಸ್ಥಳ: ಸಿರ್ವಿ ಸಮಾಜ ಚಾರಿಟಬಲ್ ಟ್ರಸ್ಟ್, ಬೆಳಗ್ಗೆ 11ಕ್ಕೆ.

■ **ಆದ್ಯ ಸೌಹಾರ್ದ ಸಹಕಾರಿ ನಿಯಮಿತ:** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಡಾ. ವಿಶ್ವನಾಥಯ್ಯ, ಸ್ಥಳ: ಶ್ರೀ ಗಣಪತಿ ದೇವಸ್ಥಾನದ ಸಭಾಮಂಟಪ, ಐ–ಬ್ಲಾಕ್, ರಾಮಕೃಷ್ಣನಗರ, ಬೆಳಗ್ಗೆ 11.30ಕ್ಕೆ

■ **ಎಸ್.ಕೆ.ಬಿ. ವಿದ್ಯಾ ಸಹಾಯ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಬಿ.ಆರ್. ಸೀತಾರಾಮಯ್ಯ, ಸ್ಥಳ: ಸಂಘದ ಆವರಣ, ಶ್ರೀ ಸರಸ್ವತಿ ನಿಲಯ, ಅಗ್ರಹಾರ, ಮಧ್ಯಾಹ್ನ 12ಕ್ಕೆ.

■ **ನ್ಯಾಯಾಂಗ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಸ್ಥಳ: ಸೀತಾ ರಾಘವ ಪ್ರಾರ್ಥನಾ ಮಂದಿರ, ಕಾಂತರಾಜ ಅರಸು ರಸ್ತೆ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.

■ **ನೇಕಾರರ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಸ್ಥಳ: ಶ್ರೀ ಗುಣಾಬಾಯಿ ಛತ್ರ, ಚಮಲ್ ಮಠದ ಬೀದಿ, ಕಬೀರ್ ರಸ್ತೆ, ಲಷ್ಕರ್ ಮೊಹಲ್ಲಾ, ಬೆಳಗ್ಗೆ 11ಕ್ಕೆ.

■ **ಭಾರತರತ್ನ ಡಾ. ಸರ್ ಎಂ. ವಿಶ್ವೇಶ್ವರಯ್ಯ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಜಿ.ಎಸ್. ಅಶೋಕ್‌ಕುಮಾರ್, ಸ್ಥಳ: ಪ್ರಸನ್ನ ವಿಶ್ವೇಶ್ವರ ದೇವಸ್ಥಾನ (ಮಿನಿ ಹಾಲ್), ಗೀತಾ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ಕನಕ ವಿವಿದೋದ್ದೇಶ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಜಿ.ಎನ್. ಗೋಪಾಲರಾಜು, ಸ್ಥಳ: ಸಂಘದ ಕಚೇರಿ ಆವರಣ, ಗಿರಿದರ್ಶಿನಿ ಬಡಾವಣೆ, ಬೆಳಗ್ಗೆ 10ಕ್ಕೆ.

■ **ಮಾಚಿದೇವ ಸಹಕಾರ ಸಂಘ:** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಆರ್. ಮೋಹನ್, ಸ್ಥಳ: ಗಾನಭಾರತೀ, ವೀಣೆ ಶೇಷಣ್ಣ ಭವನ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ರಾಜ್ಯ ಮಟ್ಟದ ರಸ್ತೆ ಸಾರಿಗೆ ನಿಗಮಗಳ ಸೇವೆಯಲ್ಲಿರುವ ಮತ್ತು ನಿವೃತ್ತ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್.ಎಂ. ಹಂಪಯ್ಯ, ಸ್ಥಳ: ಶ್ರೀ ಗುರುದೇವಾಶ್ರಮ, ವಿದ್ಯಾರಣ್ಯಪುರಂ, ಬೆಳಗ್ಗೆ 11.30ಕ್ಕೆ.

■ **ಭಾಗ್ಯಲಕ್ಷ್ಮಿ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ.ಪಿ. ನಾಗಪ್ರಸಾದ್, ಮುಖ್ಯ ಅತಿಥಿಗಳು : ಶಾಸಕ ಜಿ.ಟಿ. ದೇವೇಗೌಡ, ಸ್ಥಳ: ಶ್ರೀ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರ, ಮಂಡಿ ಮೊಹಲ್ಲಾ, ಮಧ್ಯಾಹ್ನ 12ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಅಭ್ಯುದಯ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ. ದೀಪಕ್, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಲ್. ರೇವಣ್ಣಸಿದ್ದಯ್ಯ, ಸ್ಥಳ: ನವಜ್ಯೋತಿ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ರಾಜು ಕ್ಷತ್ರಿಯ ಪತ್ತಿನ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್. ಶಿವಕುಮಾರ್, ಸ್ಥಳ: ಸಂಘದ ಕಚೇರಿ ಆವರಣ, ಬೆಳಗ್ಗೆ 11ಕ್ಕೆ.

■ **ವಾಣಿಜ್ಯ ತೆರಿಗೆ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಜಿ.ವಿ.ರಾಮು, ಸ್ಥಳ: ಹೋಟೆಲ್ ಮಾಲೀಕರ ಸಂಘದ ಶ್ರೀ ಕುತ್ತೆತ್ತೂರು ಸೀತಾರಾಮರಾವ್ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ.



ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ನಾಗವಾಲ ಗ್ರಾಪಂ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ ಸನ್ಮಾನಿಸಿದರು. ಈ ವೇಳೆ ತಾಪಂ ಮಾಜಿ ಸದಸ್ಯ ಹುಯಿಲಾಳು ಮಹದೇವು, ಗ್ರಾಪಂ ಸದಸ್ಯರಾದ ಬಿ.ಕೆ.ಈಶ್ವರ್, ನಾಗವಾಲ ಮಹೇಶ್, ಸಿದ್ದನಾಯ್ಕ, ಮಂಜು, ಬೋಮ್ಮೇನಹಳ್ಳಿ ಶಿವರಾಜು, ಪಿಡಿಒ ಡಾ.ಶೋಭರಾಣಿ, ಕಾರ್ಯದರ್ಶಿ ಯಶ್ವಂತ್, ಬಿಲ್ ಕಲೆಕ್ಟರ್ ಉದಯ್, ಯಜಮಾನ್ ಡೈರಿ ಕುಮಾರ್, ಶನಿವಾರನಾಯಕ ಇನ್ನಿತರರಿದ್ದರು.

ಹಿರಿಯ ನಾಗರಿಕರಿಗೆ ವೈದ್ಯಕೀಯ ತಪಾಸಣಾ ಶಿಬಿರ

ಮೈಸೂರು, ಸೆ.23–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಮತ್ತು ಹಿರಿಯ ನಾಗರಿಕ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ವಿಕಲಚೇತನ ಕಲ್ಯಾಣಾಧಿಕಾರಿಗಳ ಕಚೇರಿ ವತಿಯಿಂದ ವಿಶ್ವ ಹಿರಿಯ ನಾಗರಿಕ ದಿನಾಚರಣೆಯ ಪ್ರಯುಕ್ತ ಹಿರಿಯ ನಾಗರೀಕರಿಗಾಗಿ ವೈದ್ಯಕೀಯ ತಪಾಸಣಾ ಶಿಬಿರವನ್ನು ಕೆ.ಆರ್.ಎಸ್.ರಸ್ತೆಯಲ್ಲಿರುವ ಜಿಲ್ಲಾ ಆಸ್ಪತ್ರೆಯಲ್ಲಿ ಸೆ.28ರಂದು ಬೆಳಿಗ್ಗೆ 9:00 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ತಿಲಕ್‌ನಗರದ ಪುಲಿಕೇಶಿ ರಸ್ತೆಯಲ್ಲಿರುವ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿಯನ್ನು ಅಥವಾ ದೂರವಾಣಿ ಸಂಖ್ಯೆ: 0821–2490333 ಅನ್ನು ಸಂಪರ್ಕಿಸಬಹುದು.

PUBLIC NOTICE
IN THE COURT OF THE VI ADDITIONAL CIVIL JUDGE & CJM, AT MYSURU

O.S. No. 555 / 2016

Plaintiffs: Smt. Gowramma & Ors.

V/S

Defendants: Smt. Sannamaramma & Ors.

1) Smt. Rajamma, aged @ 49 years, W/o Late Beeraiah, D/o Late Kalaiah ......8th Defendant
2) Smt. Rathna, Aged @ 43 years, W/o Sri Somegowda, D/o Late Kalaiah ....9th Defendant.

Both are having a common address at Sarkari Utthanahalli Village, Varuna Hobli, Mysuru Taluk, Mysuru District. Whereas, the above plaintiffs have preferred the above suit for partition and separate possession of their share in the Suit Schedule items. The above mentioend 8th and 9th Defendants have not received the Court summons, hence they are hereby called upon to appear before the Hon'ble Court in person or through their Counsel at 11.00 am on 26-09-2022, failing which they will be placed Ex-parte and the case will proceed without their presence.

SCHEDULE :1) The landed property bearing Sy.No. 71/3 measuring 01 acre, out of 06 acres 12 guntas situated at Sarkaari Utthanhalli Village, Varuna Hobli, Mysuru Taluk, Mysore District, bounded on: East: Varuna Nala ; West: Remaining portion of Sy. No. 71/3 ; North: Remaining Portion of Sy. No. 71/3 ; South: Land of Muddaiah.

2) The landed property bearing Sy.No. 71/3, measuring 01 acre 04 guntas out of 06 acres 12 guntas situated at Sarkaari Utthanhalli Village, Varuna Hobli, Mysore Taluk, Mysuru District, bounded on: East: Varuna Nala ; West: Land of Muddalaraiah ; North: Private land ; South: Remaining portion of Sy. No. 71/3.

3) The landed property bearing Sy.No. 71/3, measuring 01 acre, out of 06 acres 12 guntas situated at Sarkaari Utthanhalli Village, Varuna Hobli, Mysuru Taluk, Mysore District, bounded on: East: Remaining portion of Sy.No. 71/3 ; West: Land of Muddaiah ; North: Land of Muddalaraiah ; South: Land of Muddaiah.

By order of the Court

Sd/- Chief MInisterial Officer, Court of Senior Civil Judge & CJM, Mysuru.

N. Gowri Shankar, Advocate
#46, 4th Cross, 5th Phase, JTK Layout, Kuvempunagar, Mysuru
MYSORE, 16-08-2022

ಮೈಸೂರು ವಿಶ್ವವಿದ್ಯಾನಿಲಯ

Estd 1916

(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)
(ಎನ್‌ಐಆರ್‌ಎಫ್–2022: ವಿಶ್ವವಿದ್ಯಾನಿಲಯ ವರ್ಗದಲ್ಲಿ 33ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 54ನೇ ಸ್ಥಾನ)
ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ, ವಿಶ್ವವಿದ್ಯಾನಿಲಯ ಕಾರ್ಯಸೌಧ, ಕ್ರಾಫರ್ಡ್ ಭವನ, ಮೈಸೂರು–570 005

ಸಂಖ್ಯೆ: ಪವಿ.6.7/180/2011–12 ದಿನಾಂಕ 21–09–2022

ಟೆಂಡರ್ ಪ್ರಕಟಣೆ E-Procurement Portal ಮುಖಾಂತರ ಮಾತ್ರ.

ಮಾನ್ಯ ಕುಲಪತಿಯವರ ಆದೇಶದ ಮೇರೆಗೆ, ಕುಲಸಚಿವ (ಪರೀಕ್ಷಾಂಗ) ರವರು ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಮೌಲ್ಯಮಾಪನ ಕಾರ್ಯ ಪೂರ್ಣಗೊಂಡಿರುವ ಉಪಯೋಗಿಸಲಾದ ಹಳೆಯ ಉತ್ತರಪತ್ರಿಕೆಗಳನ್ನು ಯಾವ ಸ್ಥಿತಿಯಲ್ಲಿ ಇದೆಯೋ ಅದೇ ಸ್ಥಿತಿಯಲ್ಲಿಯೇ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ವಿಲೇವಾರಿ ಮಾಡಲು ಪೇಪರ್ ಮಿಲ್ಸ್ ಉದ್ದಿಮೆದಾರರು ಹಾಗೂ ಹಳೆಯ ಪೇಪರ್ ವ್ಯಾಪಾರಿಗಳಿಂದ , ಟೆಂಡರನ್ನು ಆಹ್ವಾನಿಸಲಾಗಿದೆ. ಮಾಡಲಾದ ಟೆಂಡರನ್ನು **ದಿನಾಂಕ: 12–10–2022 ಸಾಯಂಕಾಲ 5.30 ಗಂಟೆಯವರೆಗೆ,** ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರಿಗೆ ಸಲ್ಲಿಸತಕ್ಕದ್ದು ಮತ್ತು ಸ್ವೀಕರಿಸಲಾದ ಟೆಂಡರ್‌ಗಳನ್ನು **ದಿನಾಂಕ: 14–10–2022 ರಂದು ಬೆಳಿಗ್ಗೆ 11.00 ಗಂಟೆಗೆ (ರಜಾ ದಿನಗಳನ್ನು ಹೊರತುಪಡಿಸಿ) ವಿಶ್ವವಿದ್ಯಾನಿಲಯದ ಕುಲಸಚಿವ(ಪರೀಕ್ಷಾಂಗ), ಪರೀಕ್ಷಾ ವಿಭಾಗದ ಕ್ರಾಫರ್ಡ್‌ಭವನ ಇವರ ಸಮಕ್ಷಮದಲ್ಲಿ ಟೆಂಡರ್‌ನ್ನು ತೆರೆಯಲಾಗುವುದು.**

ಹೆಚ್ಚಿನ ವಿವರಗಳಿಗೆ **Web site: https://eproc.karnataka.govt.in** ನ್ನು ವೀಕ್ಷಿಸುವುದು ಅಥವಾ ದೂರವಾಣಿ ಸಂಖ್ಯೆ: **0821–2419214, 2419204,** ಅನ್ನು ಸಂಪರ್ಕಿಸುವುದು.

ಸಹಿ/–
ಕುಲಸಚಿವರು (ಪರೀಕ್ಷಾಂಗ)

ಮೈಸೂರು ಅರಮನೆ ಮಂಡಳಿ, ಮೈಸೂರು

ಕಾರ್ಯನಿರ್ವಾಹಕ ಅಧಿಕಾರಿರವರ ಕಛೇರಿ, ಮೈಸೂರು ಅರಮನೆ ಮಂಡಳಿ, ಮೈಸೂರು
ದೂರವಾಣಿ:0821–2421051 ಫ್ಯಾಕ್ಸ್:2434425, ಇಮೇಲ್: ddmysorepalace@gmail.com

ಸಂ:ಕಾನಿಅ/ಮೈಅಮಂ/ಉನಿ/ಉನಿ/ಅಡಳಿತ/2022–23 ದಿನಾಂಕ:21.09.2022

ಅಲ್ಪಾವದಿ ದರಪಟ್ಟಿ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಅರಮನೆ ಮಂಡಳಿ, ಮೈಸೂರು ಇವರಿಂದ ಆಡಳಿತ ಶಾಖೆಯ 04 ಸಂಖ್ಯೆ ದಸರಾ–2022ನೇ ಸಂಬಂಧಿತ ಕೆಲಸಗಳನ್ನು ನಿರ್ವಹಿಸುವ ಸಂಬಂಧ ಅನುಭವವಿರುವ ಅರ್ಹ ಗುತ್ತಿಗೆದಾರರು/ಏಜೆನ್ಸಿ/ಸಂಸ್ಥೆಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಅರ್ಜಿದಾರರು (1) ದರಪಟ್ಟಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕ ಮತ್ತು ಸಮಯ: 24.09.2022 ಸಂಜೆ 4.00 ಗಂಟೆಯವರೆಗೆ.** (2) ದರಪಟ್ಟಿಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **24.09.2022 ಸಂಜೆ 4.30 ನಂತರ.** ಹೆಚ್ಚಿನ ವಿವರಗಳಿಗೆ ಉಪ ನಿರ್ದೇಶಕರ ಕಛೇರಿ, ಮೈಸೂರು ಅರಮನೆ ಮಂಡಳಿ, ಮೈಸೂರುರಲ್ಲಿ ಕಛೇರಿಯ ಸಮಯದಲ್ಲಿ ಮಾಹಿತಿ ಪಡೆಯಬಹುದು.

ಸಹಿ/– ಉಪ ನಿರ್ದೇಶಕರು,
ಮೈಸೂರು ಅರಮನೆ ಮಂಡಳಿ, ಮೈಸೂರು

DIPR/MYS/KAVITA/515/22-23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಚಾಮರಾಜನಗರ ವಿಭಾಗ: ಚಾಮರಾಜನಗರ

ಸಂ: ಕರಾಸಾ/ಚಾನವಿ/ಸಂ/ವಾ/1285/2022–23 ದಿನಾಂಕ:23.09.2022

ಇ–ಟೆಂಡರ್ / ಸಂಧಾನ ಪ್ರಕಟಣೆ ಸಂ: 04/2022–23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಾಮರಾಜನಗರ ವಿಭಾಗದ ವ್ಯಾಪ್ತಿಯ ಚಾಮರಾಜನಗರ, ಟಿ.ನರಸೀಪುರ, ಗುಂಡ್ಲುಪೇಟೆ, ತೆಂಕಣಾಂಬಿ, ಹುಲ್ಲಹಳ್ಳಿ, ಸುತ್ತೂರು, ನಂಜನಗೂಡು ನೂತನ ಮತ್ತು ಹಳೆ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆ, ಕೊಠಡಿ ಮತ್ತು ತೆರೆದ ಸ್ಥಳಗಳಲ್ಲಿ ಜನರಲ್ ಸ್ಟಾಲ್ ನಡೆಸಲು ಹಾಗೂ ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಜಾಹೀರಾತು ಹೋರ್ಡಿಂಗ್ಸ್‌ಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಇ–ಟೆಂಡರ್ / ಸಂಧಾನ ಪ್ರಕಟಣೆ ಸಂ. 04/2022–23 ದಿನಾಂಕ: 23.09.2022 ಅನ್ನು ಹೊರಡಿಸಲಾಗಿದೆ.

ಶಾಶ್ವತ ಮಳಿಗೆಗಳನ್ನು ಐದು (05) ವರ್ಷಗಳ ಅವಧಿಗೆ ಮತ್ತು ತೆರೆದ ಸ್ಥಳಗಳನ್ನು ಮೂರು (3) ವರ್ಷಗಳನ್ನು ಅವಧಿಗೆ **ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ಇರುವ** ಆಧಾರದ ಮೇಲೆ ಪರವಾನಗಿಯನ್ನು ಇ–ಟೆಂಡರ್ ಮತ್ತು ಸಂಧಾನ ಮುಖಾಂತರ ನೀಡಲಾಗುವುದು. ಇ–ಟೆಂಡರ್ ಮತ್ತು ಸಂಧಾನದಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಜಿದಾರರು ಷರತ್ತು ಹಾಗೂ ನಿಬಂಧನೆಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಲು ತಿಳಿಸಿದೆ.

1) ಸಂಧಾನ ಅರ್ಜಿ ಪಡೆಯಲು ಕಡೆಯ **ದಿನಾಂಕ: 13.10.2022. ಸಮಯ: ಕಛೇರಿ ಅವಧಿ.** 2) ಸಂಧಾನ ಅರ್ಜಿ & ಇ.ಎಂ.ಡಿ ಡಿಡಿ ಸ್ವೀಕರಿಸಲು ಕಡೆಯ **ದಿನಾಂಕ: 13.10.2022 ಸಮಯ: ಕಛೇರಿ ಅವಧಿ.** 3) ಸಂಧಾನ ಸಭೆಯ **ದಿನಾಂಕ: 14.10.2022 ಸಮಯ: ಮಧ್ಯಾಹ್ನ 12.30 ಗಂಟೆಗೆ.**

1) ಇ–ಟೆಂಡರ್‌ಗಾಗಿ ಕಛೇರಿಯಲ್ಲಿ ಸಲ್ಲಿಸಬೇಕಾದ ಇ.ಎಂ.ಡಿ ಡಿಡಿ ಸಲ್ಲಿಸಲು ಕಡೆಯ **ದಿನಾಂಕ: 18.10.2022 ಸಮಯ: ಕಛೇರಿ ಅವಧಿ.** 2) ಇ–ಟೆಂಡರ್‌ಗಾಗಿ ಸರ್ಜಿ ಸಲ್ಲಿಲು ಕಡೆಯ **ದಿನಾಂಕ: 18.10.2022 ಸಮಯ: ಕಛೇರಿ ಅವಧಿ.** 3) ಇ–ಟೆಂಡರ್ ತೆರಯುವ **ದಿನಾಂಕ: 20.10.2022 ಸಮಯ ಬೆಳಗ್ಗೆ 11:00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಚಾಮರಾಜನಗರ ವಿಭಾಗ (ಸಂಚಾರ ಶಾಖೆ)ರವರನ್ನು ಸಂಪರ್ಕಿಸಲು ಕೋರಲಾಗಿದೆ. ದೂ. ಸಂ.: 7760990302, 7760990311

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ.

ವಾಸಾಸಂಇ/ವಾಪ್ರ/ಜಿಎ/2357/2022–23

ವಿಶ್ವ ಹೃದಯ ದಿನ: ನಾಳೆ ಮ್ಯಾರಥಾನ್

ಮೈಸೂರು,ಸೆ.23(ಆರ್‌ಕೆಬಿ)–ವಿಶ್ವ ಹೃದಯ ದಿನದ ಅಂಗವಾಗಿ ಕಾವೇರಿ ಹೃದಯ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಜನರಲ್ಲಿ ಹೃದಯದ ಆರೋಗ್ಯದ ಕುರಿತು ಅರಿವು ಮೂಡಿಸಲು ಸೆ.25ರಂದು ಬೆಳಗ್ಗೆ 6.30ಕ್ಕೆ ಮ್ಯಾರಥಾನ್ ಆಯೋಜಿಸಲಾಗಿದೆ ಎಂದು ಆಸ್ಪತ್ರೆಯ ಹೃದ್ರೋಗ ತಜ್ಞ ಡಾ.ರಾಜ್‌ಗೋಪಾಲ್ ತಿಳಿಸಿದರು. ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಅರಮನೆ ಉತ್ತರ ದ್ವಾರದಿಂದ ಆರಂಭವಾಗಿ ವಿವಿಧ ರಸ್ತೆಗಳಲ್ಲಿ ಸಂಚರಿಸಿ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಬಳಿ ಸಮಾರೋಪಗೊಳ್ಳಲಿದೆ. ಇದರಲ್ಲಿ ವಿವಿಧ ಕ್ಷೇತ್ರಗಳ ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ ಎಂದರು. 40ರ ನಂತರ ಕಾಣಿಸಿಕೊಳ್ಳುತ್ತಿದ್ದ ಹೃದಯ ಸಂಬಂಧೀ ಸಮಸ್ಯೆಗಳು ಇತ್ತೀಚಿನ ವರ್ಷಗಳಲ್ಲಿ 30ರ ಆಸುಪಾಸಿನಲ್ಲೇ ಕಾಣಿಸಿಕೊಳ್ಳುವುದು ಹಾಗೂ ಗ್ರಾಮೀಣರಲ್ಲೂ ಹೃದಯ ಸಂಬಂಧೀ ಸಮಸ್ಯೆ ಹೆಚ್ಚಾಗುತ್ತಿರುವುದು ಆತಂಕದ ಸಂಗತಿಯಾಗಿದೆ. ಹೀಗಾಗಿ ಕಾಲೇಜು ವ್ಯಾಸಂಗ ಮುಗಿದೊಡನೆಯೇ ಎಲ್ಲರೂ ಒಮ್ಮೆ ಇಸಿಜಿ, ಕೊಲೆಸ್ಟರಾಲ್ ಪರೀಕ್ಷೆಗೆ ಒಳಗಾಗುವುದು ಸೂಕ್ತ ಎಂದರು. ಆಸ್ಪತ್ರೆ ಅಧ್ಯಕ್ಷ ಡಾ.ಚಂದ್ರಶೇಖರ್ ಇದ್ದರು.

ನಕ್ಕರೆ ಅದೇ ಸ್ವರ್ಗ

ಅವರು : (ರೈಲು ನಿಲ್ದಾಣದಲ್ಲಿ ಒಬ್ಬರು ಎಲ್ಲರಿಗೂ ಸಿಹಿ ಹಂಚುತ್ತಿದ್ದಾಗ) ಯಾವ ಖುಷಿಗೆ ಸ್ವೀಟ್ ಹಂಚ್ತಿದೀರಾ?

ಇವರು : ಇವತ್ತು ಡೆಲ್ಲಿಯಿಂದ ಬರಬೇಕಿದ್ದ ರೈಲು ಸರಿಯಾದ ಸಮಯಕ್ಕೆ ಬಂದಿದೆ ಅದಕ್ಕೆ.

ಅವರು : ಅಯ್ಯೋ ಇದು ನಿನ್ನೆ ಬರಬೇಕಿದ್ದ ರೈಲು ಇವತ್ತು ಬಂದಿದೆ ಅಷ್ಟೇ

ಮೈಸೂರು ಮಿತ್ರ

ಶನಿವಾರ, 24 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಕೆಲವರು ಎಲ್ಲಿ ಹೋದರೂ ಸಂತೋಷ ಹರಡುತ್ತಾರೆ. ಇನ್ನು ಕೆಲವರು ಎಲ್ಲಿಗಾದರೂ ಹೋದರೆ ಸಾಕು, ಸಂತೋಷವಾಗುತ್ತೆ. – ಆಸ್ಕರ್ ವೈಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅರ್ಧ ಕಲಿತವನಿಗೆ ಆರ್ಭಟ ಹೆಚ್ಚು ಅಂದಂಗೆ

ನಿಮ್ಮ ಪತ್ರಗಳು

ದಸರಾ ನೆಪದಲ್ಲಿ ದುಂದುವೆಚ್ಚ...

ಮಾನ್ಯರೆ,

ಪ್ರಸಕ್ತ ಸಾಲಿನ ಮೈಸೂರು ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದರೂ, ಅಗತ್ಯ ಸಿದ್ಧತಾ ಕಾರ್ಯ ಕೈಗೊಳ್ಳುವಲ್ಲಿ ಜಿಲ್ಲಾಡಳಿತ ವಿಫಲವಾಗಿರುವುದು ಒಂದೆಡೆಯಾದರೆ, ಅದ್ದೂರಿ ದಸರಾ ನೆಪದಲ್ಲಿ ದುಂದುವೆಚ್ಚಕ್ಕೆ ಹಾದಿ ಮಾಡಿಕೊಡುವುದು ನಾಚಿಕೆಗೇಡಿನ ಸಂಗತಿ. ಕಳೆದ ಮೂರು ತಿಂಗಳಿಂದ ಸುರಿದ ಭಾರೀ ಮಳೆಯಿಂದ ಜಿಲ್ಲೆಯಲ್ಲಿ ನೂರಾರು ಮನೆಗಳು ಕುಸಿದಿದೆ. ಸಾವಿರಾರು ಮನೆಗಳು ಹಾನಿಗೊಳಗಾಗಿವೆ. ಮಾತ್ರವಲ್ಲ, ಬೆಳೆದ ಬೆಳೆ ಕೈಗೆ ಸಿಗದೆ ಲಕ್ಷಾಂತರ ರೂ. ನಷ್ಟವಾಗಿ ಸಾರ್ವಜನಿಕರ ಬದುಕು ಹೀನಾಯ ಸ್ಥಿತಿಗೆ ತಲುಪಿದೆ.

ನೊಂದವರ ಕಣ್ಣೀರು ಒರೆಸಿ, ಸಂಕಷ್ಟಕ್ಕೆ ನೆರವಾಗಬೇಕಾದ ಸರ್ಕಾರ ಅದ್ದೂರಿ ದಸರಾ ನೆಪದಲ್ಲಿ ಕೋಟ್ಯಾಂತರ ರೂ.ಗಳನ್ನು ವ್ಯಯಿಸುತ್ತಿರುವುದು ಸರ್ಕಾರದ ಬೇಜವಾಬ್ದಾರಿ ಆಡಳಿಕ್ಕೆ ಸಾಕ್ಷಿಯಾಗಿದೆ. ಸಾಂಸ್ಕೃತಿಕ ನಗರಿ ಎಂಬ ಖ್ಯಾತಿವೆತ್ತ ಮೈಸೂರಿನ ಮಡಿಲು ತುಂಬಿದಂತಿರುವ ನೂರಾರು ವರ್ಷಗಳ ಹಿಂದಿನ ಮರಗಿಡಗಳು, ಅವುಗಳಲ್ಲಿ ನೆಲೆಸಿರುವ ನೂರಾರು ಬಗೆಯ ಪಕ್ಷಿಸಂಕುಲಗಳು ದಸರಾ ಮಹೋತ್ಸವದ ನೆಪದಲ್ಲಿ ಹಾಕಲಾಗುತ್ತಿರುವ ಎಲ್‌ಇಡಿ ಹಾಗೂ ಇತರೆ ಮಾದರಿಯ ಬಲ್ಬ್‌ಗಳ ಬೆಳಕಿನ ಪ್ರಖರಕ್ಕೆ ಅಂಜದಂತೆ ಕ್ರಮ ತೆಗೆದುಕೊಳ್ಳಬೇಕು.

ಇನ್ನು ದಸರಾ ಹಿನ್ನೆಲೆಯಲ್ಲಿ ಕೆಲ ರಸ್ತೆಗಳಿಗಷ್ಟೇ ಡಾಂಬರು ಹಾಕುತ್ತಿರುವುದು ಒಂದೆಡೆಯಾದರೆ, ಕಳಪೆ ಕಾಮಗಾರಿ ಕಣ್ಣಿಗೆ ರಾಚುತ್ತಿದೆ. ದಸರಾ ನೆಪದಲ್ಲಿ ಕೈಗೊಂಡಿರುವ ಕಾಮಗಾರಿ ಹಣ ಲಪಟಾಯಿಸುವ ಉದ್ದೇಶದಿಂದಲೇ ಮಾಡಲಾಗುತ್ತಿದೆ ಎಂಬ ಅನುಮಾನ ಸಾರ್ವಜನಿಕವಾಗಿ ವ್ಯಕ್ತವಾಗುತ್ತಿದೆ.

ದಸರಾ ಮಹೋತ್ಸವವನ್ನು ನೆಪವಾಗಿಟ್ಟುಕೊಂಡು ಅವ್ಯವಹಾರ, ಅಕ್ರಮ ನಡೆಯುವ ಸಾಧ್ಯತೆ ದಟ್ಟವಾಗಿರುವುದರಿಂದ ಸಂಬಂಧಪಟ್ಟವರು ಈ ಬಗ್ಗೆ ನಿಗಾ ವಹಿಸಬೇಕು.

–ಕೆ.ವಿ.ಮಲ್ಲೇಶ್, ಮಾಜಿ ಸದಸ್ಯ, ಮೈಸೂರು ಮಹಾನಗರ ಪಾಲಿಕೆ.

ಗಮನ ಸೆಳೆದ ರಿಂಗ್ ರಸ್ತೆಯಲ್ಲಿ ಕಗ್ಗತ್ತಲು ಬರಹ

ಮಾನ್ಯರೇ

ದಿನಾಂಕ 21.09.2022 ರ 'ಮೈಸೂರು ಮಿತ್ರ' 3ನೇ ಪುಟದಲ್ಲಿ ಪ್ರಕಟವಾದ ಮೈಸೂರು ಜಗಮಗಿಸುತ್ತಿದೆ. ರಿಂಗ್ ರಸ್ತೆಯಲ್ಲಿ ಕಗ್ಗತ್ತಲು ಸೂಕ್ತ ಬರಹ ಗಮನ ಸೆಳೆಯಿತು.

ದಸರಾ ಬಂದಾಕ್ಷಣ ಮೈ ಕೊಡವಿ ನಿಲ್ಲುವ ಜಿಲ್ಲಾಡಳಿತ, ನಗರ ಪಾಲಿಕೆ, ಮುಡಾ ಇಂತಹ ಮುಖ್ಯ ನ್ಯೂನತೆಗಳ ಬಗ್ಗೆ ಗಮನಹರಿಸದಿರುವುದು ವಿಷಾದನೀಯ. ಎಲ್ಲಾ ಪಕ್ಷದ ರಾಜಕೀಯ ಮುಖಂಡರು ಪರಸ್ಪರ ಕೆಸರೆರಚಾಟ ಸ್ವಲ್ಪ ನಿಲ್ಲಿಸಿ ಇಂತಹ ಕೆಲಸಗಳ ಬಗ್ಗೆ ಆದ್ಯತೆ ನೀಡಬೇಕು.

ವಿಶ್ವ ವಿಖ್ಯಾತ ಮೈಸೂರು ದಸರಾಗೆ ದೇಶ–ವಿದೇಶಗಳಿಂದ, ನಾನಾ ರಾಜ್ಯಗಳಿಂದ ಗಣ್ಯರು, ಅತಿಥಿಗಳು, ಜನ ಸಾಮಾನ್ಯರು ಜೊತೆಗೆ ನಮ್ಮ ರಾಜ್ಯದ ಮೂಲೆ ಮೂಲೆಯಿಂದ ಹರಿದು ಬರುವ ಜನರು ಇಂತಹ ಕಪ್ಪು ಚುಕ್ಕೆಯ ಕೆಲಸದಿಂದ ಮೈಸೂರು ನಗರವನ್ನು ಹಳಿಯಬೇಕೆ? ಹಾಗೆಯೇ ಕನಕದಾಸ ನಗರ ವೃತ್ತದಿಂದ ಚಾಮುಂಡೇಶ್ವರಿ ವಿದ್ಯುತ್ ನಿಗಮದಿಂದ ಆಚಾರ್ಯ ಸಭಾ ಭವನದವರೆಗೆ ಬೀದಿ ದೀಪವಿಲ್ಲದೆ ಕತ್ತಲ ಸಾಮ್ರಾಜ್ಯವೂ ನಿಮ್ಮ ಕಣ್ಣಿಗೆ ಬೀಳಲಿ. ವಿದ್ಯುತ್ ನಿಗಮದ ಈ ದಾರಿಯ ಕಾರ್ಗತ್ತಲು ದೀಪದ ಕೆಳಗೆ ಕತ್ತಲು ನಾಣ್ಣುಡಿ ನೆನಪಿಗೆ ತಂದಿದೆ.

ಸಂಬಂಧಿಸಿದವರು ಈ ಕೂಡಲೇ ಇದನ್ನೆಲ್ಲಾ ಸರಿಪಡಿಸಿ ಸಾರ್ವಜನಿಕರಿಗೆ ಉಪಯೋಗ ಮಾಡುವುದರ ಜೊತೆ ಮೈಸೂರಿನ ಘನತೆ, ಮರ್ಯಾದೆ ಕಾಪಾಡಲಿ

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ವೋಟರ್ ಲೀಸ್ಟ್ ಅಧ್ವಾನ

ಮಾನ್ಯರೆ,

ಈ ಸಾರಿಯ ದಕ್ಷಿಣ ಪದವೀಧರ ವೋಟರ್ ಲೀಸ್ಟ್ ಅಧ್ವಾನವಾಗಿದೆ ಎಂದು ಹೇಳದೇ ವಿಧಿಯಿಲ್ಲ. ವೋಟ್ ಮಾಡುವ ಆಸೆಯಿಂದ ಸಂಬಂಧಪಟ್ಟ ಭೂತಿಗೆ ಹೋದಾಗ ಅಲ್ಲಿರುವ ಬೂತ್ ಸಿಬ್ಬಂದಿಯವರು ತದೇಕಚಿತ್ತದಿಂದ ಹುಡುಕಾಡಿದರೂ ನಮಗೆ ಬೇಕಾದ ಹೆಸರುಗಳು ನಾಪತ್ತೆಯಾಗಿವೆ. ಆ ಲೀಸ್ಟ್‌ನಲ್ಲಿ ಹೆಸರು ಸಿಗದಿದ್ದವರು ನಿರಾಸೆಯಿಂದ ಹಿಂತಿರುಗಬೇಕು. ಮುಂದಿನ ಚುನಾವಣೆಗಾದರೂ ಯಾರಿಗೂ ನಿರಾಸೆಯಾಗದಂತೆ ಸದರಿ ಲೀಸ್ಟನ್ನು ಪರಿಷ್ಕರಿಸಿ, ಲೀಸ್ಟ್‌ನಲ್ಲಿ ಎಲ್ಲಾ ಪದವೀಧರರ ಹೆಸರುಗಳು ಇರುವಂತೆ ನೋಡಿಕೊಳ್ಳಲಿ.

–ಬೇಲೂರು ದ.ಶಂ.ಪ್ರಕಾಶ್, ಮೈಸೂರು

ಪೌರಕಾರ್ಮಿಕರ ಹೋರಾಟಕ್ಕೆ ಸಂದ ಜಯ

ಮಾನ್ಯರೆ,

ರಾಜ್ಯ ಸರ್ಕಾರ ಪೌರಕಾರ್ಮಿಕರ ಸೇವೆಯನ್ನು ಖಾಯಂಗೊಳಿಸಲು ರಾಜ್ಯ ಸಂಪುಟ ಸಭೆ ಹಸಿರು ನಿಶಾನೆ ತೋರುವುದರ ಮೂಲಕ ದಸರಾ ಹಬ್ಬದ ಉಡುಗೊರೆ ನೀಡಿದೆ.ಇಂದು ಸ್ವಚ್ಛ ಭಾರತ್, ಸ್ವಚ್ಛ ನಗರ, ಸ್ವಚ್ಛ ಗ್ರಾಮ ಎಂದು ಕರೆಯಬೇಕೆಂದರೆ ಅದಕ್ಕೆ ಮೂಲ ಕಾರಣಕರ್ತರು ಪೌರಕಾರ್ಮಿಕರು. ಇಂತಹ ಪೌರ ಬಂಧುಗಳಿಗೆ ಸಿಗಬೇಕಾದ ಸ್ಥಾನಮಾನ ಇಂದಿಗೂ ಸಿಗದೆ ಇರುವುದು ಖೇದಕರ ಸಂಗತಿ.

ನಿತ್ಯ ಜನ ಜೀವನದಲ್ಲಿ ಒಂದು ಅಂಗವಾಗಿ ಕೆಲಸ ಮಾಡುವ ಇವರನ್ನು ಮುಖಂಡರ ಜನ್ಮದಿನದ ಹಾಗೂ ಹಬ್ಬ ಹರಿದಿನಗಳಲ್ಲಿ ಉಡುಗೊರೆ ಕೊಡುವುದನ್ನು ಹೊರತು ಪಡಿಸಿದರೆ ಸಹಾನುಭೂತಿ ಮತ್ತು ಅನುಕಂಪದ ಸಾಮಾಜಿಕ ಸಮಾನತೆಯಲ್ಲಿ ನೋಡುವವರು ಬಹಳ ವಿರಳ. ಇಂತಹ ಪೌರಕಾರ್ಮಿಕರಿಗೆ ಆರ್ಥಿಕ ಭದ್ರತೆಗಾಗಿ ರಾಜ್ಯ ಸರ್ಕಾರವು ಒಟ್ಟು 26,000 ಪೌರಕಾರ್ಮಿಕರ ಈ ಪೈಕಿ 11,133 ಜನರಿಗೆ ಖಾಯಂಗೊಳಿಸುವ ಮೂಲಕ ಆರ್ಥಿಕ ಭದ್ರತೆಯ ವೇತನ ಪಡೆಯುವ ಭಾಗ್ಯವನ್ನು ಸರ್ಕಾರ ಇವರಿಗೆ ನೀಡಿದ್ದಕ್ಕೆ ಅಭಿನಂದನೆಗಳು.

–ಕಂಗಾಣಿಸೋಮು ಪಿ.ಸಿ., ಕ್ಯಾತಮಾರನಹಳ್ಳಿ, ಮೈಸೂರು

ಹಸುವಿನ ಕಳೇಬರ ತೆರವುಗೊಳಿಸಿದ ಮುಡಾ

ಮೈಸೂರಿನ ಹಂಚ್ಯಾ ಸಾತಗಳ್ಳಿ ಬಿ ವಲಯ ರಾಜಕಾಲುವೆ ಬಳಿ ಯಾರೋ



ಕಿಡಿಗೇಡಿಗಳು ಸತ್ತ ಹಸುವನ್ನು ತಂದು ಹಾಕಿದ್ದಾರೆ. ಅದು ಕೊಳೆತು ದುರ್ನಾತ ಬೀರುತ್ತಿದೆ ಎಂದು 'ಮೈಸೂರು ಮಿತ್ರ' ಸೆ.23ರ ಸಂಚಿಕೆಯ ಓದುಗರ ಪತ್ರ ವಿಭಾಗದಲ್ಲಿ ಪ್ರಕಟಗೊಂಡಿದ್ದು ಸರಿಯಷ್ಟೇ. ಇದಕ್ಕೆ ಸ್ಪಂದಿಸಿದ ಮುಡಾ ಅಧಿಕಾರಿಗಳು ಇಂದು (ಶುಕ್ರವಾರ) ಬೆಳಗ್ಗೆ ಸ್ಥಳಕ್ಕೆ ಭೇಟಿ ನೀಡಿ, ಹಸುವಿನ ಕಳೇಬರವನ್ನು ತೆರವುಗೊಳಿಸಿ, ಗುಂಡಿ ತೆಗೆದು ಹೂಳುವ ಮೂಲಕ ಸುತ್ತಮುತ್ತಲಿನ ಜನರಿಗೆ ಆಗುತ್ತಿದ್ದ ಸಮಸ್ಯೆಯನ್ನು ಪರಿಹರಿಸಿದ್ದಾರೆ.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಶೇಕ್ ಹಸೀನಾ ಭೇಟಿ ಸದೃಢಗೊಂಡ ಭಾರತ–ಬಾಂಗ್ಲಾ ಸಂಬಂಧ

ಇತ್ತೀಚೆಗೆ ಬಾಂಗ್ಲಾ ದೇಶದ ಪ್ರಧಾನಿ ಶೇಕ್ ಹಸೀನಾ ಭಾರತಕ್ಕೆ ನಾಲ್ಕು ದಿನಗಳ ಅಧಿಕೃತ ಭೇಟಿ ನೀಡಿದ್ದರು. ಭಾರತ–ಬಾಂಗ್ಲಾ ನಡುವಿನ ದ್ವಿಪಕ್ಷೀಯ ಸಂಬಂಧ, ಜಾಗತಿಕ, ವಿಶೇಷವಾಗಿ ಏಷ್ಯಾ ಉಪಖಂಡದಲ್ಲಿ ಬದಲಾಗುತ್ತಿರುವ ಭೂ ರಾಜಕೀಯ ಪರಿಸ್ಥಿತಿ ಹಾಗೂ ಬಾಂಗ್ಲಾ ದೇಶವು ಭಾರತದ ಅತೀ ದೊಡ್ಡ ವ್ಯಾಪಾರ ಮತ್ತು ಅಭಿವೃದ್ಧಿಯ ಪಾಲುದಾರ ದೇಶವಾಗಿರುವ ಹಿನ್ನೆಲೆಯಲ್ಲಿ ಭಾರತ ಈ ಭೇಟಿಗೆ ವಿಶೇಷ ಮಹತ್ವ ನೀಡಿತು. ಶೇಕ್ ಹಸೀನಾ ಪ್ರಧಾನಿ ಮೋದಿಯವರೊಂದಿಗೆ ನೇರ ಮಾತುಕತೆ ನಡೆಸಿದರು. ಭಾರತದ ಛೇಂಬರ್ ಆಫ್ ಕಾಮರ್ಸ್ ಹಾಗೂ ಇತರ ವಾಣಿಜ್ಯ ಸಂಘಗಳೊಂದಿಗೆ ನಡೆದ ಸಂವಾದದಲ್ಲಿ ಬಾಂಗ್ಲಾ ದೇಶದಲ್ಲಿ ಹೂಡಿಕೆ ಮಾಡುವುದರಿಂದ ಉಭಯ ದೇಶಗಳಿಗಾಗುವ ಲಾಭಗಳ ಕುರಿತು ಶೇಕ್ ಹಸೀನಾ ವಿವರಣೆ ನೀಡಿದರು.

ಮುಂದಿನ ವರ್ಷ ಬಾಂಗ್ಲಾದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದ್ದು, ಶೇಕ್ ಹಸೀನಾ ದಾಖಲೆ ಐದನೇ ಬಾರಿ ಪ್ರಧಾನಿಯಾಗುವ ಮಹತ್ವಾಕಾಂಕ್ಷೆಯಲ್ಲಿದ್ದಾರೆ. ಇದಕ್ಕಾಗಿ ಜಾಗತಿಕ ಮಟ್ಟದಲ್ಲಿ ತಾವು ಪ್ರಭಾವಿ ನಾಯಕಿಯೆಂದು ಬಿಂಬಿಸುವ ಮೂಲಕ ದೇಶದೊಳಗೆ ತಮ್ಮ ವರ್ಚಸ್ಸನ್ನು ವೃದ್ಧಿಸಿ, ಮತ್ತೆ ಅಧಿಕಾರಕ್ಕೇರುವ ತಂತ್ರಗಾರಿಕೆ ರಚಿಸುತ್ತಿದ್ದಾರೆಂಬ ಅಭಿಪ್ರಾಯ ಬಾಂಗ್ಲಾ ದೇಶದಲ್ಲಿದೆ. ಇದಕ್ಕನುಗುಣವಾಗಿ ಭಾರತಕ್ಕೆ ಭೇಟಿ ನೀಡಿರುವ ಶೇಕ್ ಹಸೀನಾ ಮುಂದೆ ವಿಶ್ವಸಂಸ್ಥೆಯ ಮಹಾ ಅಧಿವೇಶನದಲ್ಲೂ ಭಾಗವಹಿಸಲಿದ್ದಾರೆ.

ವಿಶ್ವದ ಪ್ರಬಲ ಆರ್ಥಿಕ ಶಕ್ತಿಯಾಗುತ್ತಿರುವ ಭಾರತವನ್ನು ನಿಯಂತ್ರಿಸಲು ಚೀನಾ ಎಲ್ಲಾ ರೀತಿಯ ಯತ್ನಗಳನ್ನು ನಡೆಸುತ್ತಿದೆ. ಭಾರತದ ನೆರೆಹೊರೆಯ ದೇಶಗಳನ್ನು ಆರ್ಥಿಕ ಆಮಿಷ, ಸೇನಾ ಬೆದರಿಕೆ, ಸರಕಾರಗಳನ್ನು ಅಸ್ಥಿರಗೊಳಿಸುವಂತಹ ಧೂರ್ತ ರಾಜತಂತ್ರದ ಮೂಲಕ ತನ್ನೆಡೆ ಸೆಳೆದು ಈ ದೇಶಗಳ ಮೂಲಕ ಭಾರತವನ್ನು ಏಕಾಂಗಿಗೊಳಿಸುವ, ದುರ್ಬಲಗೊಳಿಸುವ ಯತ್ನದಲ್ಲಿದೆ. ಈ ಪರಿಸ್ಥಿತಿಯಲ್ಲಿ ಇತರ ನೆರೆ–ಹೊರೆಯ ದೇಶಗಳಿಗಿಂತ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಬಾಂಗ್ಲಾದೊಂದಿಗೆ ಬಾಂಧವ್ಯ ಉತ್ತಮಪಡಿಸುವ ಅನಿವಾರ್ಯತೆ ಭಾರತಕ್ಕೂ ಇತ್ತು. ಈ ದೃಷ್ಟಿಯಿಂದ ಹಸೀನಾರ ಭಾರತ ಭೇಟಿ ಯಶಸ್ವಿಯಾಗಿದೆ.

ಉಭಯ ದೇಶಗಳ ನಡುವೆ ರಸ್ತೆ ನಿರ್ಮಾಣ, ದೂರ ಸಂಪರ್ಕ, ಬಾಹ್ಯಾಕಾಶ, ಭದ್ರತೆ, ಹೂಡಿಕೆ, ರಸ್ತೆ ನಿರ್ಮಾಣ ಸಾಧನಗಳು, ನದಿ ನೀರು ಹಂಚಿಕೆ, ಬಾಂಗ್ಲಾ ದೇಶದ ರೈಲ್ವೆ ಸಿಬ್ಬಂದಿಗಳಿಗೆ, ನ್ಯಾಯಾಂಗ ಸಿಬ್ಬಂದಿಗಳಿಗೆ ತರಬೇತಿ ಮೊದಲಾದ ಏಳು ಕ್ಷೇತ್ರಕ್ಕೆ ಸಂಬಂಧಿಸಿದ ತಿಳುವಳಿಕಾ ಪತ್ರಗಳಿಗೆ (ಎಂಒಯು) ಸಹಿ ಹಾಕಲಾಯಿತು. ಇವುಗಳೊಂದಿಗೆ ಐದು ಪ್ರಮುಖ ಯೋಜನೆಗಳಿಗೆ ಅನುಮೋದನೆ ನೀಡಲಾಯಿತು.

ನದಿಗಳ ನೀರಿನ ಹಂಚಿಕೆ ಸಮಸ್ಯೆ

ಭಾರತ–ಬಾಂಗ್ಲಾ ನಡುವೆ 54 ನದಿಗಳು ಹರಿಯುತ್ತಿವೆ. ಈ ನದಿಗಳ ನೀರಿನ ಹಂಚಿಕೆ ಭಾರತ–ಬಾಂಗ್ಲಾ ನಡುವೆ ಸಮಸ್ಯೆಯಾಗಿ ಉಳಿದಿದೆ. 1996 ರಲ್ಲಿ ಮೂವತ್ತು ವರ್ಷಗಳ ಅವಧಿಗೆ ಆಗಿರುವ ಗಂಗಾ ನದಿ ನೀರು ಹಂಚಿಕೆ ಒಪ್ಪಂದ 2026ಕ್ಕೆ ಮುಕ್ತಾಯಗೊಳ್ಳಲಿದೆ. ಒಪ್ಪಂದದ ಪುನರ್ ಪರಿಶೀಲನೆ, ಮರು ಒಪ್ಪಂದಕ್ಕೆ ಸಂಬಂಧಿಸಿದಂತೆ ಅನಿಶ್ಚಿತತೆ ಉಂಟಾಗಿದೆ. ತೀಸ್ತಾ ನದಿ ನೀರು ಹಂಚಿಕೆಯ ಒಪ್ಪಂದವು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರ ಅಸಹಕಾರದಿಂದ ಅನುಷ್ಠಾನಗೊಂಡಿಲ್ಲ. ಹಸೀನಾ ಆಗಮನ ಪೂರ್ವ ಆಗಸ್ಟ್ 23ರಂದು ಜಂಟಿ ನದಿ ಆಯೋಗದ (ಜೆಆರ್‌ಸಿ) ಕಾರ್ಯದರ್ಶಿ ಮಟ್ಟದ ಸಭೆಗಳು ನಡೆದವು. ಆಗಸ್ಟ್ 25ರಂದು ದಿಲ್ಲಿಯಲ್ಲಿ ಉಭಯ ದೇಶಗಳ ಸಚಿವ ಮಟ್ಟದ ಸಭೆಗಳು ನಡೆದವು. ಈ ಸಭೆಗಳಲ್ಲಿ ಮಾನು, ಧರ್ಲಾ, ಖೋಪ್ವಾ, ಮುಹುರಿ ಗೋಮ್ತಿ ಹಾಗೂ ದೂದ್‌ಕುಮಾರ ಮುಂತಾದ ನದಿಗಳ ನೀರು ಹಂಚಿಕೆ ಒಪ್ಪಂದಗಳ ಬಗ್ಗೆ ಸಮಾಲೋಚನೆ ನಡೆದವು. ಈ ಬಾರಿಯ ಹಸೀನಾ ಭೇಟಿಯಲ್ಲಿ ಕೊಶಿಯರಿ ನದಿ ನೀರು ಹಂಚಿಕೆ ಒಪ್ಪಂದವಾಗಿರುವುದು ಧನಾತ್ಮಕ ಬೆಳವಣಿಗೆಯಾಗಿದೆ. ಈ ಒಪ್ಪಂದದಿಂದ ದಕಿಣ ಅಸ್ಸಾಂ ಹಾಗೂ ಬಾಂಗ್ಲಾ ದೇಶದ ಸಿಲ್ಹೆಟ್ ಪ್ರಾಂತ್ಯದ ಕೃಷಿಕರಿಗೆ ಪ್ರಯೋಜನವಾಗಲಿದೆ. ಉಭಯ ದೇಶಗಳ ಮಧ್ಯೆ ಹರಿಯುವ ನದಿಗಳ ನೀರಿನ ಸಂಪೂರ್ಣ ಸದುಪಯೋಗಕ್ಕಾಗಿ ನೀರಿನ ಹಂಚಿಕೆ ಮತ್ತು ನಿರ್ವಹಣಾ ಸಂಬಂಧಿ ವಿಷಯಗಳನ್ನು ಉಭಯ ದೇಶಗಳ ಪ್ರಧಾನಿಗಳು ಮಾತುಗಳ ಮೂಲಕ ಪರಿಹರಿಸುವ ವಿಶ್ವಾಸ ಈ ಸಂದರ್ಭದಲ್ಲಿ ವ್ಯಕ್ತಪಡಿಸಿದರು.



> ವಿಶ್ವದ ಪ್ರಬಲ ಆರ್ಥಿಕ ಶಕ್ತಿಯಾಗುತ್ತಿರುವ ಭಾರತವನ್ನು ನಿಯಂತ್ರಿಸಲು ಚೀನಾ ಎಲ್ಲಾ ರೀತಿಯ ಯತ್ನಗಳನ್ನು ನಡೆಸುತ್ತಿದೆ. ಭಾರತದ ನೆರೆಹೊರೆಯ ದೇಶಗಳನ್ನು ಆರ್ಥಿಕ ಆಮಿಷ, ಸೇನಾ ಬೆದರಿಕೆ, ಸರಕಾರಗಳನ್ನು ಅಸ್ಥಿರಗೊಳಿಸುವಂತಹ ಧೂರ್ತ ರಾಜತಂತ್ರದ ಮೂಲಕ ತನ್ನೆಡೆ ಸೆಳೆದು ಈ ದೇಶಗಳ ಮೂಲಕ ಭಾರತವನ್ನು ಏಕಾಂಗಿಗೊಳಿಸುವ, ದುರ್ಬಲಗೊಳಿಸುವ ಯತ್ನದಲ್ಲಿದೆ. ಈ ಪರಿಸ್ಥಿತಿಯಲ್ಲಿ ಇತರ ನೆರೆ-ಹೊರೆಯ ದೇಶಗಳಿಗಿಂತ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಬಾಂಗ್ಲಾದೊಂದಿಗೆ ಬಾಂಧವ್ಯ ಉತ್ತಮಪಡಿಸುವ ಅನಿವಾರ್ಯತೆ ಭಾರತಕ್ಕೂ ಇತ್ತು. ಈ ದೃಷ್ಟಿಯಿಂದ ಹಸೀನಾರ ಭಾರತ ಭೇಟಿ ಯಶಸ್ವಿಯಾಗಿದೆ.

ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ (ಸಿಇಪಿಎ)

ಈ ಬಾರಿಯ ಭಾರತ ಭೇಟಿಯ ಸಂದರ್ಭದಲ್ಲಿ ಶೇಕ್ ಹಸೀನಾರವರು ಭಾರತದೊಂದಿಗೆ ಸಿಇಪಿ ಒಪ್ಪಂದವಾಗುವ ವಿಶ್ವಾಸದಲ್ಲಿದ್ದರು. ಇದಕ್ಕೆ ಪೂರಕವಾಗಿ ಬಾಂಗ್ಲಾ ಕ್ಯಾಬಿನೆಟ್ ಸಭೆಯಲ್ಲಿ ಹಸೀನಾರವರು ಈ ಒಪ್ಪಂದದ ಕರಡಿಗೆ ಅನುಮತಿ ನೀಡಿದ್ದರು.

ಈ ಒಪ್ಪಂದವು ಮುಕ್ತ ಹಾಗೂ ಸುಂಕರಹಿತ ವಾಣಿಜ್ಯ ವ್ಯವಹಾರಕ್ಕೆ ಅವಕಾಶ ನೀಡಲಿದೆ. ಈ ಒಪ್ಪಂದದಿಂದ ಸೇವಾ ಕ್ಷೇತ್ರದಲ್ಲಿ ವಿಫುಲ ಅವಕಾಶಗಳು ದೊರಕಲಿವೆ. ಹೂಡಿಕೆ ಹೆಚ್ಚಾಗಲಿದೆ. ರಫ್ತು ಪ್ರಮಾಣವು ಪ್ರಸ್ತುತ 1.28 ಬಿಲಿಯನ್ ಡಾಲರ್‌ನಿಂದ 3 ರಿಂದ 5 ಬಿಲಿಯನ್ ಡಾಲರ್ ಏರಿಕೆಯಾಗುವ ಸಾಧ್ಯತೆ ಇದೆ. ಸಿಪಿಇ ಒಪ್ಪಂದವಾದಲ್ಲಿ ಬಾಂಗ್ಲಾ ದೇಶದ ಆಮದು ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಯಾಗಲಿದೆ. ಭಾರತ–ಬಾಂಗ್ಲಾ ಮಧ್ಯೆ ಕಡಿಮೆ ಸಾಗಾಟದ ಅವಧಿ ಹಾಗೂ ವೆಚ್ಚದಿಂದಾಗಿ ಭಾರತದ ಉತ್ಪನ್ನಗಳು ಹಾಗೂ ಸೇವೆಗಳು ತ್ವರಿತವಾಗಿ ದೊರೆಯುವುದರಿಂದ ವ್ಯಾಪಾರ ಅಧಿಕವಾಗಲಿದೆ. ಈ ಕಾರಣದಿಂದ ಬಾಂಗ್ಲಾ ಆಮದು ವ್ಯಾಪಾರಿಗಳು ದೂರದ ದೇಶಗಳ ಬದಲು ಸನಿಹದ ಭಾರತದಿಂದ ಆಮದು ಮಾಡಿಕೊಳ್ಳುವುದು ನಿಶ್ಚಿತ. ಈ ಬಾರಿ ಕೆಲವು ತಾಂತ್ರಿಕ ತೊಡಕುಗಳಿಂದ ಒಪ್ಪಂದ ಸಾಧ್ಯವಾಗಿಲ್ಲ. ಆದರೆ ಶೇಕ್ ಹಸೀನಾರವರು ತಮ್ಮ ದೇಶ ಮೊದಲ ಸಿಇಪಿಎ ಒಪ್ಪಂದವನ್ನು ಕೇವಲ ಭಾರತದೊಂದಿಗೆ ಮಾಡಿಕೊಳ್ಳುವುದು ಎಂದು ಹೇಳಿಕೆ ನೀಡಿರುವುದು ಭಾರತದೊಂದಿಗೆ ಇರುವ ಭಾವನಾತ್ಮಕ ಸಂಬಂಧದ ಪ್ರಕಟೀಕರಣವಾಗಿದೆ.

ಭಾರತವು ಬಾಂಗ್ಲಾಕ್ಕೆ ನೀಡಿರುವ ಕೊಡುಗೆಗಳು

ಭಾರತ ನಿರ್ಮಿಸಿರುವ ಬಾಂಗ್ಲಾ ದೇಶದ ರಾಂಪಾಲ್‌ನ ಮೈತ್ರಿ ಸೂಪರ್ ಥರ್ಮಲ್ ವಿದ್ಯುತ್ ಸ್ಥಾವರದ ಘಟಕ–1 ಅನ್ನು ಪ್ರಧಾನಿ ಮೋದಿ–ಹಸೀನಾರವರು ವರ್ಚ್ಯುಯಲ್ ಮೂಲಕ ಉದ್ಘಾಟಿಸಿದರು. 2 ಬಿಲಿಯನ್ ಡಾಲರ್ ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಘಟಕ 1320 ಮೆ. ವ್ಯಾಟ್ ವಿದ್ಯುತ್ ಉತ್ಪಾದಿಸಲಿದ್ದು, ಬಾಂಗ್ಲಾದೇಶದ ವಿದ್ಯುತ್ ಸಮಸ್ಯೆಯನ್ನು ನಿವಾರಿಸಲಿದೆ. ಈ ಘಟಕ ನಿರ್ಮಾಣಕ್ಕೆ ಭಾರತವು 1.6 ಬಿಲಿಯನ್ ಡಾಲರ್ ನೀಡಿದೆ. ಖುಲ್ನಾ–ಮೊಂಗ್ಲಾ ಬಂದರಿಗೆ ಸಂಪರ್ಕ ಕಲ್ಪಿಸುವ ರೂಪ್ಸಾ ನದಿ ಮೇಲಿನ 5 ಕಿ.ಮೀ. ಉದ್ದದ ರೈಲ್ವೆ ಸೇತುವೆ ಉದ್ಘಾಟನೆ, 312 ಮಿಲಿಯನ್ ಡಾಲರ್ ವೆಚ್ಚದ ಖುಲ್ನಾ–ದರ್ಶನ ರೈಲು ಮಾರ್ಗ ಮತ್ತು 120 ಮಿಲಿಯನ್ ಡಾಲರ್ ವೆಚ್ಚದ ಪರ್ಜೂತಿಪುರ–ಕೌನಿಯಾ ರೈಲು ಮಾರ್ಗ ನಿರ್ಮಾಣಕ್ಕಾಗಿ ಯೋಜನಾ ಒಪ್ಪಂದಗಳಿಗೆ ಸಹಿ ಹಾಕುವ ಘೋಷಣೆ ಮಾಡಲಾಯಿತು. ಬಾಂಗ್ಲಾ ದೇಶದ ರಸ್ತೆ ಮತ್ತು ಹೆದ್ದಾರಿ ಇಲಾಖೆಗೆ 41 ಮಿಲಿಯನ್ ಡಾಲರ್ ಮೌಲ್ಯದ ಒಂದು ಸಾವಿರ ರಸ್ತೆ ನಿರ್ಮಾಣ ಉಪಕರಣಗಳು ಮತ್ತು ಸಾಧನಗಳನ್ನು ಪೂರೈಸುವುದಾಗಿ ಭಾರತ ಪ್ರಕಟಿಸಿತು. ಇದರಿಂದಾಗಿ ಬಾಂಗ್ಲಾ ದೇಶಕ್ಕೆ 18 ಮಿಲಿಯನ್ ಡಾಲರ್ ಉಳಿತಾಯವಾಗಲಿದೆ.

ಜಾಗತಿಕ ಹಾಗೂ ಮೆಡಿಕಲ್ ವೀಸಾ

ಭಾರತವು ಜಗತ್ತಿನ ವಿವಿಧ ದೇಶಗಳಿಗೆ ಹೋಗುವ ಬಾಂಗ್ಲಾ ದೇಶೀಯರಿಗೆ ವೀಸಾ ನೀಡುವ ಕೇಂದ್ರವಾಗಿದೆ. ಅದೇ ರೀತಿ ಬಾಂಗ್ಲಾ ದೇಶೀಯರಿಗೆ ಭಾರತವು ಮೆಡಿಕಲ್ ಚಿಕಿತ್ಸಾ ಹಬ್ ಆಗಿದೆ. 2019 ರಲ್ಲಿ ಭಾರತವು ವಿದೇಶಗಳಿಗೆ ಹೋಗಲು 13.6 ಲಕ್ಷ ಬಾಂಗ್ಲಾ ದೇಶೀಯರಿಗೆ ವೀಸಾ ನೀಡಿದೆ. 2021 ರಲ್ಲಿ 2.8 ಲಕ್ಷ ವೀಸಾ ನೀಡಿದ್ದು, ಇದರಲ್ಲಿ 2.3 ಲಕ್ಷ ಜನರು ಭಾರತದಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ವೀಸಾ ಪಡೆದಿರುತ್ತಾರೆ.

ಅಲ್ಪಸಂಖ್ಯಾತರ ಸ್ಥಿತಿ–ಭಾರತದ ಕಳವಳ

ಇತ್ತೀಚಿನ ವರ್ಷಗಳಲ್ಲಿ ಬಾಂಗ್ಲಾದಲ್ಲಿ ತಲೆ ಎತ್ತಿರುವ ಇಸ್ಲಾಮಿಕ್ ಮತಾಂಧತೆಯಿಂದ ಅಲ್ಲಿನ ಅಲ್ಪಸಂಖ್ಯಾತ ಹಿಂದುಗಳು–ಬೌದ್ಧರು ಭಯದಿಂದ ಜೀವಿಸುತ್ತಿದ್ದಾರೆ. 2013ರಿಂದ ಇದುವರೆಗೆ ಅಲ್ಪಸಂಖ್ಯಾತರ ಮೇಲೆ ದೊಡ್ಡ ಪ್ರಮಾಣದ ಹಿಂಸಾತ್ಮಕ ಹಲ್ಲೆಯ 3680 ಘಟನೆಗಳು ದಾಖಲಾಗಿವೆ. ನೂರಾರು ಹಿಂದುಗಳ ಹತ್ಯೆಯಾಗಿದೆ. ಕೋಟ್ಯಾಂತರ ರೂಪಾಯಿಯ ಆಸ್ತಿಪಾಸ್ತಿಗಳನ್ನು ನಾಶ ಮಾಡಲಾಗಿದೆ. ದಸರೆಯಲ್ಲಿ ದುರ್ಗಾದೇವಿಯ ಪೆಂಡಾಲ್‌ಗಳಿಗೆ ಬೆಂಕಿ ಹಚ್ಚುವುದು, ವಿಗ್ರಹಗಳನ್ನು ನಾಶ ಮಾಡುವುದು ಸಹಜವಾಗುತ್ತಿದೆ. ಅಲ್ಲಿನ ಮಾಜಿ ಪ್ರಧಾನಿ,ಇಸ್ಲಾಮಿಕ್ ಮೂಲಭೂತವಾದಿಗಳ ಬಗ್ಗೆ ಮೃದು ನಿಲುವು ಹೊಂದಿರುವ, ಮತೀಯ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡಿರುವ, ಚೀನಾ ಪರ ಒಲವು ಇರುವ ಬೇಗಂ ಖಲೀ ದಾಜಿಯಾ ಇತ್ತೀಚಿನ ಒಂದು ಹಲ್ಲೆಯ ಸಂದರ್ಭದಲ್ಲಿ ಕೇವಲ ಬೇಸರ ವ್ಯಕ್ತಪಡಿಸಿದರು. ಘಟನೆಯನ್ನು ಖಂಡಿಸುವ ಬದಲು "ಬಾಂಗ್ಲಾ ದೇಶ ಇಸ್ಲಾಮಿಕ್ ರಾಷ್ಟ್ರ, ಇಲ್ಲಿ ಅಲ್ಪಸಂಖ್ಯಾತರು ಸುರಕ್ಷಿತ ವಾಗಿರಲು ಇಸ್ಲಾಂ ಮತಕ್ಕೆ ಮತಾಂತರವಾಗಬೇಕೆಂದು ಬೆದರಿಕೆ ರೂಪದ ಸಲಹೆ ನೀಡಿದರು. ಇದಕ್ಕೆ ವಿರುದ್ಧವಾಗಿ ಶೇಕ್ ಹಸೀನಾ ಅಲ್ಪಸಂಖ್ಯಾತರ ವಿಶೇಷವಾಗಿ ಹಿಂದುಗಳ ಸುರಕ್ಷೆಗಾಗಿ ಅನೇಕ ಕ್ರಮಗಳನ್ನು ಕೈಗೊಂಡಿದ್ದಾರೆ. ಭಾರತ ಭೇಟಿಯ ಕೆಲವೇ ದಿನಗಳ ಹಿಂದೆ ಶ್ರೀ ಕೃಷ್ಣ ಜನ್ಮಾಷ್ಟಮಿಯಂದು ಶೇಕ್ ಹಸೀನಾರವರು ದೇಶದ ಹಿಂದುಗಳನ್ನು ಉದ್ದೇಶಿಸಿ ನೀವು ಅಲ್ಪಸಂಖ್ಯಾತರೆಂದು ಭಾವಿಸದಿರಿ. ಬಾಂಗ್ಲಾದೇಶದ ಎಲ್ಲಾ ಸಮುದಾಯದವರು ಸಮಾನ ಹಕ್ಕು ಹೊಂದಿದ್ದಾರೆ ಎಂಬ ಸಂದೇಶ ನೀಡಿದ್ದರು. ಈ ಮೂಲಕ ಹಿಂದುಗಳಲ್ಲಿ ಸುರಕ್ಷೆಯ ಭಾವನೆ ರೂಪಿಸುವಂತಹ ಭರವಸೆ ನೀಡಿದ್ದಾರೆ. ಬಾಂಗ್ಲಾ ದೇಶ ಚೀನಾ ಪರ ವಾಲಿದರೆ ಭಾರತದ ಪಾಲಿಗೆ ಶತ್ರುವನ್ನು ಮನೆಯ ಹೊಸ್ತಿಲಲ್ಲಿ ಸ್ಥಾಪಿಸಿದಂತಾಗುತ್ತದೆ. ಆದ್ದರಿಂದ ಬಾಂಗ್ಲಾದೇಶ ಯಾವುದೇ ಕಾರಣಕ್ಕೂ ಚೀನಾ ಪರವಾಗದಂತೆ ಹಾಗೂ ಹಿಂದುಗಳು ಸುರಕ್ಷಿತವಾಗಿರಬೇಕಾದರೆ ಶೇಕ್ ಹಸೀನಾ ಪ್ರಧಾನಿಯಾಗಿ ಮುಂದುವರಿಯಬೇಕು. ಭಾರತ ಈ ಉದ್ದೇಶಗಳಿಗಾಗಿ ಬಾಂಗ್ಲಾದೊಂದಿಗೆ ಸದೃಢ ರಾಜತಾಂತ್ರಿಕ ಸಂಬಂಧ ರೂಪಿಸಲು ಬೇಕಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಇನ್ನು ಮುಂದೆ ಪಿಹೆಚ್‌ಡಿ ಮಾಡಲು 6 ವರ್ಷ ಅವಕಾಶ

- ಮೈಸೂರು ವಿವಿ ಶಿಕ್ಷಣ ಮಂಡಳಿ ನಿರ್ಧಾರ
- ಆಯ್ಕೆ ವಿಧಾನದಲ್ಲೂ ಮಾರ್ಪಾಡು

ಮೈಸೂರು, ಸೆ.23(ಆರ್‌ಕೆ)– ಪಿಹೆಚ್‌ಡಿ ನಿಯಮಾವಳಿ ತಿದ್ದುಪಡಿಗೆ ಮುಂದಾಗಿರುವ ಮೈಸೂರು ವಿಶ್ವವಿದ್ಯಾನಿಲಯವು ಆರು ವರ್ಷಗಳ ಕಾಲಾವಕಾಶ ನೀಡಲು ನಿರ್ಧರಿಸಿದೆ.

ಮಾನಸ ಗಂಗೋತ್ರಿಯ ಲಲಿತ ಕಲಾ ಕಾಲೇಜಿನಲ್ಲಿ ಇಂದು ನಡೆದ ಶೈಕ್ಷಣಿಕ ಮಂಡಳಿ ಸಭೆಯು ಆರು ವರ್ಷಗಳ ಅವಕಾಶ ನೀಡುವುದೂ ಸೇರಿದಂತೆ ಹಲವು ಮಾರ್ಪಾಡುಗಳನ್ನೊಳಗೊಂಡ ಪಿಹೆಚ್‌ಡಿ ನಿಯಮಾವಳಿಗಳು–2022ಕ್ಕೆ ಒಪ್ಪಿಗೆ ನೀಡಿತು. ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಸಂಬಂಧ ವ್ಯವಹಾರ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ. ಡಿ.ಆನಂದ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯ ವರದಿಯನ್ನು ಪ್ರಸ್ತಾಪಿಸಿ ಹೊಸ ನಿಯಮಾವಳಿಗೆ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದು ಅನುಷ್ಠಾನಗೊಳಿಸುವಂತೆ ಸದಸ್ಯರು ಸಲಹೆ ನೀಡಿದರು.

ಮುಂದಿನ ಶೈಕ್ಷಣಿಕ ವರ್ಷದಿಂದ ಇದು ಜಾರಿಗೆ ಬರಲಿದ್ದು, ಹೊಸದಾಗಿ ಪಿಹೆಚ್‌ಡಿ ಮಾಡಲು ಬಯಸುವವರಿಗೆ ಅನ್ವಯವಾಗಲಿದೆ. ಈಗ ಪಿಹೆಚ್‌ಡಿ ಮುಗಿಸಲು 5 ವರ್ಷ ಅವಕಾಶವಿತ್ತು. ಇಷ್ಟರಲ್ಲಿ ಪೂರ್ಣಗೊಳಿಸದಿದ್ದಲ್ಲಿ ಹೆಚ್ಚುವರಿ ಅವಧಿಗೆ 30,000 ರೂ. ದಂಡ ಶುಲ್ಕ ಪಾವತಿಸಬೇಕಾಗಿತ್ತು.

ನಿಯಮಾವಳಿಗೆ ಈಗ ತಿದ್ದುಪಡಿ ಮಾಡುವುದರಿಂದ ಆರು ವರ್ಷಗಳ ಅವಕಾಶವಿದ್ದು, ನಂತರದ ವಿಸ್ತರಣೆಗೆ ನಿಗದಿತ ಶುಲ್ಕ ಪಾವತಿಸಬೇಕಾಗುತ್ತದೆ. ಮಹಿಳೆಯರು ಹಾಗೂ ಅಂಗವಿಕಲರಿಗೆ ಮತ್ತೆ ಎರಡು ವರ್ಷ ಅವಕಾಶ ನೀಡಲು ಪ್ರಸ್ತಾಪಿಸಲಾಗಿದೆಯಾದರೂ, ಫೆಲೋಶಿಪ್ ಅನ್ನು 4 ವರ್ಷಗಳವರೆಗೆ ಮಾತ್ರ ನೀಡಲಾಗುತ್ತದೆ. ಪಿಹೆಚ್‌ಡಿ ಪದವಿಗೆ ಪ್ರವೇಶ, ಪರೀಕ್ಷಾ ಕ್ರಮದಲ್ಲೂ ಬದಲಾವಣೆ ಮಾಡಲಾಗಿದೆ. ಹಿಂದೆ 100ರಲ್ಲಿ 50 ಅಂಕಗಳ ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ (Discriptive) ಮತ್ತು 50 ಅಂಕಗಳಿಗೆ ಬಹು ಆಯ್ಕೆಯ ಪ್ರಶ್ನೆಗಳಿರುತ್ತಿದ್ದವು. ಇದೀಗ 100 ಅಂಕಗಳಿಗೂ ಬಹು ಆಯ್ಕೆ ಪ್ರಶ್ನೆಗಳೇ ಇರುತ್ತವೆ. ಕೋರ್ಸ್ ವರ್ಕ್ ಸಲ್ಲಿಕೆ ಅವಧಿಯನ್ನು 20 ವಾರದ ಬದಲಿಗೆ 16 ವಾರಕ್ಕೆ ಇಳಿಸಲಾಗಿದ್ದು, ರೀಸರ್ಚ್ ಅಂಡ್ ಪಬ್ಲಿಕೇಷನ್ ಎಥಿಕ್ಸ್ ಕೋರ್ಸ್ ಅನ್ನು ಹೊಸದಾಗಿ ಪರಿಚಯಿಸಲಾಗಿದೆ.



ಸಲ್ಲಿಕೆಯಾಗುವ ಮಹಾ ಪ್ರಬಂಧಗಳನ್ನು ವಿಭಾಗದ ಮುಖ್ಯಸ್ಥರು 15 ದಿನದೊಳಗಾಗಿ ಕಡ್ಡಾಯವಾಗಿ ಮುಂದಿನ ಕ್ರಮಕ್ಕೆ ಪ್ರತಿಕ್ರಿಯೆಯನ್ನು ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಳಿಸಬೇಕು. ಐಎಸ್‌ಎಸ್‌ಎನ್ ಇರುವ ಜರ್ನಲ್‌ನಲ್ಲಿ 2 ಪೇಪರ್‌ಗಳು ಪ್ರಕಟವಾಗದಿದ್ದರೆ ಹಾಗೂ 1 ಪೇಪರ್ ವಿಚಾರ ಸಂಕಿರಣದ ನಡಾವಳಿಯಲ್ಲಿ ಪ್ರಕಟವಾಗಿದ್ದರೆ ಮಾತ್ರ ಪಿಹೆಚ್‌ಡಿ ಪದವಿ ಅಂಗೀಕಾರಕ್ಕೆ ಪರಿಗಣಿಸಲಾಗುವುದು. ಗುಣಮಟ್ಟದ ಸಂಶೋಧನೆಗೆ ಒತ್ತು ನೀಡಲು ಹಾಗೂ ಅಕ್ರಮಗಳಿಗೆ ಅವಕಾಶ ನೀಡದಂತೆ ಎಚ್ಚರ ವಹಿಸಲು ಈ ತಿದ್ದುಪಡಿ ಅಗತ್ಯ ಎಂದು ಶೈಕ್ಷಣಿಕ ಮಂಡಳಿ ಸದಸ್ಯರು ಅಭಿಪ್ರಾಯಪಟ್ಟರು. ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ 9 ವಿದ್ಯಾರ್ಥಿಗಳಿಗೆ ಹಾಜರಾತಿ ಕೊರತೆ ಇದ್ದರೂ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ ಎಂಬ ವಿಷಯ ಸಾಕಷ್ಟು ಚರ್ಚೆಗೆ ಗ್ರಾಸವಾಯಿತು. ಅದಕ್ಕೆ ಪ್ರತಿಕ್ರಿಯಿಸಿದ ಕುಲಪತಿಗಳು, ಇದಕ್ಕೆ ಒಂದು ಸಮಿತಿ ರಚಿಸಿ ವರದಿ ಪಡೆದು ಮಾರ್ಗಸೂಚಿ ಹೊರಡಿಸಲಾಗುವುದು ಎಂದರು. ಬಜೆಟ್‌ನಲ್ಲಿ ಗ್ರಂಥಾಲಯಕ್ಕೆ ಅನುದಾನ ತಡೆಹಿಡಿದಿರುವ ಬಗ್ಗೆ ಡೀನ್ ಪ್ರೊ. ಸರಸ್ವತಿ ಅವರು ಗಮನ ಸೆಳೆದಾಗ ಅನುದಾನ ಕೊಡಿಸುವುದಾಗಿ ಕುಲಪತಿಗಳು ಭರವಸೆ ನೀಡಿದರು. ಇದೇ ವೇಳೆ ಮೈಕ್ರೋ ಬಯಾಲಜಿ ಪ್ರೊ. ಎನ್.ಲಕ್ಷ್ಮೀದೇವಿ ಚಿನ್ನದ ಪದಕ ದತ್ತಿ ಸ್ಥಾಪನೆಗೆ ಸಭೆಯು ಅನುಮೋದಿಸಿತು. ಕುಲಸಚಿವ ಪ್ರೊ. ಆರ್.ಶಿವಪ್ಪ, ಹಣಕಾಸು ಅಧಿಕಾರಿ ಸಂಗೀತ ಗಜಾನನ ಹೆಗಡೆ ಸಭೆಯಲ್ಲಿ ಉಪಸ್ಥಿತರಿದ್ದರು.

ರಾಹುಲ್ ಗಾಂಧಿ ಐಕ್ಯತಾ ಯಾತ್ರೆಯಲ್ಲಿ ಸೋನಿಯಾ, ಪ್ರಿಯಾಂಕಾ ಗಾಂಧಿ ಭಾಗಿ

ಬೆಂಗಳೂರು, ಸೆ. 23 (ಕೆಎಂಶಿ)–ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ರಾಜ್ಯದಲ್ಲಿ ನಡೆಯಲಿರುವ ಭಾರತ ಐಕ್ಯತಾ ಯಾತ್ರೆಯಲ್ಲಿ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ಭಾಗವಹಿಸಲಿದ್ದಾರೆ. ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದರು.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಾಜ್ಯ ಉಸ್ತುವಾರಿ ಹೊತ್ತಿರುವ ರಣದೀಪ್ ಸುರ್ಜೇವಾಲ ಅವರು ಭಾರತ ಐಕ್ಯತಾ ಯಾತ್ರೆಯ ಸಿದ್ಧತೆಗಳ ಪರಿಶೀಲನೆ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಈ ಯಾತ್ರೆ ಸೆ. 30 ರಂದು ಬೆಳಗ್ಗೆ 9 ಗಂಟೆಗೆ ಗುಂಡ್ಲುಪೇಟೆಯಿಂದ ಆರಂಭವಾಗಲಿದೆ. ಅ. 2 ರಂದು ಬದನವಾಳು ಗ್ರಾಮದಲ್ಲಿ ಗಾಂಧಿ ಜಯಂತಿ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ದಸರಾ ಹಬ್ಬದ ಪ್ರಯುಕ್ತ 2 ದಿನಗಳ ಕಾಲ ಯಾತ್ರೆಗೆ ಬಿಡುವು ನೀಡಲಾಗುವುದು. ಬಳ್ಳಾರಿಯಲ್ಲಿ ಬೃಹತ್ ಸಾರ್ವಜನಿಕ ಸಮಾವೇಶ ನಡೆಯಲಿದೆ. ರಾಹುಲ್ ಗಾಂಧಿ ಅವರು ಯುವಕರು, ಮಹಿಳೆಯರು, ರೈತರು, ನಾಗರಿಕ ಸಮುದಾಯಗಳು, ವಿದ್ಯಾರ್ಥಿಗಳು, ಬುಡಕಟ್ಟು ಜನರ ಜೊತೆ ಒಂದೊಂದು ದಿನ ಮಾತುಕತೆ ನಡೆಸಲಿದ್ದಾರೆ ಎಂದರು.

ಪ್ರತಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ, ಪಕ್ಷದ ಘಟಕಗಳು, ಪರಾಜಿತ ಅಭ್ಯರ್ಥಿಗಳು ಜನರನ್ನು ಕರೆ ತಂದ ದಿನ ರಾಹುಲ್ ಗಾಂಧಿ ಅವರ ಜತೆ ಹೆಜ್ಜೆ ಹಾಕಲು ಅವಕಾಶ ಮಾಡಿಕೊಡಲಾಗುವುದು. ಯಾತ್ರೆ ಮಾರ್ಗದಲ್ಲಿ ಬರುವ ಮೈಸೂರು ನಗರ ಪ್ರದೇಶದ ಜನತೆ ಬೆಳಗ್ಗೆ 7 ಗಂಟೆಗೆ ರಾಹುಲ್ ಗಾಂಧಿ ಜತೆಗೆ ನಡಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು ಎಂದು ಹೇಳಿದರು. ಪಕ್ಷದ ಅಧ್ಯಕ್ಷ ಸ್ಥಾನದ ಚುನಾವಣೆ ಕುರಿತು ಕೇಳಿದ ಪ್ರಶ್ನೆಗೆ, ರಾಹುಲ್ ಗಾಂಧಿಯವರು ಮುಂದಾಳತ್ವ ವಹಿಸಬೇಕು ಎಂದು ನಮ್ಮ ರಾಜ್ಯದ ಎಲ್ಲಾ ನಾಯಕರ ಒತ್ತಾಸೆ. ಆದರೆ ಅವರು ಯಾವ ತೀರ್ಮಾನ ಕೈಗೊಳ್ಳುತ್ತಾರೆ ಎಂದು ಕಾದು ನೋಡಬೇಕು ಎಂದು ತಿಳಿಸಿದರು.

ಜಿಲ್ಲಾ ಮಟ್ಟದ ಕ್ರೀಡಾ, ಸಾಂಸ್ಕೃತಿಕ ಸ್ಪರ್ಧೆ

ಮೈಸೂರು, ಸೆ.23– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಮತ್ತು ಹಿರಿಯ ನಾಗರಿಕ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ವಿಕಲಚೇತನ ಕಲ್ಯಾಣಾಧಿಕಾರಿ ಕಚೇರಿ ವತಿಯಿಂದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆ ಮತ್ತು ಕ್ರೀಡಾ ಸ್ಪರ್ಧೆಗಳನ್ನು ತಿಲಕನಗರದ ಅಂಧ ಮತ್ತು ಕಿವುಡು ಮಕ್ಕಳ ಸರ್ಕಾರಿ ಪಾಠಶಾಲೆಯಲ್ಲಿ ಸೆ.29ರಂದು ಬೆಳಗ್ಗೆ 9ರಿಂದ ಏರ್ಪಡಿಸಲಾಗಿದೆ. ಆಸಕ್ತರು ಸಾಂಸ್ಕೃತಿಕ ಸ್ಪರ್ಧೆಗಳಿಗಾಗಿ ತಮ್ಮ ವಯಸ್ಸಿನ ಮಾಹಿತಿಯೊಂದಿಗೆ ಸೆ.27ರಂದು ಸಂಜೆ 5ರೊಳಗಾಗಿ ಹಾಗೂ ಜಿಲ್ಲಾ ಮಟ್ಟದ ಕ್ರೀಡಾ ಸ್ಪರ್ಧೆಗಳಿಗಾಗಿ ಸೆ.28ರ ಸಂಜೆ 5ರೊಳಗಾಗಿ ತಮ್ಮ ಹೆಸರನ್ನು ಖುದ್ದಾಗಿ ಅಥವಾ ದೂ.ಸಂಖ್ಯೆ : 0821–2490333 ಮೂಲಕ ನೋಂದಾಯಿಸಿಕೊಳ್ಳಬಹುದಾಗಿದ್ದು, ಕಡ್ಡಾಯವಾಗಿ ಸ್ಪರ್ಧೆಯ ದಿನದಂದು ವಯಸ್ಸಿನ ದೃಢೀಕರಣವನ್ನು ಸಲ್ಲಿಸಬೇಕು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com E-mail address: ad@mysurumithra.com, For advertisements: ad@mysurumithra.com, website: www.mysurumithra.com



ಮೈಸೂರು ನಗರಕ್ಕೆ ಮರಳಿದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ನಗರ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ ಅವರು ಭೇಟಿ ಮಾಡಿ, ಆಶೀರ್ವಾದ ಪಡೆದರು. ಇದೇ ಸಂದರ್ಭದಲ್ಲಿ ಸ್ವಾಮೀಜಿಯವರು ಶ್ರೀಧರ ಅವರಿಗೆ ಜನ್ಮದಿನದ ಶುಭ ಕೋರಿ, ಆಶೀರ್ವದಿಸಿದರು. ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ವೀರವನಿತೆ ರಾಣಿ ಚೆನ್ನಮ್ಮ ಸ್ವಯಂ ಸೇವಾ ಸಂಘದ ಪ್ರಧಾನ ಕಾರ್ಯದರ್ಶಿ ಆಯರಹಳ್ಳಿ ಪಿ.ವಿರೂಪಾಕ್ಷ ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟ್ ಫಾರ್ ಸೇಲ್
30x40
ಮೈಸೂರು ಜೆ.ಪಿ.ನಗರದ ರಿಂಗ್ ರೋಡ್‌ನಿಂದ ಕೇವಲ 5 ಕಿ.ಮೀ ದೂರದ ಜ್ಞಾನಭಾರತಿ ಲೇಔಟ್, ದಡದಹಳ್ಳಿ, 2ನೇ ಸ್ಟೇಜ್, ಈಸ್ಟ್ ಫೇಸಿಂಗ್, MUDA ಖಾತೆ ಆಗಿದೆ.
9342123373

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರು, ಪಾರ್ಶವಾಯು ಪೀಡಿತರು, ಹಾಗೂ ಕೈಯಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ ವಸತಿಯೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297

ಶ್ರೀ ಬಾಲಾಜಿ ಟೂರಿಸ್ಟ್
27-10-2022: 5 ದಿನ ಕೇರಳ ತ್ರಿವೇಂಡ್ರಂ, ಕೊಚ್ಚಿನ್, ಗುರುವಾಯೂರ್, ಅಲಪ್ಪಿ, ತೇಕಡಿ, ಮೂನಾರ್, ಇತ್ಯಾದಿ.
10-11-2022: 8 ದಿನ ಮಹಾರಾಷ್ಟ್ರ, ಶಿರಡಿ, ಘೃಷ್ಣೇಶ್ವರ್, ಭೀಮಾಶಂಕರ್, ತ್ರ್ಯಂಬಕೇಶ್ವರ್, ಪಂಡರಾಪುರ ಇತ್ಯಾದಿ.
12-12-2022: 14 ದಿನ ನೇಪಾಳ ಮುಕ್ತಿನಾಥ್, ಪೋಕ್ರಾ, ಮನೋಕಾಮನ, ಕಾಠ್ಮಂಡು, ಪಶುಪತಿನಾಥ್, ಗುಪ್ತೇಶ್ವರ, ಸ್ವಯಂಭುನಾಥ್, ಜನಕ್‌ಪುರ್, ಗಯಾ, ವೈದ್ಯನಾಥ್, ಕಾಶಿ.
9945770486

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
9606871188

ಬೇಕಾಗಿದ್ದಾರೆ
ಮೊಬೈಲ್ ಶೋರೂಂನ ಕೌಂಟರ್ ಸೇಲ್ಸ್‌ಗೆ ಹುಡುಗ / ಹುಡುಗಿಯರು [ಪಾರ್ಟ್‌ಟೈಂ/ಫುಲ್‌ಟೈಂ] ಬೇಕಾಗಿದ್ದಾರೆ. ಸಂಪರ್ಕಿಸಿ
9886409722

HOUSE FOR RENT / SALE
30x40 Rent at Dattagalli & Srirampura.
40x60 Duplex Rent at Dattagalli.
40x60 Ground Rent at R.K. Nagar.
30x40 Duplex Sale at Srirampura
9663136318

ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿಗೆ SSLC/ PUC Pass or Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
BENAKA - ITI College, Near Cauvery Circle, Dr. Rajkumar Road, Raghavendra Nagar, Mysore
9342123467 9141756695

ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಎಸ್.ಎಸ್.ಎಲ್.ಸಿ
9538886326
0821-4852002 / 2303459

ಸೈಟು ಮಾರಾಟಕ್ಕಿದೆ
ಮೂಲೆ ನಿವೇಶನ 20x30 ಮಾನಸಿನಗರ, ಮೈಸೂರು. ನೇರ ಸಂಪರ್ಕಿಸಿ: (ಮಧ್ಯವರ್ತಿಗಳು ಬೇಡ)
9880395655

ಬಟ್ಟೆ ಅಂಗಡಿ ಕೆಲಸ
ಸಬರ್ಬ್ ಬಸ್ ಸ್ಟ್ಯಾಂಡ್ ಸಮೀಪ ಬಟ್ಟೆ ಅಂಗಡಿ ಕೆಲಸಕ್ಕೆ ಹುಡುಗ ತಕ್ಷಣ ಬೇಕಾಗಿದ್ದಾರೆ. ಹಿಂದಿ ಗೊತ್ತಿರುವವರಿಗೆ, ಅನುಭವ ಇರುವವರಿಗೆ, ಸಮೀಪ ವಾಸಿಸುವವರಿಗೆ ಆದ್ಯತೆ
7349480337

ಕೆಲಸಕ್ಕೆ ಬೇಕಾಗಿದ್ದಾರೆ
1) ತಂದೂರಿ ರೋಟಿ ಮಾಡುವವರು
2) ಚೈನೀಸ್ ಫುಡ್ ಮಾಡುವವರು
3) ನಾರ್ತ್ ಇಂಡಿಯನ್ ಫುಡ್ ಮಾಡುವವರು
4) ಸ್ಟಿವಾರ್ಡ್ ಮತ್ತು ಕ್ಯಾಪ್ಟನ್ ಕೆಲಸ ಮಾಡುವವರು. ಸಂಪರ್ಕಿಸಿ:
9916256503

ಬೇಕಾಗಿದ್ದಾರೆ
ಹೋಟೆಲ್‌ನಲ್ಲಿ ಪಾರ್ಸೆಲ್ ಹಾಗೂ ಕೌಂಟರ್ ನೋಡಿಕೊಳ್ಳಲು ಹುಡುಗರು ಬೇಕಾಗಿದ್ದಾರೆ. Full Time / Part Time)
9986306418

ತಕ್ಷಣ ಬೇಕಾಗಿದ್ದಾರೆ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಮುಂತಾದ ಸ್ಥಳದಲ್ಲಿರುವ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree Pass / Fail ಆದವರಿಗೆ Packing, Helper, Checking, Maintenance, Billing, Front Office Telephone attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000-39,000 (ESI+PF+OT) ಇದೆ.
7676939277 / 9353753194

HOUSE FOR SALE
45x60, S/F, G/F, 2BHK, 1st Floor 3BHK with Car Parking & Solar, Alanahalli Extension, T.Narasipura Main Road, Mysore. Brokers Excuse.
9538756306

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Aniketana Road, kuvempunagar, Mysuru
MYSURU 9611028523 BANGALORE 9343142258

ಮನೆ ಮಾರಾಟಕ್ಕಿದೆ
ಮೈಸೂರು ನಗರ, ಶ್ರೀರಾಂಪುರ, 2ನೇ ಹಂತ, ಕಂದಾಯನಗರ, ರಿಂಗ್ ರಸ್ತೆಯ ಪಕ್ಕದಲ್ಲಿ, ಉತ್ತರ ದಿಕ್ಕು, ಪೂರ್ವ ಬಾಗಿಲಿನ 3 ಅಂತಸ್ತಿನ 30x40 (G/F, F/F, S/F, T/F) ಮನೆ ಸುಮಾರು 42,000 ತಿಂಗಳಿಗೆ ಬಾಡಿಗೆ ಬರುವಂತಹ ಎಲ್ಲಾ ಸುಸಜ್ಜಿತ ಸೌಲಭ್ಯಗಳುಳ್ಳ ಮನೆ ಮಾರಾಟಕ್ಕಿದೆ. ಬೆಲೆ 1.75 Cr. (Slightly Negotiable). ಹೆಚ್ಚಿನ ವಿವರಗಳಿಗೆ ಮತ್ತು ವೀಕ್ಷಿಸಲು ಕರೆ ಮಾಡಿ
7996504996

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ:- ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ:- 12,818 + ESI & PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ-06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502 / 9108100117

AG TECH
Service & Repairs

Mob: 99863-96630

ಮುಡಾ ಅನುಮೋದಿತ ಸೈಟ್ ಮಾರಾಟಕ್ಕೆ
20X30 30X40 30X50
ಪೋಲೀಸ್ ಲೇಔಟ್ ಮತ್ತು ಲಲಿತಾದ್ರಿಪುರ ನಡುವೆ ರಿಂಗ್ ರೋಡ್ ಒಳಗೆ
ತಕ್ಷಣದ ನೋಂದಣಿ ಮತ್ತು ಕೂಡಲೆ ಮನೆ ಕಟ್ಟಬಹುದು ಬ್ಯಾಂಕ್ ಸಾಲ ಲಭ್ಯವಿದೆ
98800 65122 / 77956 09173

ಸೈಟ್ ಸೇಲ್
ರಾಜರಾಜೇಶ್ವರಿ ಗಾರ್ಡೇನಿಯಾ, ಫ್ಲನ್ ಪೋರ್ಟ್ ಎದುರು, ಮೈಸೂರು ಬೆಂಗಳೂರು ಮೇನ್ ರೋಡ್, ಸೈಟ್ ನಂಬರ್: 37, 38, ವೆಸ್ಟ್ ಫೇಸಿಂಗ್, 30x40
8951144240 9448796034

ಬೇಕಾಗಿದ್ದಾರೆ
ತಮಿಳು, ತೆಲುಗು ಭಾಷೆಯನ್ನು ಮಾತನಾಡಲು ಬಲ್ಲ ಮಹಿಳೆಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳದೊಂದಿಗೆ ತಿಂಗಳಿಗೆ 12,000 ರೂ.ಗಳು ಹಾಗೂ ಡೇಟಾ ಎಂಟ್ರಿ ಆಪರೇಟರ್ಸ್ ಇಂದೇ ಕರೆ ಮಾಡಿ:
9980959598 9743283001

HOUSE CONSTRUCTION
Festival Offer
Build your home@ Just 1999/-per sq.ft.
Book on or before 05th Oct & Get a Ather Electric Scooter FREE*

+91 9164763079

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ & ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಮಡಿಕೇರಿಯಲ್ಲಿ ಕಾರ್ಯನಿರ್ವಹಿಸಲು ಊಟ, ತಿಂಡಿ & ವಸತಿ ಸೌಲಭ್ಯವಿದೆ. ವಾರದ ರಜೆ ಇರುತ್ತದೆ. ESI, PF ಇದೆ ಮತ್ತು ಆಕರ್ಷಕ ಸಂಬಳ ದೊರೆಯುತ್ತದೆ. 12 ಗಂಟೆ ಪಾಳಿಗೆ ಮತ್ತು KST ಹುಡುಗರು ಸಹ ಬೇಕಾಗಿರುತ್ತಾರೆ. (Washing Boys)
6364560079 6364448999

ಸೈಟು ಮಾರಾಟಕ್ಕಿದೆ
30x40, 30x50, 40x60 ಕೈಗೆಟುಕುವ ದರದಲ್ಲಿ ನಿವೇಶನಗಳು ಮೈಸೂರಿನ ಪ್ರಮುಖ ಲೋಕೇಶನ್‌ಗಳಲ್ಲಿ ಲಭ್ಯ.
7760476999

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡನ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಬೇಕಾಗಿದ್ದಾರೆ
ಬ್ರಾಹ್ಮಣ ಮಹಿಳೆ ಅಡುಗೆ ಸಹಾಯಕಿ ಬೇಕಾಗಿದ್ದಾರೆ. ಸಂಪರ್ಕಿಸಿ
9449380528 7026498386

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. (ಸಂಬಳ 8000) Team Leader ಬೇಕಾಗಿದ್ದಾರೆ. (ಕಂಪ್ಯೂಟರ್ ಜ್ಞಾನವುಳ್ಳವರು) ಸಂಬಳ 10,000. ಸ್ಥಳ: ಎನ್.ಆರ್.ಮೊಹಲ್ಲಾ ಮತ್ತು ಚಾಮುಂಡಿಪುರಂ GTR Hotel Near
8050912616

ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿರುವ CIPET ಕಾಲೇಜಿಗೆ ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ. 8 ಗಂಟೆಗಳ ಕೆಲಸ ESI & PF ಇರುತ್ತದೆ. SSLC Pass or Fail ಸಂಪರ್ಕಿಸಿ:
9590268610 / 9986501873

Wanted / Required
Supervisor, Civil Work for Madikeri Resort Construction site with PUC / Diploma / Engineering / Any Degree.
Mob: 9739247788

ಸುವರ್ಣ ಯಾತ್ರ
7 ದಿನಗಳ ಕಾಶಿ ಪ್ರವಾಸ 12–10–22, ಶ್ರೀ ಬಾಬಾ ಬೈದ್ಯನಾಥ, ನೈಮಿಷಾರಣ್ಯ, ಅಯೋಧ್ಯೆ ಹಾಗೂ ಇತರೆ ಸ್ಥಳಗಳು,
7 ದಿನಗಳ ಶಿರಡಿ ಪ್ರವಾಸ 05–10–22, ತ್ರಯಂಬಕೇಶ್ವರ, ಗೃಷ್ಣೇಶ್ವರ, ಭೀಮಾಶಂಕರ, ಪಂಡ್ರಾಪುರ, ಕೊಲ್ಲಾಪುರ ಹಾಗೂ ಇತರೆ
6 ದಿನಗಳ ತಮಿಳು ನಾಡು ಪ್ರವಾಸ 27–10–22 ತಿರುವಣ್ಣಾಮಲೈ, ಚಿದಂಬರಂ, 9 ನವಗ್ರಹ, ರಾಮೇಶ್ವರ, ಕನ್ಯಾಕುಮಾರಿ, ಪಳನಿ ಹಾಗೂ ಇತರೆ.
9019462508 / 9008381022

S.M GOLD
ಗಿರವಿ ಚಿನ್ನಾಭರಣ ಖರೀದಿ ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ – (T&C)
9964522225

LOST
Ghouse Khan, No. 2491, 2nd Cross, 8th Main, 1st Stage, Rajivnagar, Mysuru-570 019, have lost property documents at Neharu Nagar for property No. 211, 10th Cross, 3rd Main, Gandhi Nagar, Lashkar Mohalli. *Finders please contact:*
Mob: 7204811909

AFFIDAVIT
I, Geetha Padiyar, residing at 2nd Stage, Behind Chamundeshwari Temple, Chamundeshwari Nagar, Belawadi, Mysuru-570 018, swear that in some of the record (Aadhar Card, Pan Card and etc.) my name has been mentioned as Geetha Padiyar. But in some other documents (SBI Bank Belawadi Branch Account No. 10203955989) my name has mentioned as Geetha Ajay. I declare that in front of Notary B.S. Vijayalakshmi, that both Geetha Padiyar & Geetha Ajay belongs to me. In future in all transactions I will be called and known as Geetha Padiyar only.
Sd/- Geetha Padiyar

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಸೂಪರ್‌ವೈಸರ್ – SSLC / PUC ಸ್ಥಳ: ಚಿನಕುರಳಿ (ಕೆ.ಆರ್.ಪೇಟೆ)
2) ಸೆಕ್ಯೂರಿಟಿ ಗಾರ್ಡ್ – SSLC Pass / Fail ಸ್ಥಳ: ಮೈಸೂರು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
9739166772 9739199355

PART TIME WORK
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ
ಕೆಲಸ / JOB
ವಾರದ ಸಂಬಳ : 3000/– ರಿಂದ 5000/– ಮೇಲ್ಪಟ್ಟು (ಕೊರಿಯರ್ ಸೌಲಭ್ಯವಿದೆ) ಸಂಪರ್ಕಿಸಿ:
9108418233 9743217566

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು / ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ.
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು.

ESIGN INDIA PVT. LTD.
REQUIRES
1) Techinical Backed -1 Post
2) Field Executive - 1 Post
Walk in interview on Today & Tomorrow. #290, 1st Floor, Ramaswamy Towers Opp. ICICI Bank, Ramavilasa Road.
9902516988

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ಮನೆ ನಂ. 406, 49 ಮುಖ್ಯ ರಾಘವೇಂದ್ರ ನಗರದಲ್ಲಿ ವಾಸವಾಗಿರುವ ವಂಶಿ ಎಸ್. ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಎಲ್ಲಾ ದಾಖಲೆಗಳಲ್ಲಿ (ಆಧಾರ್ ಕಾರ್ಡ್, ಪಾನ್ ಕಾರ್ಡ್, ಶಾಲೆಯ ದಾಖಲಾತಿ) ನನ್ನ ಹೆಸರು ವಂಶಿ ಎಸ್. ಎಂದು ನಮೂದಾಗಿರುತ್ತದೆ. ಆದರೆ ನನ್ನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಖಾತೆ ಸಂಖ್ಯೆ 01292008615 ಪಾಸ್ ಬುಕ್ಕಿನಲ್ಲಿ ನನ್ನ ಹೆಸರು ವಿನೀತ್ ಎಂದಿರುತ್ತದೆ. ಆದ್ದರಿಂದ ಈ ಎರಡೂ ಹೆಸರು ನನ್ನದೇ ಎಂದು ನೋಟರಿ ಸಂದೀಪ್ ಕೆ.ಡಿ. ರವರ ಎದುರು ದಿನಾಂಕ 22–09–2022ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ವಂಶಿ ಎಸ್.

ದೊರೆಯುತ್ತದೆ
ಹಸು, ಎಮ್ಮೆ, ಹಂದಿಗಳಿಗೆ ನಮ್ಮಲ್ಲಿ ರೈಸ್ ಬ್ರ್ಯಾಂಡ್ ಪಾಲಿಶ್ ತವಡು ಹಾಗೂ ನುಚ್ಚು ಅಕ್ಕಿ ದೊರೆಯುತ್ತದೆ. ಸಂಪರ್ಕಿಸಿ: Prop. ಶಿವಣ್ಣ ವಿಳಾಸ: ಶ್ರೀರಾಂಪುರ, ಮೈಸೂರು
9448077927

3 BHK N.R.MOHALLA
Shivaji Road Rent House 30x40 East Face G/F, 20,000/- Nego.Contact:
9844446469 9880099929

ಬೇಕಾಗಿದ್ದಾರೆ
ಚಿಕ್ಕ ಮಗು ನೋಡಿಕೊಳ್ಳಲು ಅನುಭವವುಳ್ಳ ಮಹಿಳೆ ಬೇಕಾಗಿದ್ದಾರೆ. ಮನೆ ವಿಳಾಸ: ಗಂಗೋತ್ರಿ ಲೇಔಟ್
9945040509

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ವಿವಾಹ ಭಾಗ್ಯ
ಗ್ಲೋಬಲ್ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿಧುರರು
FREE REGISTRATION
79751-42004

ತಕ್ಷಣ ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಒಂಟಿ ಕೊಪ್ಪಲ್‌ನಲ್ಲಿರುವ ಹೋಟೆಲ್ ಒಂದಕ್ಕೆ ದೋಸೆಭಟ್ಟರು, ನಾರ್ತ್ ಇಂಡಿಯನ್ ರೋಟಿ ಭಟ್ಟರು, ಕೌಂಟರ್ ಕೆಲಸದವರು, ಸಪ್ಲೇಯರ್‌ಗಳು, ಕ್ಲೀನರ್‌ಗಳು, ಪಾತ್ರೆ ತೊಳೆಯುವವರು, ಕ್ಯಾಪ್ಟನ್ ಕೆಲಸಕ್ಕೆ, ಸೌತ್ ಇಂಡಿಯನ್ ಭಟ್ಟರು, ಟೀ ಕಾಫಿ ಮಾಡುವವರು, ಚೈನೀಸ್ ಮತ್ತು ಚಾಟ್ಸ್ ಮಾಡುವವರು ಬೇಕಾಗಿದ್ದಾರೆ. ಸಂಪರ್ಕಿಸುವ ಸಮಯ: 10.00 am ಇಂದ 6.00
7483730334

30x40 ಸೈಟು @ Rs.15 ಲಕ್ಷ
MUDA APPROVED LAYOUT
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ, ಚಾಮುಂಡಿ ಬೆಟ್ಟದ ಹಿಂಭಾಗ, ಲಾಲ್ ಬಹುದ್ದೂರ್ ಶಾಸ್ತ್ರಿ ನಗರದ ನಂತರ
9538583377

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ಬ್ಲೂ ಬರ್ಡ್ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಸಪ್ಲೆಯರ್ ಮತ್ತು ಕ್ಲೀನರ್‌ಗಳು ಬೇಕಾಗಿದ್ದಾರೆ. ಉತ್ತಮ ಆಕರ್ಷಕ ಸಂಬಳದೊಂದಿಗೆ ಊಟದ ವ್ಯವಸ್ಥೆ ಇರುತ್ತದೆ. ಬೇರೆ ಊರಿನಿಂದ ಬರುವವರಿಗೆ ವಸತಿ ವ್ಯವಸ್ಥೆ ಇರುತ್ತದೆ. ಸ್ಥಳ: 63/6, ಎಲೆ ತೋಟ ಸರ್ಕಲ್ ಹತ್ತಿರ, ಜೆ.ಎಲ್.ಬಿ ರಸ್ತೆ, ಮೈಸೂರು. ಸಂಪರ್ಕಿಸಿ:
8792475523

JOB OPPORTUNITY
For State / Central Govt/ Public Sector Companies VRS / NRI Retired officials, Ex Bankers, Reputed Banking Company invites application for the Positions of officers. Benifits: Fixed Salary+PF+ESI+other Variable incentives. Please Call
9449068132 / 8073004518

WANTED
Work from Home Office Assistant Female Only
ಹೊಸದಾಗಿ ಉದ್ಯಮ ಆರಂಭಿಸಲು ಆಸಕ್ತಿ ಇರುವ ಮಹಿಳಾ ಉದ್ಯಮಿಗಳು ಕರೆಮಾಡಿ
6363342788

ಮನೆ ಮಾರಾಟಕ್ಕಿದೆ
20x30 NF ಶ್ರೀರಾಂಪುರ (Near Naidu Store) Workshop Near, ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
9141915294 / 9379366388

ಶ್ರೀ ಕಾಳಿ ಅಸೋಸಿಯೇಷನ್
ನಮ್ಮಲ್ಲಿ ಎಲ್ಲಾ ವಿಧವಾದ ಹೋಮ್ ಲೋನ್ ದೊರೆಯುತ್ತದೆ. 11ಎ, 11ಬಿ ಮತ್ತು ಕಾರ್ಪೊರೇಷನ್ ನಿವೇಶನ ಸಾಲ ಮತ್ತು ವಾಹನ ಸಾಲ ದೊರೆಯುತ್ತದೆ. ಸಂಪರ್ಕಿಸಿ:
7259784408 7975453083

ಮೈಸೂರು ಮ್ಯಾರೇಜ್ ಬ್ಯೂರೋ
ಆರಾಧ್ಯ, ವೀರಶೈವ ಲಿಂಗಾಯತ, ಬ್ರಾಹ್ಮಣ, ಒಕ್ಕಲಿಗ, ಕುರುಬ, ಶಿವಾಜಿ ಮರಾಠ, ಭಾವಸಾರ ಕ್ಷತ್ರಿಯ, ಆದಿಕರ್ನಾಟಕ, ಭೋವಿ, ನಾಯರ್, ಮಡಿವಾಳ, ನಯನ ಕ್ಷತ್ರಿಯ, ಅಂತರಜಾತಿ ಮತ್ತು ಇನ್ನೂ ಎಲ್ಲಾ ಜಾತಿಯ ವಧು ವರರಿಗೆ ನೇರ ಸಂದರ್ಶನ.
ಡಾ. ಗುರೂಜಿ ಮೈಸೂರು
6361740552
www.bhandhana.com

ಕೌಶಲ್ ಗೃಹ ನಿರ್ಮಾಣ ಸಹಕಾರ ಸಂಘ ನಿ.,
(ನೋಂ. ಸಂಖ್ಯೆ: ಸನಿ41/ಎಂಕೆಟಿ–1/ನೋಂದಣಿ / 40617/11–12, ದಿನಾಂಕ: 07–01–2022)
ನಂ.530/1, 7ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ, ರಾಮಕೃಷ್ಣನಗರ, ಹೆಚ್.– ಬ್ಲಾಕ್, ಮೈಸೂರು – 570022.
11ನೇ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಯ ಸೂಚನಾ ಪತ್ರ.
ದಿನಾಂಕ: 25–09–2022, ಬೆಳಿಗ್ಗೆ 10.30 ಘಂಟೆಗೆ, ಸ್ಥಳ: ಕವೇರಿ ಆವರಣ ಅಧ್ಯಕ್ಷತೆ: ಶ್ರೀ.ಕೆ.ನಾಗೇಂದ್ರ,
ಆಡಳಿತ ಮಂಡಳಿ ಪರವಾಗಿ
ಸಹಿ/– ಕಾರ್ಯದರ್ಶಿ

ಬೇಕಾಗಿದ್ದಾರೆ (VACANCY)
ಕೂರಗಳ್ಳಿ ಇಂಡಸ್ಟ್ರೀಯಲ್ ಏರಿಯಾದಲ್ಲಿರುವ ಫರ್ನಿಚರ್ ಕಂಪನಿಗೆ 18 ರಿಂದ 50 ವರ್ಷದ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.
ಸಂಬಳ – 13,000/– (Net Salary)
Duty Time - 8.00 am to 7.00 pm
ಸಂಪರ್ಕಿಸಿ: ಕೋಮಲ್ ಎಂಟರ್ ಪ್ರೈಸಸ್, ಸಂದರ್ಶನ – ಎಕ್ಸೆಲ್ ಪಬ್ಲಿಕ್ ಸ್ಕೂಲ್ ಹತ್ತಿರ, ಕೂರಗಳ್ಳಿ
ರತ್ನಯ್ಯ: **9900889325**
ಪ್ರಕಾಶ: **08214191667**

ಪ್ರವೇಶ ಪ್ರಕಟಣೆ – 2022–23
ಎಂ.ಇ.ಎಸ್. ಕೈಗಾರಿಕಾ ತರಬೇತಿ ಸಂಸ್ಥೆ,
ತಿಲಕ್ ನಗರ, ಮೈಸೂರು – 01 ರಲ್ಲಿ
Electrician, Electronics Mechanic & Fitter
ವೃತ್ತಿಗಳಲ್ಲಿ ಕೆಲವೊಂದು ಸೀಟುಗಳು ಮಾತ್ರ ಲಭ್ಯವಿರುತ್ತದೆ. ಪ್ರವೇಶ ಪಡೆಯಲು ಕೊನೆಯ ದಿನಾಂಕ: 30/09/2022, ಕೂಡಲೇ ಸಂಪರ್ಕಿಸಿ
0821-2494654 9844403929

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಸಂಸ್ಥೆಯಿಂದ ಆಯುಷ್ಮಾನ್ ಗ್ರೂಪ್ಸ್ ವತಿಯಿಂದ "ಹೋಂ ನರ್ಸಿಂಗ್", "ಸೆಕ್ಯೂರಿಟಿ ಗಾರ್ಡ್" ಹಾಗೂ "ಹೌಸ್ ಕೀಪಿಂಗ್" ಕೆಲಸಕ್ಕೆ ಯುವಕ, ಯುವತಿಯರು ಮತ್ತು ಪುರುಷರು, ಮಹಿಳೆಯರು ಬೇಕಾಗಿದ್ದಾರೆ. ವಯೋಮಿತಿ: 18 ರಿಂದ 50 ವರ್ಷಗಳು, ವಿದ್ಯಾರ್ಹತೆ: 7 ರಿಂದ ಡಿಗ್ರಿವರೆಗೂ. ಸಂಪರ್ಕಿಸಿ:
9606714441 / 9880570381
0821-4242351

ಕೆಲಸಕ್ಕೆ ಬೇಕಾಗಿದ್ದಾರೆ
1) ಸೌತ್ ಇಂಡಿಯನ್ ಅಡುಗೆ ಭಟ್ಟರು
2) ಕಾಫೀ / ಟೀ ಮಾಡುವವರು
3) ಇಡ್ಲಿ / ವಡೇ/ಪೂರಿ ಹಾಕುವವರು
4) ಪಾರ್ಸೆಲ್ ಕಟ್ಟುವವರು.
5) ದೋಸೆ ಭಟ್ಟರು.
6) ಹಿಟ್ಟು ರುಬ್ಬುವವರು
7) ಕೌಂಟರ್ ಕೆಲಸಕ್ಕೆ ಸಂಪರ್ಕಿಸಿ:
9986205777

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಕುವೆಂಪುನಗರ, ಮೈಸೂರು
8495899232 9844762028

COMMERCIAL SPACE FOR RENT
1st Floor - 1500 Sq.Ft
2nd Floor - 1500 Sq.Ft
3rd Floor - 6 Rooms available, Mahamane Circle, Dattagalli.
9632152727

ಲೇಡಿಸ್ PG ಬಿಲ್ಡಿಂಗ್ ಬಾಡಿಗೆಗೆ
ಎಲ್ಲಾ ಸೌಕರ್ಯವಿದ್ದು, ರನ್ನಿಂಗ್‌ನಲ್ಲಿ ಇರುತ್ತದೆ. NIE ಕಾಲೇಜ್‌ಗೆ ಹತ್ತಿರ, ವಿದ್ಯಾರಣ್ಯಪುರಂ, ಮೈಸೂರು–08
9980135125 9880218669

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇ ಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
9880813586 6360884930

ಜಮೀನು ಬೇಕಾಗಿದೆ
ತೋಟಗಾರಿಕೆಗೆ ಸೂಕ್ತ 1 ಎಕರೆ, ಮೈಸೂರು. ದೂರ ಗ್ರಾಮ ರಸ್ತೆ ಬದಿ, ಉದ್ಬೂರಿನಿಂದ ಮುಂದಕ್ಕೆ
9880395655

ಜೀವನ್ ಕಲ್ಯಾಣ್ ಭಾಗ್ಯ
ಲಿಂಗಾಯತ, ಒಕ್ಕಲಿಗ, ಬ್ರಾಹ್ಮಣ, ಕುರುಬ, ಆದಿ ಕರ್ನಾಟಕ, ನಾಯಕ, ಮರಾಠ, ತಮಿಳು, ಈಡಿಗ ಇನ್ನೂ ಎಲ್ಲಾ ಜಾತಿಯ ವಧುವರರಿಗೆ ನೇರ ಸಂಪರ್ಕಿಸಿ. Lady Receptionist ಬೇಕಾಗಿದ್ದಾರೆ
8971818008

SNS ENTERPRISES
ಉಚಿತ ತರಬೇತಿ, ಉಚಿತವಾಗಿ ಕಂಪ್ಯೂಟರ್ ಶಿಕ್ಷಣವನ್ನು 3 ತಿಂಗಳ ಕಾಲ ಹೇಳಿಕೊಡಲಾಗುತ್ತದೆ. ವಿದ್ಯಾರ್ಹತೆ 2nd PUC Pass ಸ್ಥಳ: ಜಯನಗರ, ಮೈಸೂರು
9880604416 9740301234

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓ.ಟಿ, 15,200–86000.
9740733021 / 9535028750

ಮನೆಯಿಂದಲೇ ಕೆಲಸ
ಆಫ್ ಲೈನ್ ಡೇಟಾ ಎಂಟ್ರಿ ಸ್ಟೋರಿ ಬುಕ್ ರೈಟಿಂಗ್, ನಂಬರ್ ಫಾರಂ ಫಿಲ್ಲಿಂಗ್ ಕೆಲಸಗಳು ಗೃಹಿಣಿಯರು, ನಿವೃತ್ತರು, ವಿದ್ಯಾರ್ಥಿಗಳು ಎಲ್ಲರಿಗೂ ಅವಕಾಶ ಗಳಿಸಿ ತಿಂಗಳಿಗೆ 15,000 ದಿಂದ 20,000
7019736438 9148785942

ಸಿವಿಲ್ ಎಂಜಿನಿಯರ್‌ಗಳು ಬೇಕಾಗಿದ್ದಾರೆ
ವಸತಿ ಬಡಾವಣೆಯ ನಿರ್ಮಾಣ ಕಾರ್ಯದಲ್ಲಿ ಮತ್ತು ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಅನುಭವ ಇರುವ ಸಿವಿಲ್ ಎಂಜಿನಿಯರ್‌ಗಳು ಮೈಸೂರಿನಲ್ಲಿರುವ ಪ್ರತಿಷ್ಠಿತ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಸಂಸ್ಥೆಗೆ ಬೇಕಾಗಿದ್ದಾರೆ. ಸಂದರ್ಶನಕ್ಕಾಗಿ ಕರೆಮಾಡಿ.
8123548621

COMMERCIAL SITE FOR SALE
40x60 East Facing, 60 feet Road.
* Vijayanagar, 4th Stage, 2nd Phase.
9743532664

MUDA SITES FOR SALE
In Vijayanagar 4th Stage
SHOPS FOR SALE
MUDA Complex, Ramkrishnanagar, Mysuru
9483358399

WANTED
Logistics Incharge, (3 Years Exp.), Machine Operator, ITI, Fitter (2 Years Exp)
Accounts Executive B.Com, M.Com (2 Year Exp)
Send Resumes to coldstorage.btc@gmail.com
9535999445

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಶ್ರೀರಂಗಪಟ್ಟಣ ದಸರೆಗೆ ಸುತ್ತೂರು ಶ್ರೀಗಳಿಗೆ ಆಹ್ವಾನ

ದಸರಾ ಪೋಸ್ಟರ್ ಬಿಡುಗಡೆಗೊಳಿಸಿ ಶುಭ ಹಾರೈಸಿದ ಶ್ರೀಗಳು



ಶ್ರೀರಂಗಪಟ್ಟಣ, ಸೆ23– ಶ್ರೀರಂಗಪಟ್ಟಣದಲ್ಲಿ ಸೆ.28 ರಿಂದ ಅ.2 ರವರೆಗೆ ನಡೆಯುವ ಐತಿಹಾಸಿಕ ವೈಭವಯುತ ಪಾರಂಪರಿಕ ದಸರಾ–2022ರ ಉದ್ಘಾಟನೆಗೆ ಶ್ರೀ ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಅವರನ್ನು ಆಹ್ವಾನಿಸಲಾಯಿತು.

ಜಿಲ್ಲಾಡಳಿತದ ವತಿಯಿಂದ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಹಾಗೂ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ನಾರಾಯಣಗೌಡ ಅವರು, ಜಿಲ್ಲಾಧಿಕಾರಿಗಳೊಂದಿಗೆ ಬೆಂಗಳೂರಿನ ಬನಶಂಕರಿಯಲ್ಲಿರುವ ಮಠಕ್ಕೆ ತೆರಳಿ ಶ್ರೀಗಳನ್ನು ಭೇಟಿ ಮಾಡಿ ದಸರಾ ಉದ್ಘಾಟನೆಗೆ ಆಹ್ವಾನಿಸಿದರು.

ಇದೇ ವೇಳೆ ಶ್ರೀರಂಗಪಟ್ಟಣ ದಸರಾ ಮಹೋತ್ಸವ–2022ರ ಪೋಸ್ಟರ್ ಅನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಗಳು ಬಿಡುಗಡೆ ಗೊಳಿಸಿ ಮಾತನಾಡಿದ ಶ್ರೀಗಳು ಶ್ರೀರಂಗಪಟ್ಟಣ ದಸರಾ ಮಹೋತ್ಸವಕ್ಕೆ ತನ್ನದೇ ಆದ ಇತಿಹಾಸವಿದೆ. ಶ್ರೀರಂಗಪಟ್ಟಣದಲ್ಲಿ ಸೆ.28 ರಿಂದ ಅ.2 ರವರೆಗೆ ನಡೆಯುವ ದಸರಾ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಶುಭಾರಂಭವಾಗಿದೆ ಎಂದರು.

ಶ್ರೀರಂಗಪಟ್ಟಣದಲ್ಲಿ ಐದು ದಿನಗಳ ಕಾಲ ನಡೆಯುವ ದಸರಾದ ಎಲ್ಲಾ ಕಾರ್ಯಕ್ರಮಗಳಿಗೆ ಶುಭವಾಗಲಿ ಹಿಂದಿನ ಮೆರಗನ್ನು ಮತ್ತೇ ಪ್ರಜ್ವಲಿಸಲಿ ಎಂದು ಹೇಳಿದರು.

ಸಚಿವ ಕೆ.ಗೋಪಾಲಯ್ಯ ಅವರು ಮಾತನಾಡಿ, ಶ್ರೀರಂಗಪಟ್ಟಣ ದಸರಾ ಯಶಸ್ವಿಯಾಗಿ ನಡೆಯಬೇಕು. ಮೈಸೂರು ದಸರಾ ಮತ್ತು ಶ್ರೀರಂಗಪಟ್ಟಣ ಪ್ರವಾಸಿ ಸ್ಥಳಗಳಿಗೆ ದೇಶ ವಿದೇಶದಿಂದ ಜನರು ಆಗಮಿಸಲಿದ್ದಾರೆ. ದಸರಾ ಬಹಳ ವೈಭವಯುತವಾಗಿ ನಡೆಯಲಿದೆ ಕಳೆದ ಎರಡು ವರ್ಷದಿಂದ ಕೊರೊನಾ ಹಿನ್ನೆಲೆಯಲ್ಲಿ ದಸರಾವನ್ನು ಸರಳವಾಗಿ ಆಚರಿಸಲಾಗಿತ್ತು. ಈ ಬಾರಿ 5 ದಿನಗಳ ಕಾಲ ದಸರಾ ಆಚರಣೆಗೆ ಸರ್ಕಾರ ಹೆಚ್ಚಿನ ಒತ್ತು ನೀಡಿದೆ ಎಂದು ತಿಳಿಸಿದರು.

ಸೆ.28ರಿಂದ ದಸರಾ ಆರಂಭ

ಶ್ರೀರಂಗಪಟ್ಟಣದ ದಸರಾ ಪರಂಪರೆ ನಿರಂತವಾಗಿ ಉಳಿದುಕೊಳ್ಳಬೇಕು. ಎಲ್ಲರ ಸಹಕಾರದಿಂದ ದಸರಾವನ್ನು ಬಹಳ ವಿಜೃಂಭಣೆಯಿಂದ ಆಚರಿಸೋಣ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು, ವಿವಿಧ ಇಲಾಖೆ ಅಧಿಕಾರಿಗಳು ಸೇರಿದಂತೆ ಜಿಲ್ಲೆಯ ಜನರು ಖುಷಿಯಿಂದ ಭಾಗವಹಿಸಿ ಎಂದು ರೇಷ್ಮೆ, ಯುವಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ನಾರಾಯಣಗೌಡ ಕರೆ ನೀಡಿದರು.

ಜಿಲ್ಲಾಧಿಕಾರಿ ಎಸ್.ಅಶ್ವತಿ, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಾಂತಾ ಹುಲ್ಮನಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ರುದ್ರನ್, ಪಾಂಡವಪುರ ಉಪವಿಭಾಗಾಧಿಕಾರಿ ಶಿವಾನಂದಮೂರ್ತಿ, ವಾರ್ತಾಧಿಕಾರಿ ನಿರ್ಮಲ ಎಸ್. ಹೆಚ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಪೌರಕಾರ್ಮಿಕ ಮಕ್ಕಳು ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಸದೃಢರಾಗಬೇಕು: ತುಷಾರಮಣಿ



ಮಂಡ್ಯ,ಸೆ23– ರೈತರು, ಕುಂಬಾರಿಕೆ, ನೇಕಾರರು ನಮ್ಮ ಮುತ್ತಾತಂದಿರೇ ಆಗಿದ್ದರು, ಆದರೆ, ಅವರ ಕುಲಕಸುಬನ್ನು ಮರೆಯುತ್ತಿದ್ದೇವೆ ಎಂದು ನಗರಸಭೆಯ ಯೋಜನಾ ನಿರ್ದೇಶಕಿ ತುಷಾರಮಣಿ ಬೇಸರ ವ್ಯಕ್ತಪಡಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ನಗರಸಭೆ ಸಹಯೋಗದಲ್ಲಿ ನಡೆದ ಪೌರಕಾರ್ಮಿಕ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ರೈತರು, ಕುಂಬಾರಿಕೆ, ನೇಕಾರರು, ಅಕ್ಕಸಾಲಿಗ, ಮಡಿವಾಳ ಸೇರಿದಂತೆ ವಿವಿಧ ಸಮುದಾಯದ ಕುಲಕಸುಬುಗಳನ್ನು ಮಾಡಿಕೊಂಡು ನಮ್ಮ ತಾತಂದಿರು ಹಾಗೂ ಮುತ್ತಾತಂದಿರು ಹೋಗುತ್ತಿದ್ದರು. ಆದರೆ, ಈಗ ಅದನ್ನು ನಾವು ಮರೆಯುತ್ತಿದ್ದೇವೆ ಎಂದು ವಿಷಾದಿಸಿದರು.

ಕುಲಕಸುಬು ಮರೆತವರು, ಹೊಸ ಉದ್ಯೋಗವನ್ನು ಹುಡುಕಿಕೊಂಡು ಹೋಗುತ್ತಿದ್ದಾರೆ, ಒಟ್ಟಿನಲ್ಲಿ ನಿಮ್ಮ ತಾತ, ಮುತ್ತಾತಂದಿರು ಒಂದು ರೀತಿಯಲ್ಲಿ ಪೌರಕಾರ್ಮಿಕರೇ ಆಗಿದ್ದರು, ಪೌರಕಾರ್ಮಿಕರ ಮಕ್ಕಳು ಪೌರಕಾರ್ಮಿಕರಾಗಿಯೇ ಮುಂದುವರಿಯುತ್ತಿದ್ದಾರೆ, ಪೌರಕಾರ್ಮಿಕರ ಮಕ್ಕಳು ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಸದೃಢರಾಗಬೇಕು ಎಂದು ಸಲಹೆ ನೀಡಿದರು.

ದೇಶದಲ್ಲಿ ವಿದ್ಯಾಭ್ಯಾಸ ಮುಂದುವರಿಸುವಂತ ಬೆಳವಣಿಗೆಯನ್ನು ಬೆಳೆಸಿಕೊಳ್ಳಬೇಕು. ಪೌರಕಾರ್ಮಿಕರು ತಳಮಟ್ಟದ ಕೆಲಸವನ್ನೇ ಕೇಳಿಕೊಂಡು ಬರುವ ಜನರೇ ಹೆಚ್ಚು ಸಿಗುತ್ತಿದ್ದಾರೆ, ಬದಲಿಗೆ ದೊಡ್ಡ ಹುದ್ದೆಯನ್ನು ಕೇಳುತ್ತಿಲ್ಲ, ಯಾವುದೇ ಕೆಲಸ ಕೀಳು ಎನ್ನುವುದಿಲ್ಲ, ಆದರೆ, ಅವಕಾಶಗಳನ್ನು ಬಳಸಿ ಕೊಳ್ಳಬೇಕು. ಇದರಿಂದ ಆರ್ಥಿಕವಾಗಿ ಸಬಲರಾಗಲು ಸಾಧ್ಯವಾಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಸಾಗಬೇಕು ಎಂದರು.

ನಗರಸಭೆ ಅಧ್ಯಕ್ಷ ಎಚ್.ಎಸ್.ಮಂಜು ಮಾತನಾಡಿ, ಪೌರಕಾರ್ಮಿಕರ ಕಸುಬು ಕಾಯಕದಲ್ಲಿ ಶ್ರೇಷ್ಠವಾದುದು, ಸ್ವಚ್ಛತಾ ಅಭಿಯಾನದ ಸ್ವಾಭಿಮಾನಿಗಳಾದ ನೀವು ನೀವಿಲ್ಲದೇ ನಮ್ಮ ಸಮಾಜದಲ್ಲಿನ ವ್ಯವಸ್ಥೆ ಕಲ್ಪಿಸಲು ಸಾಧ್ಯವಿಲ್ಲ, ತಮ್ಮ ಜೀವನವನ್ನೇ ಆರೋಗ್ಯ ಕಾಳಜಿ ಮರೆತು ಸ್ವಚ್ಛತಾ ಕಾರ್ಯದಲ್ಲಿ ತೊಡಗುವ ಇವರು ದೇವರಿಗೆ ಸಮಾನರಾಗಿ ಕಾಣುತ್ತಾರೆ ಎಂದು ತಿಳಿಸಿದರು.

ಪೌರಕಾರ್ಮಿಕರನ್ನು ಗೌರವಿಸಬೇಕು. ಅವರಿಗೂ ಸಮಾಜದಲ್ಲಿ ಗೌರವ ಸಿಗುವಂತಹ ಬೆಳವಣಿಗೆಗಳು ಆಗಬೇಕು. ಸಮಾಜದಲ್ಲಿ ಆರ್ಥಿಕ ಸಬಲತೆ ಹೊಂದುವ ಮೂಲಕ ಉತ್ತಮ ಬಾಳ್ವೆ ನಡೆಸುವ ವಾತಾವರಣವನ್ನು ಸೃಷ್ಟಿಸಬೇಕು. ಪೌರಕಾರ್ಮಿಕರು ತಮ್ಮ ವೃತ್ತಿ ಜೀವನದಲ್ಲಿ ಆರೋಗ್ಯವನ್ನೇ ಮರೆತಿದ್ದಾರೆ, ಅಂತಹವರಿಗೆ ಪುರಸ್ಕರಿಸಿ ಗೌರವಿಸಬೇಕು. ಕೊರೊನಾ ಸಂದರ್ಭದಲ್ಲಿ ಅವರ ಕೆಲಸ ಎಂದಿಗೂ ಮರೆಯುವಂತಿಲ್ಲ ಎಂದರು. ಕಾರ್ಯಕ್ರಮದಲ್ಲಿ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು. ವಸತಿ ಯೋಜನೆಯಡಿ ಸಾಂಕೇತಿಕವಾಗಿ ಹಕ್ಕುಪತ್ರಗಳನ್ನು ಸಹ ವಿತರಣೆ ಮಾಡಿ, ಪೌರಕಾರ್ಮಿಕರಿಗೆ ಏರ್ಪಡಿಸಿದ್ದ ಕ್ರೀಡಾಕೂಟದಲ್ಲಿ ಭಾಗವಹಿಸಿ ಗೆದ್ದವರಿಗೂ ಬಹುಮಾನಗಳನ್ನು ಗಣ್ಯರು ನೀಡಿದರು.

ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಮೀನಾಕ್ಷಿ ಸದಸ್ಯರಾದ ಮಂಜುಳಾ, ಜಾಕೀರ್ ಪಾಷ, ಪೂರ್ಣಿಮಾ, ಅರುಣ್‌ಕುಮಾರ್, ಶಿವಪ್ರಕಾಶ್, ಕುಮಾರ್, ಶ್ರೀಧರ್, ಸೌಭಾಗ್ಯ, ರವಿ, ಪೌರಾಯುಕ್ತ ಮಂಜುನಾಥ್ ಸೇರಿದಂತೆ ಅಧಿಕಾರಿಗಳು ಹಾಗೂ ಪೌರಕಾರ್ಮಿಕರು ಭಾಗವಹಿಸಿದ್ದರು.



ಮಂಡ್ಯ ತಾಲೂಕಿನ ಕೆರಗೋಡು ಹೋಬಳಿಯ ಉಪ್ಪರಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಉಪ್ಪರಕನಹಳ್ಳಿ, ಮಲ್ಲಾಘಟ್ಟ, ಚೋಕನಹಳ್ಳಿ, ಕರಡಿಕೊಪ್ಪಲು, ಹಂಪಾಪುರ ಹಾಗೂ ಇತರೆ ಗ್ರಾಮಗಳ ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ ಶ್ರೀ ಶಂಭು ಸೇವಾ ಟ್ರಸ್ಟ್ ವತಿಯಿಂದ ಉಚಿತವಾಗಿ ಶಾಲಾ ಬ್ಯಾಗ್‌ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಶಂಭು ಸೇವಾ ಟ್ರಸ್ಟ್ ಹಾಗೂ ಮನ್ಮುಲ್ ಅಧ್ಯಕ್ಷ ಬಿ.ಆರ್. ರಾಮಚಂದ್ರು, ಉಪ್ಪರಕನಹಳ್ಳಿ ಗ್ರಾಪಂ ಅಧ್ಯಕ್ಷೆ ಭಾಗ್ಯಲಕ್ಷ್ಮಿ, ಕರ್ನಾಟಕ ರಾಜ್ಯ ಗಂಗಾ ಮತಸ್ಥರ ಉಪಾಧ್ಯಕ್ಷರಾದ ತಮ್ಮಣ್ಣ, ಪಾಲನೇತ್ರ ಬಿ.ಆರ್.ಸುರೇಶ್, ಪುಟ್ಟಸ್ವಾಮಿ, ಬಿಡದಿ ಬಸವ, ಬಾಲರಾಜು, ಮಾಸ್ತಿಗೌಡ, ಗ್ರಾಮದ ಮುಖಂಡರು, ಯುವಕರು ಹಾಗೂ ಅಕ್ಕ ಪಕ್ಕದ ಗ್ರಾಮಸ್ಥರು ಉಪಸ್ಥಿತರಿದ್ದರು.

ಏಕಮುಖ ಸಂಚಾರಕ್ಕೆ ಜಿಲ್ಲಾಧಿಕಾರಿಗಳಿಂದ ಆದೇಶ

ಮಂಡ್ಯ, ಸೆ.23– ದಸರಾ ಹಬ್ಬದ ಹಿನ್ನೆಲೆಯಲ್ಲಿ ಸೆ.24 ರಿಂದ ಅಕ್ಟೋಬರ್ 09 ವರೆಗೆ ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ಕೆ.ಆರ್.ಸಾಗರ ಹಾಗೂ ಬೃಂದಾವನ ಗಾರ್ಡನ್ ವೀಕ್ಷಿಸಲು ಬರುವ ಎಲ್ಲಾ ಮಾದರಿಯ ವಾಹನಗಳು ಏಕಮುಖ ಸಂಚಾರ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಎಸ್.ಅಶ್ವತಿ ಅವರು ಆದೇಶ ಹೊರಡಿಸಿದ್ದಾರೆ.

ದಸರಾ ಹಬ್ಬದ ಹಿನ್ನೆಲೆಯಲ್ಲಿ ಪ್ರವಾಸಿಗರಿಗೆ ಹಾಗೂ ಸಾರ್ವಜನಿಕರಿಗೆ ಸುಗಮ ಸಂಚಾರದ ವ್ಯವಸ್ಥೆಯನ್ನು ಮಾಡಿ ಕೊಡಬೇಕಾಗಿರುವುದರಿಂದ ಮೈಸೂರು ಕಡೆಯಿಂದ ಹಾಗೂ ಕಟ್ಟೇರಿ ಕಡೆಯಿಂದ ಕೆ.ಆರ್. ಸಾಗರ ಮತ್ತು ಬೃಂದಾವನ ಗಾರ್ಡನ್ ವೀಕ್ಷಿಸಲು ಬರುವ ಮತ್ತು ಬೃಂದಾವನ ವೀಕ್ಷಿಸಿದ ನಂತರ ವಾಪಸ್ ಹೊರಡುವ ಎಲ್ಲಾ ಮಾದರಿಯ ವಾಹನಗಳು ಹೊಸ ಸೇತುವೆಯಿಂದ ಉತ್ತರಕ್ಕೆ ತಿರುಗಿ ನಾರ್ಥ್ ಬ್ಯಾಂಕ್, ಕಟ್ಟೇರಿ, ಅರಳಕುಪ್ಪೆ ಎಲೆಕೆರೆ ಹ್ಯಾಂಡ್ ಪೋಸ್ಟ್ ಮಾರ್ಗ ಕೆ.ಆರ್.ಪೇಟೆ ರಸ್ತೆಯಲ್ಲಿ ಚಲಿಸಿ,ಮೈಸೂರು ಬೆಂಗಳೂರು ಹಾಗೂ ಇತರೆ ಕಡೆಗಳಿಗೆ ಏಕಮುಖವಾಗಿ ಸಂಚರಿಸುವಂತೆ ಆದೇಶದಲ್ಲಿ ತಿಳಿಸಿದ್ದಾರೆ.

ಆದಿಚುಂಚನಗಿರಿಯಲ್ಲಿ ರಾಜ್ಯಮಟ್ಟದ ಜಾನಪದ ಕಲಾಮೇಳ

ಐವರು ಸಾಧಕರಿಗೆ ಚುಂಚಶ್ರೀ ಪ್ರಶಸ್ತಿ ಪ್ರದಾನ

ನಾಗಮಂಗಲ, ಸೆ.23– ತಾಲೂಕಿನ ಆದಿ ಚುಂಚನಗಿರಿಯಲ್ಲಿ ರಾಜ್ಯಮಟ್ಟದ 43ನೇ ಜಾನಪದ ಕಲಾಮೇಳ ಮತ್ತು ಚುಂಚಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ಡಾ.ಶ್ರೀ ನಿರ್ಮಲಾ ನಂದನಾಥ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಅದ್ಧೂರಿಯಾಗಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಾನಪದ ಪರಿಷತ್ ಅಧ್ಯಕ್ಷ ಡಾ.ಹಿ.ಶಿ. ರಾಮಚಂದ್ರಗೌಡ, ಜನಪದ ಎಂದರೆ ಮನರಂಜನೆಯಲ್ಲ. ಜಾನಪದ ನಮ್ಮ ಜನರು ಪ್ರಕೃತಿಯನ್ನು ಗೆಲ್ಲಲು ಮಾಡಿಕೊಂಡಿರುವ ವ್ಯವಸ್ಥೆ. ಜನಪದ ನಮ್ಮ ಮೂಲಜ್ಞಾನವಾಗಿದ್ದು, ಅದನ್ನು ಬೆಳೆಸಿಕೊಂಡು ಹೋದರೆ ಮಾತ್ರ ಸೃಜನಶೀಲ ಸಮಾಜ ಸೃಷ್ಟಿ ಸಾಧ್ಯ ಎಂದರು.

ಶ್ರೀಮಠದ ಕಾರ್ಯದರ್ಶಿ ಶ್ರೀಪ್ರಸನ್ನನಾಥ ಸ್ವಾಮೀಜಿ ಪ್ರಾಸ್ತಾವಿಕ ನುಡಿಗಳನ್ನಾಡಿ,



ಭೈರವೈಕ್ಯ ಶ್ರೀ ಡಾ.ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರಿಂದ ಪ್ರಾರಂಭಗೊಂಡು ಕಳೆದ 43 ವರ್ಷಗಳಿಂದ ಅನೂಚಾನವಾಗಿ ನಡೆಯುತ್ತಿರುವ ಜಾನಪದ ಕಲಾಮೇಳದ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ನಗರಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಅಜಯ್ ನಾಗಭೂಷಣ್ ಮಾತನಾಡಿದರು. ಇದೇ ವೇಳೆ ಶ್ರೀಮಠದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡಿದರು.

ಚುಂಚಶ್ರೀ ಪ್ರಶಸ್ತಿ ಪ್ರದಾನ: ಪ್ರತಿ ವರ್ಷದಂತೆ ಈ ವರ್ಷವೂ ಸಾಧಕರಿಗೆ ಚುಂಚಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪರಿಸರ ಕ್ಷೇತ್ರದಲ್ಲಿ ತುಳಸಿಗೌಡ, ಸಮಾಜ ಸೇವೆ ಕಬ್ಬಳಿ ರಂಗೇಗೌಡ, ಪಶುವೈದ್ಯಕೀಯ ಸೇವೆಗಾಗಿ ಡಾ.ಕೆ.ಎಸ್. ಜಯರಾಮು, ಧಾರ್ಮಿಕ ಸೇವೆಗಾಗಿ ಸಭೇಶ್ ಆಚಾರ್ಯ, ಜಾನಪದ ಕ್ಷೇತ್ರದಲ್ಲಿ ಗುರುರಾಜ್ ಅವರಿಗೆ ಡಾ.ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಚುಂಚಶ್ರೀ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಶಸ್ತಿಯು 50 ಸಾವಿರ ರೂ. ಹಾಗೂ ಪ್ರಶಸ್ತಿ ಫಲಕವನ್ನೊಳಗೊಂಡಿತ್ತು.

ನಾಡೋಜ ಡಾ.ಹೆಚ್.ಎಲ್.ನಾಗೇಗೌಡ ಪ್ರಶಸ್ತಿ: ಗೊರವನಕುಣಿತ ಖ್ಯಾತಿಯ ಪೂಜಾರಿ ಮಲ್ಲಯ್ಯ ಮತ್ತು ಕಾಡುಗೊಲ್ಲರ ಕೋಲಾಟ ಖ್ಯಾತಿಯ ಜುಂಜಯ್ಯ ಅವರಿಗೆ ನಾಡೋಜ ಡಾ.ಹೆಚ್.ಎಲ್.ನಾಗೇಗೌಡ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಸಮಾರಂಭಕ್ಕೂ ಮುನ್ನಾ, ರಥ ಬೀದಿಯಿಂದ ಶ್ರೀಮಠದವರೆಗೆ ಶ್ರೀಗಳು ಮತ್ತು ಪ್ರಶಸ್ತಿ ಪುರಸ್ಕೃತರ ಮೆರವಣಿಗೆ ನೆರವೇರಿತು. ಸಮಾರಂಭದಲ್ಲಿ ಕಾರವಾರ ಶಾಸಕಿ ರೂಪಾಲಿ ನಾಯಕ್, ಶ್ರೀ ಪುರುಷೋತ್ತಮಾ ನಂದನಾಥ ಸ್ವಾಮೀಜಿ, ಶ್ರೀ ಸೋಮೇಶ್ವರ ನಾಥ ಸ್ವಾಮೀಜಿ, ಶ್ರೀ ಶಂಭುನಾಥ ಸ್ವಾಮೀಜಿ, ಶ್ರೀ ಧರ್ಮಪಾಲನಾಥ ಸ್ವಾಮೀಜಿ, ಶ್ರೀ ಚೈತನ್ಯನಾಥ ಸ್ವಾಮೀಜಿ ಸೇರಿದಂತೆ ಇನ್ನಿತರರಿದ್ದರು.

ಕಾಂಗ್ರೆಸ್ ಅಲ್ಪ ಸಂಖ್ಯಾತ ಘಟಕದ ಅಧ್ಯಕ್ಷರ ನೇಮಕ



ಶ್ರೀರಂಗಪಟ್ಟಣ, ಸೆ.23– ಶ್ರೀರಂಗಪಟ್ಟಣ ನಗರ ಕಾಂಗ್ರೆಸ್ ಅಲ್ಪ ಸಂಖ್ಯಾತ ಘಟಕದ ಅಧ್ಯಕ್ಷರಾಗಿ ಗಂಜಾಂನ ಸೈಯದ್ ರಿಯಾಜ್ ಕಾಬೂಲ್ ಅವರನ್ನು ನೇಮಿಸಲಾಗಿದೆ ಎಂದು ಜಿಲ್ಲಾಧ್ಯಕ್ಷ ಮುಜಾಹಿದ್ ಅಲಿಖಾನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ದಸರಾ ಹೊಸ್ತಿಲಲ್ಲಿ ತರಾತುರಿಯ ಡಾಂಬರೀಕರಣ



ಮೈಸೂರು, ಸೆ.23(ಆರ್‌ಕೆ)– ದಸರಾ ಮಹೋತ್ಸವ ಆರಂಭಕ್ಕೆ ಇನ್ನು ಎರಡೇ ದಿನ ಬಾಕಿ. ಮೈಸೂರು ನಗರದಾದ್ಯಂತ ಎಲ್ಲಾ ಪ್ರಮುಖ ರಸ್ತೆಗಳ ಡಾಂಬರೀಕರಣ ಕಾಮಗಾರಿ ಭರದಿಂದ ಸಾಗಿದೆ.

ಮೈಸೂರು ಮಹಾನಗರ ಪಾಲಿಕೆಯು, ಶಾಸಕರುಗಳ ಅನುದಾನ ಹಾಗೂ ದಸರಾ ವಿಶೇಷ ಅನುದಾನದಡಿ 40ಕ್ಕೂ ಹೆಚ್ಚು ರಸ್ತೆಗಳಿಗೆ ಡಾಂಬರ್ ಹಾಕುವ ಕೆಲಸ ಆರಂಭಿಸಿದ್ದು, ಪ್ರಗತಿಯಲ್ಲಿರುವ ಕಾಮಗಾರಿಯನ್ನು ಮೇಯರ್ ಶಿವಕುಮಾರ್ ಇಂದು ಪರಿಶೀಲಿಸಿದರು. ನಾರಾಯಣಶಾಸ್ತ್ರಿ ರಸ್ತೆ, ಡಿ.ಸುಬ್ಬಯ್ಯ ರಸ್ತೆ, ಕೃಷ್ಣರಾಜ ಬುಲೇವಾರ್ಡ್ ರಸ್ತೆ, ಉದಯಗಿರಿಯ ಪಂಚಮಂತ್ರ ರಸ್ತೆ, ಉದಯ ರವಿ ರಸ್ತೆ, ವಿಶ್ವಮಾನವ ಜೋಡಿ ರಸ್ತೆ, ಚದುರಂಗ ರಸ್ತೆ, ಕಾಂತರಾಜ ರಸ್ತೆ, ಲಷ್ಕರ್ ಮೊಹಲ್ಲಾದ ಫೈವ್ ಲೈಟ್ ಸರ್ಕಲ್, ಟಿಪ್ಪು ಸರ್ಕಲ್, ಫೌಂಟನ್ ಸರ್ಕಲ್, ಬನ್ನಿಮಂಟಪದ ಮಿಲೇನಿಯಂ ಸರ್ಕಲ್‌ನಿಂದ ಕೊಲಂಬಿಯಾ ಏಷಿಯಾ ಆಸ್ಪತ್ರೆವರೆಗಿನ ರಸ್ತೆ, ಹೈವೇ ಸರ್ಕಲ್, ಬಿ.ಎನ್.ರಸ್ತೆ, ನಜರ್‌ಬಾದ್‌ನ ಪ್ರಮುಖ ರಸ್ತೆಗಳಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಏಕ ಕಾಲದಲ್ಲಿ ಗುತ್ತಿಗೆದಾರರು ಕೆಲಸ ಮಾಡುತ್ತಿದ್ದಾರೆ.

ಅಲ್ಲದೆ, ಫುಟ್‌ಪಾತ್‌ನ ಕರ್ಬ್‌ಸ್ಟೋನ್, ರಸ್ತೆ ವಿಭಜಕಗಳಿಗೆ ಬಣ್ಣ ಬಳಿಯುವ, ಪ್ರಮುಖ ರಸ್ತೆ ಬದಿಯ ಮರಗಳ ರೆಂಬೆ ಕತ್ತರಿಸುವ ಕೆಲಸವೂ ತರಾತುರಿಯಲ್ಲಿ ನಡೆಯುತ್ತಿದ್ದು, ಸರ್ಕಾರಿ ಕಚೇರಿಗಳ ಕಾಂಪೌಂಡ್ ರಿಪೇರಿ, ಪೇಂಟಿಂಗ್ ಕಾಮಗಾರಿಯೂ ತೀವ್ರ ಗತಿಯಲ್ಲಿ ನಡೆಯುತ್ತಿದೆ.

ಮೈಸೂರು ಮಹಾನಗರ ಪಾಲಿಕೆ, ಮುಡಾ ಹಾಗೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ರಸ್ತೆ ಕಾಮಗಾರಿಗಳಿಗೆ ವರ್ಕ್ ಆರ್ಡರ್ ನೀಡಿದ್ದು, ಹಗಲು–ರಾತ್ರಿ ಕೆಲಸ ಮಾಡಿಸುತ್ತಿದ್ದಾರೆ. ಸೆಪ್ಟೆಂಬರ್ 26 ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದಸರಾ ಮಹೋತ್ಸವ ಉದ್ಘಾಟಿಸುವುದರಿಂದ ಪೂರ್ವ ಸಿದ್ಧತಾ ಕಾರ್ಯ ಪ್ರಗತಿಯಲ್ಲಿದೆ.



ರಾಜ್ಯ ಒಕ್ಕಲಿಗರ ಸಂಘದ ನೂತನ ಗೌರವಾಧ್ಯಕ್ಷರೂ ಆದ ಮೈಸೂರು ನಗರ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ಅವರನ್ನು ಮೈಸೂರಿನ ಹೆಬ್ಬಾಳು ಸೂರ್ಯ ಬೇಕರಿ ವೃತ್ತದ ಬಳಿ ಕಾರ್ಪೊರೇಟರ್ ಪ್ರೇಮ ಶಂಕರೇಗೌಡ ಮತ್ತಿತರರು ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು.



ಮೈಸೂರಿನ ಮಹದೇಶ್ವರ ಬಡಾವಣೆ ಯುವಕರ ಬಳಗದ ವತಿಯಿಂದ ಕೆ.ವಿ.ಶ್ರೀಧರ್ ಅವರ ಹುಟ್ಟುಹಬ್ಬ ಆಚರಿಸಿ, ಅವರಿಗೆ ಸೇಬಿನ ಹಾರ ಹಾಕಿ ಅಭಿನಂದಿಸಿದರು.

ದೇಶ, ವಿದೇಶಗಳಲ್ಲಿ ರಂಗಾಯಣದ ಖ್ಯಾತಿ ಕಾರಂತರ ಪ್ರತಿಭೆಗೆ ಸಾಕ್ಷಿ

● ರಂಗಕರ್ಮಿ ಕಾಸರಗೋಡು ಚಿನ್ನಾ ಬಣ್ಣನೆ ● ಕಾರಂತರಿಗೆ ಎಡ–ಬಲ ಸಾಹಿತಿಗಳ ಸಂಪರ್ಕವಿದ್ದರೂ ಇವೆರಡರಿಂದ ಹೊರಗಿದ್ದರು: ರಂಗಕರ್ಮಿ ಮಾರ್ಪಳ್ಳಿ ● ವಿಚಾರಣ ಸಂಕಿರಣದಲ್ಲಿ ರಂಗಭೀಷ್ಮನ ಮಹತ್ವದ ವ್ಯಕ್ತಿತ್ವ ಅನಾವರಣ





ಮೈಸೂರು ರಂಗಾಯಣ ಭೂಮಿಗೀತಾದಲ್ಲಿ ಹಿರಿಯ ರಂಗಕರ್ಮಿ ಡಾ.ಬಿ.ವಿ.ಕಾರಂತರ ಜನ್ಮ ದಿನದ ಅಂಗವಾಗಿ ಹಮ್ಮಿಕೊಂಡಿರುವ 'ಭಾರತೀಯ ರಂಗ ಸಂಗೀತೋತ್ಸವ' ಕಾರ್ಯಕ್ರಮದ ವಿಚಾರ ಸಂಕಿರಣದಲ್ಲಿ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ರಂಗ ವಿಮರ್ಶಕ ನಾರಾಯಣ್ ರಾಯಚೂರ್ ಉಪಸ್ಥಿತರಿದ್ದರು. ಮತ್ತೊಂದ ಚಿತ್ರದಲ್ಲಿ ಬೆಂಗಳೂರಿನ ಕಲಾವಿದ ಶ್ರೀನಾಥ್ ನೇತೃತ್ವದ ತಂಡ ರಂಗಗೀತೆಗಳನ್ನು ಹಾಡಿ ಪ್ರೇಕ್ಷಕರನ್ನು ರಂಜಿಸಿದರು.

ಮೈಸೂರು, ಸೆ.23(ಎಸ್‌ಪಿಎನ್)– ರಂಗಭೂಮಿಯಲ್ಲಿ ಬಹುಮುಖ ವ್ಯಕ್ತಿತ್ವ ಹೊಂದಿದ್ದ ರಂಗ ಅವಧೂತ, ರಂಗಭೀಷ್ಮ ಡಾ.ಬಿ.ವಿ.ಕಾರಂತರು ಬೌದ್ಧಿಕವಾಗಿ ಇಂದು ನಮ್ಮೊಂದಿಗಿಲ್ಲ. ಆದರೆ, ಕಾರಂತರ ಸಾಧನೆಯನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮತ್ತು ಇತರೆ ಕಲಾವಿದರ ಕಾರ್ಯ ಶ್ಲಾಘನೀಯ ಎಂದು ಹಿರಿಯ ರಂಗಕರ್ಮಿ ಕಾಸರಗೋಡು ಚಿನ್ನಾ ಅಭಿಪ್ರಾಯಪಟ್ಟರು.

ಮೈಸೂರು ರಂಗಾಯಣ ಭೂಮಿಗೀತಾದಲ್ಲಿ ಹಿರಿಯ ರಂಗಕರ್ಮಿ ಡಾ.ಬಿ.ವಿ. ಕಾರಂತರ ಜನ್ಮದಿನದ ಅಂಗವಾಗಿ ಹಮ್ಮಿಕೊಂಡಿರುವ 'ಭಾರತೀಯ ರಂಗ ಸಂಗೀತೋತ್ಸವ' ಕಾರ್ಯಕ್ರಮದ ವಿಚಾರ ಸಂಕಿರಣದಲ್ಲಿ 'ಕಾರಂತರ ಗಡಿಯಾಚೆ ರಂಗ ಚಳವಳಿ' ವಿಷಯ ಕುರಿತು ಮಾತನಾಡಿದರು.

ಡಾ.ಬಿ.ವಿ.ಕಾರಂತರ ಹೆಸರಿನಲ್ಲಿ ರಂಗ ಸಂಗೀತೋತ್ಸವ, ವಿಚಾರ ಸಂಕಿರಣ, ಚಿತ್ರ ಪ್ರದರ್ಶನ ಸೇರಿದಂತೆ ಇತರೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರಂತರ ಸಾಧನೆಯನ್ನು ಇಂದಿನ ಪೀಳಿಗೆಗೆ ಪರಿಚಯಿಸುತ್ತಿದ್ದಾರೆ. ಅಲ್ಲದೆ, ನಾವು–ನೀವೆಲ್ಲಾ ಕಾರಂತರನ್ನು ಜೀವಕ್ಕಿಂತ ಮಿಗಿಲಾಗಿ ಪ್ರೀತಿಸುವವರು. ರಂಗಭೂಮಿಗಾಗಿ ದುಡಿದ ಕಾರಂತರ ಸಾಧನೆಯನ್ನು ಗಡಿಯಾಚೆ ಎನ್ನುವುದಕ್ಕಿಂತ ರಂಗಭೂಮಿಯಲ್ಲಿ ಗಡಿ ಮೀರಿ ಬೆಳೆದ ರಂಗ ದಾರ್ಶನಿಕನಾಗಿ ನೋಡುವುದು ಉತ್ತಮ ಎಂದರು.

ಕಾರಂತರು, 1977–1981ರವರೆಗೆ ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ಸಂಸ್ಥೆಯ ನಿರ್ದೇಶಕರಾಗಿ, ಅನೇಕ ನಾಟಕಗಳನ್ನು ನಿರ್ದೇಶಿಸಿದ್ದಾರೆ. ತರುವಾಯ 1981ರಿಂದ 1986ರವರೆಗೆ ಮಧ್ಯಪ್ರದೇಶದ ಭೂಪಾಲ್‌ನಲ್ಲಿನ ರಂಗಮಂಡಲದ ನಿರ್ದೇಶಕರಾಗಿ, ಅಲ್ಲಿಯೂ ಅನೇಕ ನಾಟಕಗಳನ್ನು ನಿರ್ದೇಶಿಸಿದ್ದರು. ಈ ವೇಳೆ ಅವರ ಜೀವನದಲ್ಲಿ ಅಹಿತಕರ ಘಟನೆಯೊಂದು ನಡೆದಿತ್ತು ಈ ಘಟನೆಯಿಂದ ಹೊರಬಂದು 1989ರ ಸಂಕ್ರಾತಿ ದಿನದಂದು ಮೈಸೂರಿನಲ್ಲಿ ರಂಗಾಯಣ ಸ್ಥಾಪಿಸಿ, ಅದರ ನಿರ್ದೇಶಕರಾಗಿ, 1995ರವರೆಗೆ ಸೇವೆ ಸಲ್ಲಿಸಿದ್ದರು. ಅವರೇ ಕಟ್ಟಿದ್ದ ರಂಗಾಯಣ ಇಂದು ಬೃಹತ್ ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆದು, ವಿಶ್ವಮಟ್ಟದಲ್ಲಿ ಖ್ಯಾತಿ ಗಳಿಸಿರುವುದು ಅವರ ಪ್ರತಿಭೆಗೆ ಸಾಕ್ಷಿ ಎಂದರು.

> ಬಿ.ವಿ.ಕಾರಂತರು ಹವ್ಯಾಸಿ ರಂಗಭೂಮಿ, ಹವ್ಯಾಸಿ ಕಲಾವಿದರನ್ನು ಹೆಚ್ಚು ಇಷ್ಟ ಪಡುತ್ತಿದ್ದರು. ಏಕೆಂದರೆ, ಓರ್ವ ವ್ಯಕ್ತಿ ಒಂದು ಹುದ್ದೆಗೆ ಸೀಮಿತವಾಗಿದ್ದರೆ, ಆತನಲ್ಲಿರುವ ಪ್ರತಿಭೆ ನಶಿಸುತ್ತದೆ ಎಂದು ನಂಬಿದ್ದರು. ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಒಟ್ಟಿನಲ್ಲಿ ಭಾರತೀಯ ರಂಗಭೂಮಿಗೆ, ರಂಗಸಂಗೀತಕ್ಕೆ ಹೊಸ ದಿಕ್ಕು ತೋರಿದವರು ಡಾ.ಬಿ.ವಿ.ಕಾರಂತರು. ಹಾಗಾಗಿ ರಂಗಾಯಣದಲ್ಲಿ ಅವರ ಸಾಧನೆಯನ್ನು ನೆನೆಯುತ್ತಿರುವುದು ಉತ್ತಮ ಸಂಗತಿ.
> -ನಾರಾಯಣ ರಾಯಚೂರ್, ರಂಗ ವಿಮರ್ಶಕ

ರಂಗಾಯಣ ನಿರ್ದೇಶಕರಾಗಿದ್ದ ವೇಳೆ ಹತ್ತಾರು ಕಲಾವಿದರನ್ನು ಬೆಳೆಸಿದ ಕೀರ್ತಿ ಕಾರಂತರಿಗೆ ಸಲ್ಲುತ್ತದೆ. ಈ ರಂಗಮಂದಿರದಲ್ಲಿ ಯುವ ಕಲಾವಿದರ ತಂಡ ಕಟ್ಟಿ, ಆ ತಂಡದ ಮೂಲಕ ಕುವೆಂಪು, ಡಾ.ಶಿವರಾಮ ಕಾರಂತ, ವೈದೇಹಿ ಸೇರಿದಂತೆ ಅನೇಕ ಖ್ಯಾತ–ನಾಮ ಲೇಖಕರ ನಾಟಕಗಳನ್ನು ನಿರ್ದೇಶಿಸಿ, ಮೈಸೂರು ರಂಗಾಯಣವನ್ನು ದೇಶ–ವಿದೇಶಗಳಲ್ಲಿ ಗುರುತಿಸುವಂತೆ ಮಾಡಿದ ಕೀರ್ತಿ ಕಾರಂತರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಕಾರಂತರು ನಿರ್ದೇಶಿಸಿದ ಅನೇಕ ನಾಟಕಗಳಿಗೆ ಉತ್ತಮ ರಂಗ ಸಂಗೀತವನ್ನು ಅವರೇ ಸಂಯೋಜಿಸಿದ್ದಾರೆ. ಆ ನಾಟಕಗಳು ರಾಷ್ಟ್ರ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿವೆ. 2002ರಲ್ಲಿ ಒಂದು ದಿನ ನಟ ಸುಂದರ್‌ರಾಜ್, ನನಗೆ ದೂರವಾಣಿ ಕರೆ ಮಾಡಿ ಡಾ.ಬಿ.ವಿ.ಕಾರಂತರಿಗೆ ತುಂಬಾ ಸೀರಿಯಸ್ ಆಗಿದೆ ಎಂದು ತಿಳಿಸಿದರು. ಅವರು ದಾಖಲಾಗಿದ್ದ ಬೆಂಗಳೂರಿನ ಆಸ್ಪತ್ರೆಗೆ ಹೋಗಿ ನೋಡುವಷ್ಟರಲ್ಲಿ ಅವರ ಪ್ರಾಣಪಕ್ಷಿ ಹಾರಿ ಹೋಗಿತ್ತು ಎಂದು ಆ ಕ್ಷಣವನ್ನು ನೆನೆದು ಭಾವುಕರಾದರು.

ನಂತರ ಹಿರಿಯ ರಂಗಕರ್ಮಿ ಉಡುಪಿ ಗುರುರಾಜ್ ಮಾರ್ಪಳ್ಳಿ ಮಾತನಾಡಿ, ಡಾ.ಬಿ.ವಿ.ಕಾರಂತರನ್ನು 'ರಂಗಭೀಷ್ಮ' ಅಥವಾ 'ರಂಗ ಅವಧೂತ' ಎಂದು ಯಾವ ವಿಶೇಷಣದಿಂದ ಕರೆದರೂ ತೃಪ್ತಿ ನನಗಿದೆ. ಅವರಿಗೆ ಎಡ–ಬಲ ಸಾಹಿತಿಗಳು ಪರಿಚಯವಿದ್ದರೂ ಅವರೆಡು ಸಿದ್ಧಾಂತಗಳಿಂದ ಹೊರಗಿದ್ದು, ರಂಗಭೂಮಿ ಕಟ್ಟಿದ ಮಹಾನ್ ರಂಗ ದಾರ್ಶನಿಕ ಎಂದರೆ ತಪ್ಪಾಗಲಾರದು. ಅವರು ದೇಶದ ನಾನಾ ರಾಜ್ಯಗಳಿಗೆ ತೆರಳಿ ಭಾರತೀಯ ರಂಗಭೂಮಿ ಕಟ್ಟಿದ ಸಾಧಕರಲ್ಲಿ ಮೊದಲಿಗರು. ಇವರದು ವಿಚಿತ್ರ ವ್ಯಕ್ತಿತ್ವ, ಅವರು ಕೆಲ ಸಂದರ್ಭದಲ್ಲಿ ಸಂಗೀತದ ಬಗ್ಗೆ ಹೆಚ್ಚು ಆಸಕ್ತಿ ತೋರುತ್ತಿದ್ದರು ಎಂದು ಕೆಲ ಘಟನೆಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

ಈ ವೇಳೆ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ನಿರ್ದೇಶಕಿ ನಿರ್ಮಲ ಮಠಪತಿ, ರಂಗ ವಿಮರ್ಶಕ ನಾರಾಯಣ್ ರಾಯಚೂರ್ ಉಪಸ್ಥಿತರಿದ್ದರು.

ರಂಗಭೂಮಿ ನಾಟಕಗಳ ವಿಮರ್ಶಕರು ಕಡಿಮೆಯಾಗಿದ್ದಾರೆ

ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಬೇಸರ

ಮೈಸೂರು, ಸೆ.23– ಇತ್ತೀಚೆಗೆ ರಂಗಭೂಮಿ ನಾಟಕಗಳ ವಿಮರ್ಶೆ, ವಿಮರ್ಶಕರು ಕಡಿಮೆ ಆಗುತ್ತಿರುವುದು ಬೇಸರದ ಸಂಗತಿ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಬೆಂಗಳೂರಿನ ರಂಗವಿಮರ್ಶಕ ನಾರಾಯಣ ರಾಯಚೂರ್ ಅವರು, ಎಲ್ಲಾ ವರ್ಗದ ನಾಟಕಗಳನ್ನು ವೀಕ್ಷಣೆ ಮಾಡಿ ವಿಮರ್ಶೆ ಮಾಡಿ, ಯುವ ಕಲಾವಿದರನ್ನು ಪ್ರೋತ್ಸಾಹಿಸುತ್ತಿದ್ದಾರೆ. ಅವರು ಹೊರ ತಂದಿರುವ ವಿಮರ್ಶಾ ಪುಸ್ತಕ ರಂಗಾಯಣ ಗ್ರಂಥಾಲಯದಲ್ಲಿದೆ. ಇನ್ನೊಬ್ಬ ರಂಗ ನಿರ್ದೇಶಕ ಕಾಸರಗೋಡು ಚಿನ್ನ, ಕೇರಳದ ಕಾಸರಗೋಡಿನಲ್ಲಿ ರಂಗಭೂಮಿಗಾಗಿ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅದೇ ರೀತಿ ಉಡುಪಿಯ ಹಿರಿಯ ರಂಗಕರ್ಮಿ ಗುರುರಾಜ ಮಾರ್ಪಳ್ಳಿ ರಂಗಭೂಮಿಯಲ್ಲಿ ಕಳೆದ 40 ವರ್ಷಗಳಿಂದ ತೊಡಗಿಸಿಕೊಂಡಿದ್ದಾರೆ. ಇವರೆಲ್ಲಾ ಕಾರಂತರ ಒಡನಾಡಿಗಳಾಗಿ ಉತ್ತಮ ಬಾಂಧವ್ಯ ಹೊಂದಿದ್ದವರು ಎಂದು ತಿಳಿಸಿದರು.

ಇಂದಿನ ಯುವ ಪೀಳಿಗೆಗೆ ಬಿ.ವಿ.ಕಾರಂತರ ವ್ಯಕ್ತಿತ್ವ ರಂಗಭೂಮಿಯಲ್ಲಿ ಅವರ ತೊಡಗಿಸಿಕೊಂಡ ರೀತಿ, ಅವರು ನಿರ್ದೇಶಿಸಿದ ನಾಟಕಗಳ ಮಹತ್ವ ಎಲ್ಲರಿಗೂ ತಿಳಿಯಬೇಕು. ಮೇಲಾಗಿ, ಕನ್ನಡ ರಂಗಭೂಮಿ, ಭಾರತೀಯ ರಂಗಭೂಮಿಗೆ ಹೊಸ ಆಯಾಮ ತಂದುಕೊಟ್ಟ ಕಾರಂತರ ಸಾಧನೆ ಇಂದಿನ ಯುವ ಪೀಳಿಗೆಗೆ ತಿಳಿಯಬೇಕು ಎಂದು ತಿಳಿಸಿದರು.

ಭಾರತೀಯ ರಂಗಸಂಗೀತೋತ್ಸವ ಕಾರ್ಯಕ್ರಮದಡಿ ಮುಂಬೈ ಅವೋದ್ ಭಟ್, ರಂಗ ಸಂಗೀತ ನಿರ್ದೇಶಕ ಶ್ರೀನಿವಾಸ್ ಭಟ್(ಚೀನಿ), ವೃತ್ತಿ ರಂಗಭೂಮಿಯ ವೈ.ಎಂ. ಪುಟ್ಟಣ್ಣಯ್ಯ, ಕೇರಳದ ಕಲಾವಿದೆ ಕಲ್ಯಾಣಿ ಹಾಗೂ ಬೆಂಗಳೂರಿನ ಶ್ರೀನಾಥ್ ನೇತೃತ್ವದ ಕಲಾವಿದರ ತಂಡ 100ಕ್ಕೂ ಹೆಚ್ಚು ರಂಗಗೀತೆಗಳನ್ನು ಹಾಡಿ, ರಂಗ ಪ್ರೇಕ್ಷಕರನ್ನು ರಂಜಿಸಿದ್ದಾರೆ ಎಂದರು.

ಇಂದು ವಾರ್ಷಿಕ ಮಹಾಸಭೆ

ಮೈಸೂರು, ಸೆ.23– ಶ್ರೀಭಗವತಿ ಕೊಡವ ಸೌಹಾರ್ದ ಸಹಕಾರಿ ನಿಯಮಿತದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಸೆ.24 ರಂದು ಬೆಳಗ್ಗೆ 10 ಗಂಟೆಗೆ ಮೈಸೂರು ಯಾದವಗಿರಿ ಆಕಾಶ ವಾಣಿ ವೃತ್ತ ಬಳಿಯ ಹೋಟೆಲ್ ಕಂಫರ್ಟ್ ಸೂಟ್‌ನಲ್ಲಿ [ವಿಕ್ರಂ ಆಸ್ಪತ್ರೆ ಹತ್ತಿರ] ನಡೆಯಲಿದೆ. ಪಿ.ಕೆ.ಸೋಮಣ್ಣ ಸಭೆ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ.ಯು.ನಂಜಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರ ಕಛೇರಿ ಸ್ಥಳಾಂತರ

ಮೈಸೂರು, ಸೆ.23– ಸಾರ್ವಜನಿಕ ಗ್ರಂಥಾಲಯ ಇಲಾಖೆ ವತಿಯಿಂದ ಮೈಸೂರು ನಗರ ಕೇಂದ್ರ ಗ್ರಂಥಾಲಯ ಕಚೇರಿಯು ಅಕ್ಟೋಬರ್ 1 ರಿಂದ ಮಲೆ ಮಹದೇಶ್ವರ ರಸ್ತೆ, ಕೆನರಾ ಬ್ಯಾಂಕ್ ಎದುರು, ಪೀಪಲ್ ಪಾರ್ಕ್, ನಜರಬಾದ್‌ನಲ್ಲಿರುವ ಗ್ರಂಥಾಲಯದ ಸ್ವಂತ ನೂತನ ಕಟ್ಟಡ ಕಚೇರಿಗೆ ಸ್ಥಳಾಂತರಗೊಂಡಿದೆ. ಇನ್ನು ಮುಂದೆ ಯಾವುದೇ ಸರ್ಕಾರಿ ಅಥವಾ ಅರೆ ಸರ್ಕಾರಿ ಪತ್ರ ವ್ಯವಹಾರವನ್ನು ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಕಳುಹಿಸಬೇಕೆಂದು ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರಾದ ಬಿ. ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬದ ಸೇವಾ ಪಾಕ್ಷಿಕ ಕಾರ್ಯಕ್ರಮದ ಅಂಗವಾಗಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ವತಿಯಿಂದ ಶುಕ್ರವಾರ ಅರಳಿ ಮರದ ಗಿಡ ನೆಡುವ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಕ್ಷೇತ್ರದ ಅಧ್ಯಕ್ಷ ಡಾ.ಭಾನುಪ್ರಕಾಶ್, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಎಚ್.ಜಿ.ಗಿರಿಧರ್, ನಗರಪಾಲಿಕೆ ಸದಸ್ಯೆ ಉಷಾ ನಾರಾಯಣಪ್ಪ, ನಾಮನಿರ್ದೇಶಿತ ಸದಸ್ಯರಾದ ಆಶಾ ನಾಗಭೂಷಣ್ ಸಿಂಗ್, ಕ್ಷೇತ್ರ ಪ್ರಧಾನ ಕಾರ್ಯದರ್ಶಿ ಸ್ವಾಮಿ ಗೌಡ, ವೇಲು, ಒಬಿಸಿ ಪ್ರಧಾನ ಕಾರ್ಯದರ್ಶಿಗಳಾದ ಅಂಬರೀಶ್, ವಿಜಯ್ ಇನ್ನಿತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಡ್ರಗ್ಸ್ ಮಾಫಿಯಾ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ

ಸಿ.ಎನ್.ಮಂಜೇಗೌಡರಿಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಮಾಹಿತಿ

ಬೆಂಗಳೂರು, ಸೆ.23–ರಾಜ್ಯದಲ್ಲಿ ಡ್ರಗ್ಸ್ ವ್ಯವಹಾರದಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿಗಳು, ನೌಕರರು ಭಾಗಿಯಾಗಿರುವ ಯಾವುದೇ ಪ್ರಕರಣ ವರದಿಯಾಗಿಲ್ಲ. ರಾಜ್ಯ ಸರ್ಕಾರ ಡ್ರಗ್ಸ್ ಮಾಫಿಯಾ ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಂಡು ಡ್ರಗ್ಸ್ ಮಾರಾಟ ದಂಧೆಯಲ್ಲಿ ತೊಡಗಿದ್ದವರನ್ನು ಬಂಧಿಸಿ, ಕ್ರಮ ಕೈಗೊಂಡಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಇಂದು ವಿಧಾನ ಪರಿಷತ್‌ನಲ್ಲಿ ತಿಳಿಸಿದರು.

ಇಂದು ವಿಧಾನ ಪರಿಷತ್‌ನಲ್ಲಿ ಸಿ.ಎನ್. ಮಂಜೇಗೌಡರ ಪ್ರಶ್ನೆಗೆ ಉತ್ತರಿಸಿದರು. ಇದಕ್ಕೂ ಮುನ್ನ ಮಂಜೇಗೌಡರು ಮಾತನಾಡಿ, ರಾಜ್ಯದಲ್ಲಿ ಡ್ರಗ್ಸ್ ಮಾಫಿಯಾ ನಿರಂತರವಾಗಿ ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದ್ದು, ಸರ್ಕಾರದ ಡ್ರಗ್ಸ್ ಮಾಫಿಯಾ ನಿಯಂತ್ರಿಸಲು ಏನು ಕ್ರಮ ಕೈಗೊಂಡಿದೆ ಎಂದು ಪ್ರಶ್ನಿಸಿದರು.

ಡ್ರಗ್ಸ್ ಜಾಲವನ್ನು ತಡೆಯಲು ಸರ್ಕಾರ ಹೊರಡಿಸಿರುವ ಸುತ್ತೋಲೆಗಳೇನು, ಇಲ್ಲಿಯತನಕ ಎಷ್ಟು ಡ್ರಗ್ಸ್ ಜಾಲಗಳನ್ನು ಪತ್ತೆ ಮಾಡಲಾಗಿದೆ. ಅವುಗಳ ಮೌಲ್ಯವೆಷ್ಟು, ಡ್ರಗ್ಸ್‌ಮಾಫಿಯಾ ನಡೆಸುತ್ತಿದ್ದವರಿಗೆ ಇಲ್ಲಿಯತನಕ ನೀಡಿರುವ ಶಿಕ್ಷೆಗಳೇನು, ಈ ಪ್ರಕರಣದಲ್ಲಿ ಭಾಗಿಯಾದ ಇಲಾಖೆಯ ಅಧಿಕಾರಿ ನೌಕರರ ಮೇಲೆ ಸರ್ಕಾರದ ತೆಗೆದುಕೊಂಡಿರುವ ಕ್ರಮಗಳೇನು, ಎಂದು ಪ್ರಶ್ನಿಸಿದ ಅವರು, ಡ್ರಗ್ಸ್ ಮಾಫಿಯಾವನ್ನು ಸಂಪೂರ್ಣ ಮಟ್ಟ ಹಾಕಿ ಯುವ ಜನತೆಯನ್ನು ರಕ್ಷಿಸಬೇಕೆಂದು ಆಗ್ರಹಿಸಿದರು.

ಶಾಪಿಂಗ್ ಮಾಡಿದರೆ ಬೋನಸ್ ಆಮಿಷ ತೋರಿ 6.57 ಲಕ್ಷ ಮೋಸ

ಮೈಸೂರು, ಸೆ.23–ಶಾಪಿಂಗ್ ಮಾಡಿದರೆ ಬೋನಸ್ ಸಿಗುವುದಾಗಿ ನಂಬಿಸಿ ಆನ್‌ಲೈನ್ ಮೂಲಕ 6.57 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಸರ್ದಾರ್ ವಲ್ಲಭ ಭಾಯ್ ಪಟೇಲ್‌ನಗರ ನಿವಾಸಿ ಡಿ.ಪಿ.ನಂದೀಶ್ (27) ವಂಚನೆಗೊಳಗಾದವರಾಗಿದ್ದು, ಇವರು ಗೂಗಲ್‌ನಲ್ಲಿ ವರ್ಕ್ ಫ್ರಂ ಹೋಂ ಸರ್ಚ್ ಮಾಡುತ್ತಿದ್ದಾಗ ದೊರೆತ ವೆಬ್‌ಸೈಟ್ ಮೇಲೆ ಕ್ಲಿಕ್ ಮಾಡಿದ್ದಾರೆ. ಆ ವೇಳೆ 9936168467 ಸಂಖ್ಯೆಯಿಂದ ವಾಟ್ಸಾಪ್ ಸ್ಟಾರ್ಟ್ ಮಾಡಿದ ವ್ಯಕ್ತಿ ಶಾಪಿಂಗ್ ಹ್ಯಾಪಿ ಫ್ಲಿಪ್‌ಕಾರ್ಟ್ ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡು ಪ್ರೊಡಕ್ಟ್‌ಗಳನ್ನು ಪರ್ಚೇಸ್ ಮಾಡಿದರೆ ಬೋನಸ್ ಸಿಗುತ್ತದೆ ಎಂದು ನಂಬಿಸಿದ್ದಾನೆ. ನಂದೀಶ ಅವರು 6,57,420 ರೂ. ವರ್ಗಾವಣೆ ಮಾಡಿದ್ದು, ವಂಚನೆಗೊಳ ಗಾಗಿದ್ದಾರೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಕ್ಕಳಾಗಲು ಔಷಧಿ ನೀಡುವುದಾಗಿ ಯುವಕನಿಗೆ 50 ಸಾವಿರ ವಂಚನೆ

ವಂಚಕರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಸೆ.23–ಮಕ್ಕಳಾಗಲು ಔಷಧಿ ನೀಡುವುದಾಗಿ ನಂಬಿಸಿ 50 ಸಾವಿರ ರೂ. ವಂಚನೆ ಮಾಡಿರುವ ಬಗ್ಗೆ ತಡವಾಗಿ ವರದಿಯಾಗಿದೆ.

ಕ್ರೈಂ ಬಾಕ್ಸ್

ಹೆಚ್.ಡಿ.ಕೋಟೆ ತಾಲೂಕು ಜಿ.ಬಿ.ಸರಗೂರು ಗ್ರಾಮದ ಲೋಕೇಶ್(35) ವಂಚನೆಗೊಳಗಾದವರಾಗಿದ್ದು, 2020ರ ಜ. 5 ರಂದು ಕೆಲಸದ ನಿಮಿತ್ತ ಇವರು ಮೈಸೂರಿನ ವಿಜಯನಗರ 4ನೇ ಹಂತದ ಬಸವನಹಳ್ಳಿ ರಸ್ತೆಯಲ್ಲಿ ನಿಂತಿದ್ದಾಗ ಅವರನ್ನು ಭೇಟಿ ಮಾಡಿದ ಕಿರಣ್ ಮತ್ತು ಗುರು ಎಂಬುವವರು ಮಕ್ಕಳಾಗಲು ಗಿಡಮೂಲಿಕೆಗಳ ಔಷಧಿ ನೀಡುವುದಾಗಿ ನಂಬಿಸಿದ್ದಾರೆ. ಔಷಧಿಗೆ 50 ಸಾವಿರ ರೂ. ಆಗುತ್ತದೆ ಎಂದು ಅವರು ತಿಳಿಸಿದಾಗ ಲೋಕೇಶ, ಮರುದಿನ ಹಣ ತರುವುದಾಗಿ ಹೇಳಿದ್ದಾರೆ.

ಅವರು ಹೇಳಿದಂತೆ ಮರುದಿನ ವಿಜಯನಗರ ರಿಂಗ್ ರಸ್ತೆಯ ಕಾಯಿಮೊಟ್ಟೆ ಜಂಕ್ಷನ್‌ಗೆ ಲೋಕೇಶ್ ಬಂದು, ಕಿರಣ್ ಮತ್ತು ಗುರು ಅವರಿಗೆ 50 ಸಾವಿರ ರೂ. ನೀಡಿದ್ದಾರೆ. ಹಣ ಪಡೆದ ಅವರು, ಹಿನಕಲ್‌ನಲ್ಲಿ ನಮ್ಮ ಕಡೆಯವರು ಇದ್ದಾರೆ. ಔಷಧಿ ತರುತ್ತೇವೆ ಎಂದು ಹೇಳಿ ಹೋದವರು ಮತ್ತೆ ಬರಲೇ ಇಲ್ಲ.

ಈ ಮಧ್ಯೆ ಕಳೆದ ನ.21ರಂದು ಸಂಜೆ 6.30ರ ಸುಮಾರಿನಲ್ಲಿ ಲೋಕೇಶ ಅವರು ವಿಜಯನಗರ 4ನೇ ಹಂತದ ಕಾಯಿಮೊಟ್ಟೆ ಜಂಕ್ಷನ್ ಬಳಿ ಬರುತ್ತಿದ್ದಾಗ ತಮಗೆ 2 ವರ್ಷದ ಹಿಂದೆ ವಂಚಿಸಿದ್ದ ಕಿರಣ್ ಮತ್ತು ಗುರು ಅಲ್ಲಿ ನಿಂತು, ಮಕ್ಕಳಾಗಲು ಔಷಧಿ ನೀಡುವುದಾಗಿ ಸಾರ್ವಜನಿಕರಿಗೆ ಹೇಳುತ್ತಿದ್ದುದನ್ನು ಗಮನಿಸಿ, ಅವರನ್ನು ಹಿಡಿಯಲು ಪ್ರಯತ್ನಿಸಿದ್ದಾರೆ. ಆದರೆ ಈ ಇಬ್ಬರೂ ವಂಚಕರು ಕ್ಷಣಾರ್ಧದಲ್ಲಿ ದ್ವಿಚಕ್ರ ವಾಹನ (ಕೆಎ 01 ಜೆಎನ್ 9957)ದಲ್ಲಿ ಪರಾರಿಯಾಗಿದ್ದಾರೆ. ಈ ಸಂಬಂಧ ಲೋಕೇಶ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ವಿಜಯನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ದಸರಾ ವಿವಿಧ ಉಪ ಸಮಿತಿಗಳಿಗೆ ಅಧಿಕಾರೇತರ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರ ಪಟ್ಟಿ ಅಂತೂ ಬಿಡುಗಡೆ

ಮೈಸೂರು, ಸೆ.23– ಮೈಸೂರು ದಸರಾ ಮಹೋತ್ಸವದ ವಿವಿಧ ಉಪಸಮಿತಿಗಳಿಗೆ ಕಡೇ ಗಳಿಗೆಯಲ್ಲಿ ಅಧಿಕಾರೇತರ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರನ್ನು ನೇಮಿಸಿ, ಪಟ್ಟಿ ಬಿಡುಗಡೆ ಮಾಡಲಾಗಿದೆ. ಇದನ್ನು ನಾಳೆ(ಸೆ.24) ಜಿಲ್ಲಾ ಉಸ್ತುವಾರಿ ಸಚಿವರು ಅಧಿಕೃತ ವಾಗಿ ಪ್ರಕಟಿಸುವ ಸಾಧ್ಯತೆ ಇದೆ. ಮೈಸೂರು ನಗರ ಸೇರಿದಂತೆ ಜಿಲ್ಲೆ ಹಾಗೂ ನೆರೆ ಜಿಲ್ಲೆಗಳ ಕೆಲವರಿಗೆ ಉಪ ಸಮಿತಿಗಳಲ್ಲಿ ಅವಕಾಶ ನೀಡಲಾಗಿದೆ. ಈ ಕಾರ್ಯದ ವಿಳಂಬಕ್ಕೆ ತಮ್ಮ ಬೆಂಬಲಿಗರಿಗೆ ಉಪಸಮಿತಿಗಳ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನ ಕೊಡಿಸಬೇಕೆಂಬ ಜನಪ್ರತಿನಿಧಿಗಳ ಕಿತ್ತಾಟವೇ ಕಾರಣ ಎನ್ನಲಾಗುತ್ತಿದೆ. ಸದ್ಯ ಲಭ್ಯವಾಗಿ ರುವ ಪಟ್ಟಿಯಲ್ಲಿರುವ ವಿವರ ಇಲ್ಲಿದೆ.

ಸ್ವಾಗತ ಉಪಸಮಿತಿ: ಅಧ್ಯಕ್ಷರು ಮೇಯರ್ ಶಿವಕುಮಾರ್, ಉಪಾಧ್ಯಕ್ಷರು ಎಸ್.ಕೆ.ದಿನೇಶ್, ಪ್ರಸನ್ನ, ಮಹದೇವಯ್ಯ ಕರೋಹಟ್ಟಿ, ಸದಸ್ಯರು ಮುದ್ದುರಾಜು, ಪ್ರೇಮಕುಮಾರಿ, ಸುಲೇಖ, ಮೋಹನ್, ವಿಠಲ್ ರಾವ್, ಬಸವರಾಜು.

ಮೆರವಣಿಗೆ: ಅಧ್ಯಕ್ಷರು ಪೊಲೀಸ್ ಆಯುಕ್ತರು, ಉಪಾಧ್ಯಕ್ಷರು ಗೋಪಾಲ್ ರಾಜೇ ಅರಸ್, ಉಮೇಶ್, ಬಸವರಾಜು ಕರೋಹಟ್ಟಿ, ಸದಸ್ಯರು ಎಡತೊರೆ ಎಂ.ನಿಂಗ ರಾಜು, ಆಶಾ, ಎನ್.ಮಂಜುಳಾ, ಮಲ್ಲಿಕ.

ಸಾಂಸ್ಕೃತಿಕ ದಸರಾ: ಅಧ್ಯಕ್ಷ ವಿ.ಸೋಮ ಸುಂದರ, ಉಪಾಧ್ಯಕ್ಷರು ಶ್ರೀನಿವಾಸ್, ಜಿ.ಎಂ.ಮಹೇಶ್, ಪಾಪಣ್ಣ, ಸದಸ್ಯರು ವರುಣಾ ಪ್ರಶಾಂತ್, ಕೆ.ಎಂ.ಬಾಲಚಂದ್ರ, ಮಹದೇವ, ಡಿ.ಕುಮಾರ್, ಡಾ.ಪುಷ್ಪಾ ಐಯ್ಯಂಗಾರ್.

ಯುವ ದಸರಾ: ಅಧ್ಯಕ್ಷ–ಬಿಜೆಪಿ ಯುವ ಮೋರ್ಚಾ ನಗರಾಧ್ಯಕ್ಷ ಕಿರಣ್‌ಗೌಡ, ಉಪಾಧ್ಯಕ್ಷರು–ಎಂ.ಬದರೀಶ್, ಸಂತೋಷ್ ಕುಮಾರ್, ಎಂ.ಆರ್.ಮಹೇಂದ್ರ, ಸದಸ್ಯರು–ಸೌರಭ್, ವರುಣಾ ಪ್ರಶಾಂತ್.

ಯುವಸಂಭ್ರಮ: ಹೆಚ್.ಎಂ. ಕೆಂಡಗಣ್ಣಪ್ಪ, ಉಪಾಧ್ಯಕ್ಷರು ಈರಪ್ಪ, ಶ್ರೀನಿವಾಸ್ ಪಿ.ಶೆಡ್ಡಿ ಹೇಮಂತ್, ಸದಸ್ಯ ಬಿ.ಇ.ವಿನಯ್ ಕುಮಾರ್.

ಆಹಾರ ಮೇಳ: ಅಧ್ಯಕ್ಷ–ದೇವರಾಜೇಗೌಡ, ಉಪಾಧ್ಯಕ್ಷರು–ಭಾನುಪ್ರಕಾಶ್, ಈರೇಗೌಡ, ಮೋಹನ್, ಸದಸ್ಯರು–ನೇವಿಲ್ ಪಿಂಟೋ, ಸುರೇಶ್, ರಮೇಶ್ ಗೌಡ, ರಾಜು, ಶ್ರೀಕಂಠ.

ಫಲಪುಷ್ಪ ಪ್ರದರ್ಶನ: ಅಧ್ಯಕ್ಷ– ಎಸ್.ಆರ್. ನಂಜಪ್ಪ ಉಪಾಧ್ಯಕ್ಷರು–ಮಹದೇವ ಪ್ರಸಾದ್, ಓಂ ಶ್ರೀನಿವಾಸ್ ಹಾಗೂ ವೆಂಕಟರಮಣಶೆಟ್ಟಿ ಸದಸ್ಯರು– ಎಸ್.ಯೋಗೇಶ್, ಶಿವ ಕುಮಾರ್, ವಕೀಲೆ ರೂಪಾ ಹಾಗೂ ಶಿವಾನಂದ ಹೆಗ್ಗಡೆ.

ದೀಪಾಲಂಕಾರ: ಅಧ್ಯಕ್ಷ–ಟಿ.ರಮೇಶ್, ಉಪಾಧ್ಯಕ್ಷರು–ಪುನೀತ್, ವೇಲು, ಮಹೇಶ್, ಸದಸ್ಯರು–ವಿಕ್ರಾಂತ್ ಪಿ.ದೇವೇಗೌಡ, ಪಿ.ಧನಂಜಯ್, ರವಿಕುಮಾರ್, ಅರುಣ್ ಕುಮಾರ್, ಸಂಜಯ್, ಪ್ರಭಾಕರ್.

ಕ್ರೀಡೆ: ಅಧ್ಯಕ್ಷ–ಕೆ.ಶಿವಾನಂದ, ಉಪಾಧ್ಯಕ್ಷರು –ಇ.ರಮೇಶ್, ಪೈಲ್ವಾನ್ ಟಿ.ರವಿ, ವಿಜಯ ಕುಮಾರ್, ಸದಸ್ಯರು–ವಿಕಾಸ್, ಮಧುಮಾಲತಿ, ಎನ್.ರಾಜೇಶ್, ಸ್ವಾಮಿ, ರವಿಪ್ರಸಾದ್,

ಕವಿಗೋಷ್ಠಿ: ಅಧ್ಯಕ್ಷ–ಸಿ.ಬಿ.ಬಸವರಾಜಪ್ಪ ಉಪಾಧ್ಯಕ್ಷರು–ಎನ್.ರವಿ, ರಾಜಮಣಿ, ಶಿವಣ್ಣ, ಸದಸ್ಯರು–ಡಾ.ಜಯಪ್ಪ ಹೊನ್ನಾಳಿ, ಪುರುಷೋತ್ತಮ್, ಗುರುಸ್ವಾಮಿ, ಭಾಸ್ಕರ್, ಭ್ರಮರ ಸಂಜೀವ್, ಭೈರಪ್ಪ,

ಯೋಗ ದಸರಾ: ಅಧ್ಯಕ್ಷ–ಬಾಲಕೃಷ್ಣ ಉಪಾಧ್ಯಕ್ಷರು–ಈಶ್ವರ್, ಕೆ.ವಿ.ಮಂಜು, ಜಿ.ಸಿ.ಯೋಗೇಶ್ ಕುಮಾರ್, ಸದಸ್ಯ–ಅರುಣ್ ಕುಮಾರ್.

ಮಹಿಳಾ ಮತ್ತು ಮಕ್ಕಳ ದಸರಾ: ಅಧ್ಯಕ್ಷ–ಸುನಂದರಾಜ್, ಉಪಾಧ್ಯಕ್ಷರು– ಹೇಮ ನಂದೀಶ್, ಮಂಜುಳಾ, ಮಮತಾ ಶಿವಪ್ರಸಾದ್, ಸದಸ್ಯರು– ಕುಮಾರಿ ಕವಿತಾ, ರಾಘವೇಂದ್ರ.

ರೈತ ದಸರಾ: ಅಧ್ಯಕ್ಷ–ಮಹೇಶ್ ಕುಮಾರ್, ಉಪಾಧ್ಯಕ್ಷರು–ಸ್ವಾಮಿಗೌಡ, ರಮೇಶ್ ಕುಮಾರ್, ಪುಟ್ಟಮೂರ್ತಿ, ಸದಸ್ಯ–ಇ.ಕುಮಾರ್.

ಕುಸ್ತಿ: ಅಧ್ಯಕ್ಷ–ಕೆ.ದೇವರಾಜ್, ಉಪಾಧ್ಯಕ್ಷ–ವೇದರಾಜ್, ಮಹೇಶ್ ರಾಜೇ ಅರಸ್, ಎಂ.ಎಂ.ರಾಜೇಗೌಡ, ಸದಸ್ಯರು–ಜೈಸ್ವಾಮಿ, ಸತೀಶ್ ಆಳೇಗೌಡ.

ಚಲನಚಿತ್ರ: ಅಧ್ಯಕ್ಷ–ವೆಂಕಟೇಶ್ ಹೊಸಹಳ್ಳಿ, ಉಪಾಧ್ಯಕ್ಷರು–ಪ್ರಕಾಶ್ ಪಟೇಲ್, ಸಿ.ಎಂ.ಮಹದೇವಯ್ಯ, ಕಿರಣ್ ಜಯರಾಮೇಗೌಡ, ಸದಸ್ಯರು– ಡಿ.ಜೆ.ಉದೀತ್‌ಗೌಡ, ಎಸ್.ರಘು.

ಪಾರಂಪರಿಕ ದಸರಾ: ಅಧ್ಯಕ್ಷ– ಗೋಪಾಲ್‌ರಾವ್, ಉಪಾಧ್ಯಕ್ಷರು– ಶಿವಕುಮಾರ್, ನಾಗೇಂದ್ರ, ಗುರುಸ್ವಾಮಿ, ಸದಸ್ಯರು– ಕೃಷ್ಣ, ಸತೀಶ್ ಚಂದ್ರಬಾಬು.

ಲಲಿತಕಲೆ: ಅಧ್ಯಕ್ಷರು–ಟಿ.ಎನ್.ಶಾಂತ, ಉಪಾಧ್ಯಕ್ಷರು–ಎಂ.ಎನ್.ಚಿದಂಬರ, ಜೆ.ನಾಗೇಂದ್ರಕುಮಾರ್, ಲೋಕೇಶ್ ನಾಯಕ್, ಸದಸ್ಯ–ಪಿ.ವೆಂಕಟೇಶ್

ಪ್ರಚಾರ: ಅಧ್ಯಕ್ಷ ಎಂ.ದಾಸಯ್ಯ, ಉಪಾಧ್ಯಕ್ಷರು–ಹರ್ಷ, ಇಲಿಯಾಸ್ ಅಹಮದ್, ಸಿ.ಕೆ.ಗಿರೀಶ್, ಸದಸ್ಯ–ಎಂ.ಜೆ.ಪುಟ್ಟರಾಜು.

ಸಾಹಸ ಕ್ರೀಡೆ: ಅಧ್ಯಕ್ಷ–ಸುಬ್ಬಣ್ಣ ಕುಬ್ರಳ್ಳಿ, ಉಪಾಧ್ಯಕ್ಷರು–ಶಿವರಾಜ್, ನಾಗಣ್ಣಗೌಡ, ಎನ್.ವಿ.ವಿನಯ ಕುಮಾರ್, ಎಸ್.ನಂದ ಕುಮಾರ್, ಸದಸ್ಯರು– ಡಿ.ಪಿ.ಚೇತನ್.

ಸ್ವಚ್ಛತಾ: ಅಧ್ಯಕ್ಷ– ಶ್ರೀನಿವಾಸ್, ಉಪಾಧ್ಯಕ್ಷರು –ಎಸ್.ನಂದಕುಮಾರ್, ಲಕ್ಷ್ಮಣ್, ಕಾ.ಪು. ಸಿದ್ದವೀರಪ್ಪ ಸದಸ್ಯ–ಎನ್.ಕೆ.ಯಶವಂತ್,

ಸ್ತಬ್ಧಚಿತ್ರ: ಅಧ್ಯಕ್ಷ–ಆರ್.ಚಂದ್ರಶೇಖರ್, ಉಪಾಧ್ಯಕ್ಷರು–ಜೋಗಿ ಮಂಜು, ಹೆಚ್.ಎಂ.ಮಂಜುನಾಥ್, ಜಿ.ಪರಶುರಾಮಪ್ಪ ಸದಸ್ಯರು–ಡಿ.ಅರುಣ್ ಕುಮಾರ್, ಸುನಂದ ಕುಮಾರ್, ಮಹದೇವಸ್ವಾಮಿ.

ಪ್ರಚಾರ ಉಪ ಸಮಿತಿ: ಅಧ್ಯಕ್ಷ– ಎಸ್.ಟಿ.ರವಿಕುಮಾರ್ ಹಾಗೂ 38 ಪತ್ರಕರ್ತರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ.

ಕಿರುಚಿತ್ರ ಸ್ಪರ್ಧೆಗಳ ಫಲಿತಾಂಶ ಪ್ರಕಟ

ಮೈಸೂರು, ಸೆ.23– ಮೈಸೂರು ದಸರಾ ಅಂಗವಾಗಿ ದಸರಾ ಚಲನಚಿತ್ರೋತ್ಸವ ಉಪ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ ಕಿರುಚಿತ್ರ ಸ್ಪರ್ಧೆಯಲ್ಲಿ ಜೆ.ಪ್ರದೀಪ್ ಕುಮಾರ್ ನಿರ್ದೇಶಿಸಿದಂತಹ ನಮ್ಮ ಪೊಲೀಸ್ ಚಿತ್ರ ಪ್ರಥಮ ಬಹುಮಾನ ಪಡೆದುಕೊಂಡಿದೆ. ಕೆ.ಎಚ್.ರಘು ಅವರು ನಿರ್ದೇಶಿಸಿರುವ ಆರ್ಯವರ್ಥ ಚಿತ್ರ ದ್ವಿತೀಯ ಹಾಗೂ ವಿಷ್ಣು ವಿ.ರಮಣ್ ಅವರು ನಿರ್ದೇಶಿಸಿರುವ ವರ್ಣಚಿತ್ರವು ತೃತೀಯ ಬಹುಮಾನವನ್ನು ಪಡೆದುಕೊಂಡಿದೆ. ಜೊತೆಗೆ ಸತೀಶ್ ಆಚಾರ್ ಆರ್ ಅವರು ನಿರ್ದೇಶಿಸಿರುವ ಮಾನವೀಯತೆ ಚಿತ್ರ ಮತ್ತು ಶ್ರೀ ಸಂತೋಷ್ ಕುಮಾರ್ ಎಂ. ಅವರು ನಿರ್ದೇಶಿಸಿದ ಚಿಗುರು ಚಿತ್ರಗಳು ಸಮಾಧಾನಕರ ಬಹುಮಾನವನ್ನು ಪಡೆದುಕೊಂಡಿವೆ. ಕಿರುಚಿತ್ರ ಸ್ಪರ್ಧೆಯಲ್ಲಿ ಒಟ್ಟು 31 ಕಿರುಚಿತ್ರಗಳ ಅರ್ಜಿಗಳು ಸ್ವೀಕಾರಗೊಂಡಿದ್ದು, ಅದರಲ್ಲಿ 4 ಸ್ಪರ್ಧಿಗಳ ಕಿರುಚಿತ್ರಗಳನ್ನು ತಿರಸ್ಕರಿಸಲಾಗಿದೆ. ಪ್ರಶಸ್ತಿ ಪಡೆದ ಕಿರುಚಿತ್ರವನ್ನು ಸೆ.24ರಂದು ಮಾನಸಗಂಗೋತ್ರಿಯ ಆವರಣದಲ್ಲಿರುವ ರಾಣಿ ಬಹದ್ದೂರ್ ಸಂಭಾಗಣದಲ್ಲಿ ಪ್ರದರ್ಶನ ಮಾಡಲಾಗುತ್ತದೆ. ಎಲ್ಲಾ ಸ್ಪರ್ಧಿಗಳು ಪ್ರಮಾಣ ಪತ್ರವನ್ನು ಸ್ಥಳದಲ್ಲೇ ಪಡೆದುಕೊಳ್ಳಬೇಕು ಎಂದು ಮೈಸೂರು ದಸರಾ ಚಲನಚಿತ್ರೋತ್ಸವ ಉಪ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ಮಾಧ್ಯಮ ನಿರ್ವಹಣೆ ಮತ್ತು ಸಂವಹನ ಕುರಿತು ಶುಕ್ರವಾರ ಎಟಿಐನಲ್ಲಿ ನಡೆದ ಚರ್ಚಾಗೋಷ್ಠಿಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಡಾ.ಪಿ.ಎಸ್.ಹರ್ಷ, ಇಂಡಿಯನ್ ಏರೋಸ್ಪೇಸ್ ಮತ್ತು ಡಿಫೆನ್ಸ್ ಬುಲೆಟಿನ್ ಸಂಪಾದಕರಾದ ಡಾ.ವಿಜಯ್ ಗೋವರ್, 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಹಾಗೂ ಡಾ.ಅನ್ನಪೂರ್ಣ ರವಿಚಂದ್ರನ್ ಭಾಗವಹಿಸಿದ್ದರು.

ಅಕ್ಟೋಬರ್‌ನಿಂದ ವಿದ್ಯುತ್ ದರ ಏರಿಕೆ

ಬೆಂಗಳೂರು, ಸೆ.23– ನವರಾತ್ರಿ ಸಂಭ್ರಮದಲ್ಲಿರುವ ರಾಜ್ಯದ ಜನರಿಗೆ ಈಗ ಕರೆಂಟ್ ಶಾಕ್ ಬಿಸಿ ತಟ್ಟಿದೆ.

ಇಂಧನ ಹೊಂದಾಣಿಕೆ ಶುಲ್ಕ ಹೆಚ್ಚಾಗಲಿದ್ದು ಅಕ್ಟೋಬರ್ 1 ರಿಂದಲೇ ಗ್ರಾಹಕರಿಗೆ ಶುಲ್ಕದ ಬರೆ ಬೀಳಲಿದೆ. ಕಳೆದ ಏಪ್ರಿಲ್‌ನಲ್ಲಿ ಬೆಸ್ಕಾಂ ಸೇರಿದಂತೆ ಎಲ್ಲಾ ಎಸ್ಕಾಂನಲ್ಲಿ ವಿದ್ಯುತ್ ದರ ಏರಿಕೆಯಾಗಿತ್ತು. ಈಗ ಅಕ್ಟೋಬರ್‌ನಲ್ಲಿ ಇಂಧನ ವೆಚ್ಚ ಶುಲ್ಕದ ಬಿಸಿ ಗ್ರಾಹಕರಿಗೆ ಮುಟ್ಟಲಿದ್ದು ಪ್ರತಿ ಯೂನಿಟ್ ಮೇಲೆ 43 ಪೈಸೆ ದರ ಏರಿಕೆಯಾಗಲಿದೆ. ಮುಂದಿನ ವರ್ಷ ಮಾರ್ಚ್‌ವರೆಗೆ ಈ ದರ ಇರಲಿದೆ.

ಕಲ್ಲಿದ್ದಲಿನ ದರ ಏರಿಕೆಯಾದಾಗ ಈ ದರ ಏರಿಕೆ ಅನಿವಾರ್ಯ ಎನ್ನುವುದು ಬೆಸ್ಕಾಂ ಸ್ಪಷ್ಟನೆ. ಆದರೆ ಜನರಿಗೆ ಮಾತ್ರ ಗಾಯದ ಮೇಲೆ ಬರೆಎಳೆದಂತಾಗಿದೆ. ಇಂಧನ ಹೊಂದಾಣಿಕೆ ಶುಲ್ಕವನ್ನು ಮೂರು ತಿಂಗಳಿಗೊಮ್ಮೆ ಕೆಇಆರ್‌ಸಿಗೆ ಪರಿಶೀಲನೆ ಮಾಡುವಂತೆ ಬೆಸ್ಕಾಂ ಮನವಿ ಕೂಡ ಮಾಡಿದೆ. ಆದರೆ ಸದ್ಯ ಆರು ತಿಂಗಳಿಗೆ ಅನ್ವಯವಾಗುವಂತೆ ದರ ಏರಿಕೆಯಾಗುತ್ತಿದೆ. ನವರಾತ್ರಿಯ ಸಂದರ್ಭದಲ್ಲಿಯೇ ಕೆಇಆರ್‌ಸಿ ಶಾಕ್ ಕೊಟ್ಟಿದೆ.

ಗೌರವಾನ್ವಿತ ಐದನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ, ಮೈಸೂರು

ಅಸಲು ದಾವಾ ಸಂಖ್ಯೆ: 259 / 2022

ವಾದಿ : ಶ್ರೀ ರಂಗರಾಜು ಸಿ.ಎಸ್.

ವಿರುದ್ಧ

ಪ್ರತಿವಾದಿ: ರವಿಕುಮಾರ್ ಎ.ಎಸ್., S/o ಸಿದ್ದಲಿಂಗ ಶೆಟ್ಟಿ, ವಯಸ್ಸು: 46 ವರ್ಷ, #70/A, 'ಎಂ' ಬ್ಲಾಕ್, 5ನೇ ಅಡ್ಡರಸ್ತೆ, ಕುವೆಂಪುನಗರ, ಮೈಸೂರು.

ಪತ್ರಿಕಾ ಪ್ರಕಟಣೆ

ವಾದಿ ಪ್ರತಿವಾದಿ ವಿರುದ್ಧ ಕರಾರಿನ ನಿರ್ದಿಷ್ಟ ಪರಿಹಾರ ಕಾಯಿದೆ ಕೋರಿ ಘನ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಪ್ರತಿವಾದಿಗೆ ನ್ಯಾಯಾಲಯದಿಂದ ನೋಂದಾಯಿತ ಆರ್.ಪಿ.ಎ.ಡಿ. ಮೂಲಕ ಸಮನ್ಸ್ ಕಳುಹಿಸಿದ್ದರೂ ಸಹ ಜಾರಿಯಾಗಿರುವುದಿಲ್ಲ. ಈ ದಾವೆಯ ಮುಂದಿನ ಸುನಾವಣಾ ದಿನಾಂಕ 14–10–2022 ರಂದು ಬೆಳಿಗ್ಗೆ 11.00 ಗಂಟೆಗೆ ನಿಗಧಿ ಪಡಿಸಲಾಗಿದೆ. ಆದುದರಿಂದ, ಪ್ರತಿವಾದಿ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ಪ್ರತಿನಿಧಿಗಳ ಮೂಲಕ ದಿನಾಂಕ 14–10–2022 ರಂದು ಬೆಳಿಗ್ಗೆ 11.00 ಗಂಟೆಗೆ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು. ಹಾಜರಾಗಲು ವಿಫಲವಾದಲ್ಲಿ ಏಕಪಕ್ಷೀಯವಾಗಿ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುವುದು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ,
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರರು
ಐದನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ, ಮೈಸೂರು

ವಾದಿ ಪರ ವಕೀಲರು
ಶ್ರೀ ಜೆ. ಸುರೇಶ್, ಬಿ.ಕಾಂ., ಎಲ್.ಎಲ್.ಬಿ.
ವಕೀಲರು, ಕೆ.ಎ.ಆರ್. 155/1993
ನಂ. 1, 1ನೇ ಕ್ರಾಸ್, 2ನೇ ಮುಖ್ಯರಸ್ತೆ,
ಜಯನಗರ, ಮೈಸೂರು
ದಿನಾಂಕ: 21–09–2022. ಸ್ಥಳ: ಮೈಸೂರು

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಡಾ.ಸಚಿನ್ ಬಿನ್ ಶ್ರೀ ಕೆ.ಆರ್.ತಿಪ್ಪೇಶಮೂರ್ತಿ ಎಂಬುವರಿಂದ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಖರೀದಿಸುವ ಇರಾದೆಯನ್ನು ಹೊಂದಿರುತ್ತಾರೆ. ಆದುದರಿಂದ ಷೆಡ್ಯೂಲ್ ಸ್ವತ್ತಿನ ವಿಷಯದಲ್ಲಿ ಯಾರಿಗಾದರೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರವಿದ್ದಲ್ಲಿ ಅಥವಾ ಸದರಿ ಮಾರಾಟಕ್ಕೆ ಯಾವುದೇ ತಕರಾರು ಇದ್ದಲ್ಲಿ ಅವರುಗಳು ನಮಗೆ ಲಿಖಿತ ನೋಂದಾಯಿತ ಅಂಚೆಯ ಮೂಲಕ ದಾಖಲಾತಿಗಳ ಸಹಿತ ಷೆಡ್ಯೂಲ್ ಸ್ವತ್ತಿನ ಮೇಲೆ ಅವರಿಗೆ ಇರುವ ಹಕ್ಕು ಅಥವಾ ಅಧಿಕಾರ ಅಥವಾ ತಕರಾರಿನ ಸ್ವರೂಪವನ್ನು ಈ ಪ್ರಕಟಣೆಯಾದ ಏಳು ದಿನಗಳೊಳಗಾಗಿ ತಿಳಿಸತಕ್ಕದ್ದು. ಈ ಮೇಲೆ ಹೇಳಿದ ಹದಿನೈದು ದಿನಗಳೊಳಗೆ ಈ ಪ್ರಕಟಣೆಗೆ ಯಾವುದೇ ಪ್ರತಿಕ್ರಿಯೆ ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಈ ಮೇಲೆ ನಮೂದಿಸಿರುವ ವ್ಯಕ್ತಿಯನ್ನುಳಿದು ಇನ್ನು ಯಾರಿಗೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರ ಇರುವುದಿಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಸದರೀ ಸ್ವತ್ತನ್ನು ಖರೀದಿಸುತ್ತಾರೆ. ಈ ಪ್ರಕಟಣೆಯಾದ ಹದಿನೈದು ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ : ಮೈಸೂರು ಸಿಟಿ ಚಾಮರಾಜ ಮೊಹಲ್ಲಾ ದಟ್ಟಗಳ್ಳಿ ಬಡಾವಣೆ ಇ ಮತ್ತು ಎಫ್ ಬ್ಲಾಕ್‌ನಲ್ಲಿರುವ ನಿವೇಶನ ಸಂಖ್ಯೆ 637 ರ ಪೂರ್ವ ಪಶ್ಚಿಮ 15.00 ಮೀಟರುಗಳು ಮತ್ತು ದಕ್ಷಿಣೋತ್ತರ 24.00 ಮೀಟರುಗಳ ಅಳತೆಯುಳ್ಳ 360 ಚದರ ಮೀಟರು ಅಳತೆಯ ಕಟ್ಟಡಕ್ಕೆ ಚಕ್ಕುಬಂದಿ:

ಪೂರ್ವಕ್ಕೆ: 636ನೇ ನಂಬರ್ ಸ್ವತ್ತು, ಪಶ್ಚಿಮಕ್ಕೆ : 638 ನೇ ನಂಬರ್ ಸ್ವತ್ತು, ಉತ್ತರಕ್ಕೆ : ರಸ್ತೆ , ದಕ್ಷಿಣಕ್ಕೆ: ಪ್ರಾಧಿಕಾರದ ಸ್ವತ್ತು

ಸಹಿ/– (ಎ.ವಿ.ಜಯರಾಮ ರಾವ್),
(ರೋಹಿತ್ ಸುಬ್ಬಯ್ಯ) ವಕೀಲರು
ನಂ.1230/ಎ, 2ನೇ ಕ್ರಾಸ್, (ಕೃಷ್ಣಮೂರ್ತಿ ಪುರಂ, ರಾಮ ಮಂದಿರದ ಹಿಂಭಾಗ)
ಚಾಮರಾಜ ಮೊಹಲ್ಲ, ಮೈಸೂರು 570004

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, (1) ಬೆಂಗಳೂರು ನಗರ, ಜಯನಗರ, 7ನೇ ಬ್ಲಾಕ್, 10ನೇ ಅಡ್ಡರಸ್ತೆ, ನಂಬರ್ 610 ರ ನಿವಾಸಿ, ಶ್ರೀಮತಿ ರಮ್ಯ ಎಸ್. ಕೋಂ, ಶ್ರೀ ಯಶ್ವಂತ್ ಸಿ., (2) ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಉದ್ದೂರು ಗ್ರಾಮ, 2ನೇ ಬ್ಲಾಕ್, ನಂಬರ್ 368 ರ ನಿವಾಸಿ, ಶ್ರೀಮತಿ ಚಿನ್ನಮ್ಮ ಕೋಂ ಚೌಡ ನಾಯಕ, (3) ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಉದ್ದೂರು ಗ್ರಾಮ, 3ನೇ ಬ್ಲಾಕ್, ನಂಬರ್ 831/50 ರ ನಿವಾಸಿ, ಶ್ರೀ ರೇವಣ್ಣ ಬಿನ್ ಮಾರನಾಯಕ, (4) ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಉದ್ದೂರು ಗ್ರಾಮ, 4ನೇ ಬ್ಲಾಕ್, ನಂಬರ್ 904 ರ ನಿವಾಸಿ, ಶ್ರೀಮತಿ ನಾಗಮ್ಮ ಬಿನ್ ಮರಿಚೌಡನಾಯಕ, (5) ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಉದ್ದೂರು ಗ್ರಾಮ, 2ನೇ ಬ್ಲಾಕ್, ನಂಬರ್ 367 ರ ನಿವಾಸಿ, ಶ್ರೀ ಮಹದೇವನಾಯಕ ಬಿನ್ ಮರಿಚೌಡನಾಯಕ @ ಕತ್ತೆ ಚೌಡಯ್ಯ ರವರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (7) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು, ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು, ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ತಳೂರು ಗ್ರಾಮದ ಸರ್ವೆ ನಂಬರ್ 52/1 ರಲ್ಲಿನ ಎರಡು ಎಕರೆ ಒಂದು ಗುಂಟೆ (2.01.00.00) ವಿಸ್ತೀರ್ಣದ ಕೃಷಿ ಜಮೀನಿಗೆ ಚಕ್ಕುಬಂದಿ – ಪೂರ್ವಕ್ಕೆ: ಸರ್ವೆ ನಂಬರ್ 56 ; ಪಶ್ಚಿಮಕ್ಕೆ: ಉದ್ದೂರು ಗ್ರಾಮದ ಗಡಿ ; ಉತ್ತರಕ್ಕೆ: ಉದ್ದೂರು ಗ್ರಾಮದ ಗಡಿ ; ದಕ್ಷಿಣಕ್ಕೆ: ಸರ್ವೆ ನಂಬರ್ 52/2.

ಸಹಿ/– ಎಂ.ಎನ್. ಪ್ರಕಾಶ್ ಕಾಳಪ್ಪ, ವಕೀಲರು
#2-3, First Floor, PRI Complex, 67/7A,
New Sayyaji Rao Road, Fort Mohalla,
Mysore-570 004. Mob: 93431 12535
ಸ್ಥಳ: ಮೈಸೂರು, 23–09–2022

ಸಾರ್ವಜನಿಕರ ಗಮನಕ್ಕೆ

ನನ್ನ ಕಕ್ಷಿದಾರರ ಇಚ್ಛೆಯ ಮೇರೆಗೆ, ಏನೆಂದರೆ, ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು. ಜಯಪುರ ಹೋಬಳಿ, ಮೂಗನಹುಂಡಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ನಾಗರಾಜು ರವರ ಮಗಳು ಶ್ರೀಮತಿ ಮಾಲತಿ ಸುಮಾರು 38 ವರ್ಷ ರವರಿಗಳಿಗೂ ಹಾಗೂ ನನ್ನ ಕಕ್ಷಿದಾರರಿಗೂ ಕೆಳಕಂಡ ಜಮೀನಿನ ಸಂಬಂಧ ಸದರಿ ಜಮೀನನ್ನು ಕ್ರಯಕ್ಕೆ ಪಡೆಯುವ ಸಂಬಂಧದಲ್ಲಿ ಒಡಂಬಡಿಕೆಯಾಗಿದ್ದು, ಸದರಿ ಜಮೀನನ್ನು ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಮೇಲ್ಕಂಡ ಮಾಲೀಕರು ಸಹ ಕ್ರಯ ಪತ್ರ ಬರೆದುಕೊಡಲು ಸಿದ್ಧರಿದ್ದು, ಆ ಬಗ್ಗೆ ಕೆಲವು ದಾಖಲಾತಿಗಳನ್ನು ನೀಡಿದ್ದು ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಸಂಬಂಧ, ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧ ಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧ ಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಚೇರಿಯ ಸಮಯದಲ್ಲಿ ಹಾಜರಾಗಿ ತಮ್ಮ ಅಹವಾಲು ಹಾಗೂ ತಕರಾರನ್ನು ಸಲ್ಲಿಸತಕ್ಕದ್ದು. ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧಪಟ್ಟ ಹಾಗೆ ನೊಂದಣಿ ಕ್ರಯ ಪತ್ರವನ್ನು ಪಡೆದುಕೊಂಡು ಮುಂದುವರೆಯಲು ಇಚ್ಛಿಸಿದ್ದು ಸದರಿ ಜಮೀನಿನ ಸಂಬಂಧ ಮುಂದೆ ಯಾವುದೇ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬಧ್ಯರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 34/1 ರಲ್ಲಿ 0.06 ಗುಂಟೆ ವಿಸ್ತೀರ್ಣವ ಜಮೀನು ಎಂ.ಆರ್.ಹೆಚ್.ಸಂಖ್ಯೆ 14/2013–14ರಂತೆ ಮಾಲತಿ ಅವರ ಹೆಸರಿನಲ್ಲಿರುವ ಜಮೀನಿಗೆ ಚೆಕ್ ಬಂದಿ :

ಪೂರ್ವಕ್ಕೆ : ಸರ್ವೆ ನಂ 34/2 ರಲ್ಲಿ ಮಾಲತಿ ಯವರ ಜಮೀನು. ಪಶ್ಚಿಮಕ್ಕೆ : ಸರ್ವೆ ನಂ 75 ರಲ್ಲಿ ಅರಮನೆ ಕಾವಲು: ಉತ್ತರಕ್ಕೆ : ಸರ್ವೆ ನಂ. 35/1 ಮತ್ತು 35/2 ರಲ್ಲಿ ಮಾದೇಗೌಡ ಮಾಲತಿ ರವರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ.33 ಮತ್ತು 75ರಲ್ಲಿ ನಾಗರಾಜು & ಅರಮನೆ ಕಾವಲು ಜಮೀನು.

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 34/2 ರಲ್ಲಿ 0.05 ಗುಂಟೆ ವಿಸ್ತೀರ್ಣದ ಜಮೀನು ಎಂ ಆರ್. ಹೆಚ್ ಸಂಖ್ಯೆ 14/2013–14 ರಂತೆ ಮಾಲತಿ ಅವರ ಹೆಸರಿನಲ್ಲಿ ಜಮೀನಿಗೆ ಚೆಕ್‌ಬಂದಿ: ಪೂರ್ವಕ್ಕೆ: ಸರ್ವೆ ನಂ 36 ರಲ್ಲಿ ನೈರುತ್ಯ ರೈಲ್ವೆ ಬಡಾವಣೆ, ಪಶ್ಚಿಮಕ್ಕೆ ; ಸರ್ವೆ ನಂ 34/1ರಲ್ಲಿ ನಾಗರಾಜು ರವರ ಜಮೀನು, ಉತ್ತರಕ್ಕೆ : ಸರ್ವೆ ನಂ 35/1 ಮಾದೇಗೌಡ ರವರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ 33 ರಲ್ಲಿ ನಾಗರಾಜು ರವರ ಜಮೀನು.

ಕಕ್ಷಿದಾರರ ಪರ ವಕೀಲರು, ಸಹಿ/– ಶ್ರೀ ಪಾಲಾಕ್ಷ
ವಕೀಲರು, ನಂ 645, ಮೊದಲನೇ ಮಹಡಿ, ಸೀತಾವಿಲಾಸ ಛತ್ರ, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು ಮೊ: 9448075718

ಜಿಲ್ಲೆಯ ಎಲ್ಲಾ ಶಾಲೆಗಳು ದಸರಾ ರಜೆ ನೀಡಬೇಕು

ಶಾಸಕ ಅಪ್ಪಚ್ಚು ರಂಜನ್ ಸೂಚನೆ

ಮಡಿಕೇರಿ,ಸೆ.23–ಜಿಲ್ಲೆಯ ಎಲ್ಲಾ ಶಾಲೆಗಳಿಗೂ ಅನ್ವಯವಾಗುವಂತೆ ನಾಡಹಬ್ಬ ದಸರಾ ರಜೆ ನೀಡಬೇಕು ಎಂದು ಮಡಿಕೇರಿ ಕ್ಷೇತ್ರದ ಶಾಸಕ ಅಪ್ಪಚ್ಚು ರಂಜನ್ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ.

ಕೆಲವು ಖಾಸಗಿ ಶಾಲೆಗಳು ದಸರಾ ರಜೆ ನೀಡದ ಹಿನ್ನೆಲೆಯಲ್ಲಿ ಶಾಸಕರಿಗೆ ದೂರು ಬಂದಿತ್ತು ಇದನ್ನು ಗಂಭೀರವಾಗಿ ಪರಿಗಣಿಸಿದ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್, ಎಲ್ಲಾ ಶಿಕ್ಷಣ ಸಂಸ್ಥೆಗಳು ಉಸ್ತುವಾರಿ ಸಚಿವರು ನೀಡಿದ ರಜೆ ಆದೇಶ ಪಾಲಿಸುವಂತೆ ಸೂಚಿಸಿದ್ದಾರೆ.

ಸೆ.26ರಿಂದ ಅಕ್ಟೋಬರ್ 9ರ ವರೆಗೆ ರಜೆ ಮಂಜೂರು ಮಾಡಬೇಕು. ಈ ಅವಧಿಯಲ್ಲಿ ಪರೀಕ್ಷೆ ನೆಪ ಹೇಳುವಂತಿಲ್ಲ. ಕ್ರೈಸ್ತ ಶಿಕ್ಷಣ ಸಂಸ್ಥೆಗಳೂ ಸೆ.26ರಿಂದ ಅಕ್ಟೋಬರ್ 5ರ ವರೆಗೆ ರಜೆ ನೀಡಬೇಕು. ಉಳಿದ ರಜೆಯನ್ನು ಕ್ರಿಸ್‌ಮಸ್ ರಜೆಯೊಂದಿಗೆ ಕ್ರೈಸ್ತ ವಿದ್ಯಾಸಂಸ್ಥೆಗಳು ಮರು ಹೊಂದಾಣಿಕೆ ಮಾಡಿಕೊಳ್ಳಬೇಕು ಎಂದು ಅಪ್ಪಚ್ಚು ರಂಜನ್ ಹೇಳಿದ್ದಾರೆ.

ಕೊಡಗು ಜಿಲ್ಲೆಗೆ ಮರೀಚಿಕೆಯಾದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕನಸು

ಆಸ್ಪತ್ರೆಗಾಗಿ ಅಭಿಯಾನ ನಡೆಸಲು ಕೊಡಗು ರಕ್ಷಣಾ ವೇದಿಕೆ ನಿರ್ಧಾರ

ಮಡಿಕೇರಿ,ಸೆ.23– ಕೊಡಗು ಜಿಲ್ಲೆ ಕಳೆದ ಕೆಲವು ವರ್ಷಗಳಿಂದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ನಿರೀಕ್ಷೆಯಲ್ಲಿದೆ. ಆದರೆ ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯಿಂದ ನಿರೀಕ್ಷೆಗಳು ಹುಸಿಯಾಗುತ್ತಿದೆ. ಈ ಕಾರಣದಿಂದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಪರ ಅಭಿಯಾನ ತೀವ್ರಗೊಳಿಸಲು ಕೊಡಗು ರಕ್ಷಣಾ ವೇದಿಕೆ ನಿರ್ಧರಿಸಿದೆ ಎಂದು ವೇದಿಕೆಯ ಅಧ್ಯಕ್ಷ ಅಚ್ಚಾಂಡಿರ ಪವನ್ ಪೆಮ್ಮಯ್ಯ ತಿಳಿಸಿದ್ದಾರೆ.



ಉತ್ತರ ಕರ್ನಾಟಕಕ್ಕೆ ಸುಲಭವಾಗಿ ಮಂಜೂರಾಗುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕೊಡಗು ಜಿಲ್ಲೆಗೆ ಯಾಕೆ ಲಭಿಸುತ್ತಿಲ್ಲವೆಂದು ಪ್ರಶ್ನಿಸಿರುವ ಅವರು, ಜನರ ಬಹುದಿನಗಳ ಬೇಡಿಕೆ ಈಡೇರುವವರೆಗೆ ನಿರಂತರ ಅಭಿಯಾನ ನಡೆಯಲಿದೆ ಎಂದು ಪತ್ರಿಕಾ ಹೇಳಿಕೆ ನೀಡಿದ್ದಾರೆ.

ತುರ್ತು ಸಂದರ್ಭಗಳಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರು, ಮಂಗಳೂರಿಗೆ ತೆರಳಬೇಕಾದ ಅನಿವಾರ್ಯತೆ ಇದೆ. ದಾರಿ ಮಧ್ಯ ರೋಗಿಗಳು ಪ್ರಾಣ ಬಿಟ್ಟ ಎಷ್ಟೋ ಪ್ರಕರಣಗಳಿವೆ. ಇದೇ ಕಾರಣಕ್ಕೆ ಮೂರು ವರ್ಷಗಳ ಹಿಂದೆ ಕೊಡಗಿನ ಯುವಜನತೆ ಪ್ರಪ್ರಥಮ ಬಾರಿಗೆ ಪಕ್ಷ ಭೇದವಿಲ್ಲದೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಬೇಕು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಒಕ್ಕೊರಲ ಧ್ವನಿಯೆತ್ತಿದ್ದರು. ಸಾಮಾಜಿಕ ಜಾಲತಾಣದ ಈ ಅಭಿಯಾನ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿತ್ತು. ಆದರೆ ಕರ್ನಾಟಕ ಸರ್ಕಾರ ಕೊಡಗಿನಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಮಾಡುವ ಯಾವುದೇ ಯೋಜನೆ ಇಲ್ಲ ಎಂದು ಹೇಳಿಕೆ ನೀಡುವ ಮೂಲಕ ಜನರ ಕನಸಿಗೆ ತಣ್ಣೀರು ಎರಚಿತು. ಕಳೆದ ಒಂದು ತಿಂಗಳ ಹಿಂದೆ ಕೊಡಗಿನ ಅಭಿಯಾನದ ಮಾದರಿಯಲ್ಲಿ ಉತ್ತರ ಕನ್ನಡದ ಯುವಜನತೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಬೇಕು ಎಂದು ಸಾಮಾಜಿಕ ಜಾಲತಾಣಗಳ ಮೂಲಕವೇ ಹಕ್ಕೊತ್ತಾಯವನ್ನು ಮಂಡಿಸಿದರು.

ವಿವಿಧ ಗಣ್ಯರ ಮೂಲಕ ಬೆಂಬಲ ಪಡೆದುಕೊಂಡು, ರಾಜಕಾರಣಿಗಳು ಹಾಗೂ ಜನಪ್ರತಿನಿಧಿಗಳ ಮೂಲಕ ಕರ್ನಾಟಕ ಸರ್ಕಾರದ ಮೇಲೆ ಇನ್ನಿಲ್ಲದ ಒತ್ತಡ ಹೇರಿ ತಮ್ಮ ಬೇಡಿಕೆಯನ್ನು ಈಡೇರಿಸಿಕೊಂಡಿದ್ದಾರೆ. ಆದರೆ ಕೊಡಗು ಜನರಿಗೆ ಯಾಕೆ ಈ ಮಲತಾಯಿ ಧೋರಣೆ ಎನ್ನುವ ಪ್ರಶ್ನೆ ಇತ್ತೀಚಿನ ದಿನಗಳಲ್ಲಿ ಕಾಡುತ್ತಿರುವುದು ಸುಳ್ಳಲ್ಲ ಎಂದು ಪವನ್ ಪೆಮ್ಮಯ್ಯ ಬೇಸರ ವ್ಯಕ್ತಪಡಿಸಿದ್ದಾರೆ.

ಕೊಡಗಿಗೆ ಯಾವುದೇ ಪ್ರಯೋಜನವಿಲ್ಲದ ಮೊಟ್ಟೆ, ಜಯಂತಿಯಂತಹ ವಿಚಾರಗಳು ರಾರಾಜಿಸುತ್ತಿವೆ. ಮಾನವ–ವನ್ಯಜೀವಿ ಸಂಘರ್ಷ, ರಸ್ತೆ ಅವ್ಯವಸ್ಥೆ, ವಿದ್ಯುತ್ ಕೊರತೆ, ಉನ್ನತ ವ್ಯಾಸಂಗಕ್ಕಾಗಿ ಶಿಕ್ಷಣ ಸಂಸ್ಥೆಗಳ ಅಲಭ್ಯತೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅಗತ್ಯತೆಯ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುತ್ತಿಲ್ಲ ಎಂದು ಪವನ್ ಪೆಮ್ಮಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವಿ.ಪೇಟೆ ಬಳಿ ಡಬ್ಬಲ್ ಬ್ಯಾರನ್ ಗನ್‌ನಿಂದ ಗುಂಡು ಹಾರಿಸಿಕೊಂಡು ವ್ಯಕ್ತಿ ಆತ್ಮಹತ್ಯೆ

ಕುಟುಂಬದವರ ಜೊತೆ ಜಗಳ ಮಾಡಿಕೊಂಡು ಮನೆ ಬಿಟ್ಟು ಹೋಗಿದ್ದವ ಶವವಾಗಿ ಪತ್ತೆ



ವಿರಾಜಪೇಟೆ, ಸೆ.23– ಕುಟುಂಬದವರ ಜೊತೆ ಜಗಳ ಮಾಡಿಕೊಂಡು ಮನೆ ಬಿಟ್ಟು ಹೋಗಿದ್ದ ವ್ಯಕ್ತಿಯೊಬ್ಬರು ಗ್ರಾಮದ ತೋಟವೊಂದರಲ್ಲಿ ಡಬ್ಬಲ್ ಬ್ಯಾರನ್ ಗನ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಮೀಪದ ಮೈತಾಡಿ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ವಾಸಿ ಶರತ್ ಪೂವಪ್ಪ (33) ಎಂಬವರೇ ಆತ್ಮಹತ್ಯೆಗೆ ಶರಣಾದವರು. ಮೃತರು ಪತ್ನಿ, ಮಗು, ತಂದೆ ಸೇರಿದಂತೆ ಕುಟುಂಬಸ್ಥರನ್ನು ಅಗಲಿದ್ದಾರೆ.

ಬೆಂಗಳೂರಿನಲ್ಲಿ ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡುತ್ತಿದ್ದ ಶರತ್ ಪೂವಪ್ಪ ಇತ್ತೀಚೆಗೆ ಊರಿಗೆ ಹಿಂತಿರುಗಿದ್ದರೆನ್ನಲಾಗಿದೆ. ಈ ವೇಳೆ ಕುಟುಂಬದವರ ಜೊತೆ ಜಗಳವಾಗಿತ್ತು. ಇದರಿಂದ ಬೇಸತ್ತು ಸೆ.21 ರಂದು ಮನೆ ಬಿಟ್ಟು ಹೋದರೆನ್ನಲಾಗಿದೆ. ಹೋಗುವಾಗ ತಮ್ಮ ಜೊತೆ ಡಬ್ಬಲ್ ಬ್ಯಾರನ್ ಗನ್ ಕೊಂಡೊಯ್ದಿದ್ದರಂತೆ. ಅಂದು ಎಷ್ಟು ಹೊತ್ತಾದರೂ ಮನೆಗೆ ಹಿಂತಿರುಗದ ಹಿನ್ನೆಲೆಯಲ್ಲಿ ಅವರ ತಂದೆ ಶರತ್ ಪೂವಪ್ಪನವರು ನಾಪತ್ತೆಯಾಗಿದ್ದಾರೆ ಎಂದು ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಅಂದಿನಿಂದ ಇವರಿಗಾಗಿ ಹುಡುಕಾಟ ನಡೆಸುತ್ತಿದ್ದಾಗ, ಗ್ರಾಮದ ತೋಟವೊಂದರಲ್ಲಿ ಮೃತ ದೇಹ ಬಿದ್ದಿರುವ ವಿಷಯ ತಿಳಿದ ಕುಟುಂಬಸ್ಥರು ಮತ್ತು ಪೊಲೀಸರು ಸ್ಥಳಕ್ಕೆ ತೆರಳಿ ನೋಡಿದಾಗ ಅದು ಶರತ್ ಪೂವಪ್ಪನವರ ಮೃತದೇಹವಾಗಿತ್ತು. ಪಕ್ಕದಲ್ಲಿ ಗನ್ ಸಹ ಇತ್ತು ಎಂದು ಹೇಳಲಾಗಿದೆ. ವಿರಾಜಪೇಟೆ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮಾಲ್ದಾರೆಯಲ್ಲಿ ಸೆರೆ ಹಿಡಿದ ಹುಲಿ ಬನ್ನೇರುಘಟ್ಟ ಜೈವಿಕ ಉದ್ಯಾನ ವನಕ್ಕೆ

ಸಿದ್ದಾಪುರ, ಸೆ. 23– ಜಾನುವಾರುಗಳನ್ನು ಬಲಿ ತೆಗೆದುಕೊಂಡು ಪುಂಡಾಟಿಕೆ ನಡೆಸಿ ಸೆರೆ ಸಿಕ್ಕ ಹುಲಿಯನ್ನು ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ಬಿಡಲಾಗಿದೆ.



ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದ್ದ ಹುಲಿಯನ್ನ ಹತ್ತು ದಿನಗಳ ಕಾಲ ಕಾರ್ಯಾಚರಣೆ ನಡೆಸಿ ಸೆರೆ ಹಿಡಿಯಲಾಗಿತ್ತು. ಹುಲಿಗಳ ನಡುವೆ ಕಾದಾಟ ಸಂದರ್ಭ ಸಣ್ಣ–ಪುಟ್ಟ ಗಾಯಗಳಾಗಿದ್ದ ಹುಲಿಗೆ ಪ್ರಥಮ ಚಿಕಿತ್ಸೆ ನೀಡಲಾಗಿತ್ತು. ಮೇಲಧಿಕಾರಿಗಳ ನಿರ್ದೇಶನದಂತೆ ಬನ್ನೇರುಘಟ್ಟ ಜೈವಿಕ ಉದ್ಯಾನ ವನದಲ್ಲಿ ಬಿಡಲಾಯಿತು.

ದಕ್ಷಿಣ ಕೊಡಗಿನ ಹಲವೆಡೆ ಹೆಚ್ಚಾಗಿ ಕಾಣಿಸಿಕೊಂಡು ಜಾನುವಾರುಗಳನ್ನು ಬೇಟೆಯಾಡುತ್ತಿತ್ತು. ಈ ಹಿಂದೆ ಪಾಲಿಬೆಟ್ಟ, ಮೇಕೂರು,ಬಾಡಗ ಬಾಣಂಗಾಲ, ಹುಂಡಿ, ಮೈಲಾಪುರ, ಮಾಲ್ದಾರೆ, ಕುಶಾಲ್ ನಗರ ವ್ಯಾಪ್ತಿಯಲ್ಲೂ ಕಾಣಿಸಿಕೊಂಡಿತ್ತು.

ಹುಲಿಗಳ ನಡುವೆ ಕಾದಾಟ ದಿಂದ ಕಾಲಿಗೆ ಗಾಯವಾಗಿ ಅರಣ್ಯದಲ್ಲಿ ಬೇಟೆಯಾಡಲು ಸಾಧ್ಯವಾಗದೆ ಕಾಫಿ ತೋಟಗಳತ್ತ ಮುಖ ಮಾಡಿತ್ತು. ಮಾಲ್ದಾರೆ ವ್ಯಾಪ್ತಿಯಲ್ಲಿ ಬೀಡು ಬಿಟ್ಟು ಆರು ಜಾನುವಾರುಗಳನ್ನು ಬಲಿ ತೆಗೆದುಕೊಂಡಿತ್ತು.

ಸಾರ್ವಜನಿಕವಾಗಿ ಹಾಡಹಗಲೇ ಕಾಣಿಸಿಕೊಳ್ಳುವುದರ ಮೂಲಕ ಗ್ರಾಮಸ್ಥರಲ್ಲಿ ಭೀತಿ ಮೂಡಿಸಿದ್ದ ಹುಲಿಯನ್ನು ಹತ್ತು ದಿನಗಳ ಕಾರ್ಯಾಚರಣೆ ನಂತರ ಅರಣ್ಯ ಇಲಾಖೆ ಸಿಬ್ಬಂದಿಗಳು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದರು.

ಸೋ.ಪೇಟೆಯಲ್ಲಿ ಅದ್ದೂರಿ ಶರನ್ನವರಾತ್ರಿ ಉತ್ಸವ

ಸೋಮವಾರಪೇಟೆ, ಸೆ.23– ಇಲ್ಲಿನ ಶ್ರೀ ಬಸವೇಶ್ವರ ದೇವಾಲಯ, ವೀರಶೈವ ಸಮಾಜ, ಅಕ್ಕನ ಬಳಗ ಮತ್ತು ಬಸವೇಶ್ವರ ಯುವಕ ಸಂಘದ ಸಂಯುಕ್ತ ಆಶ್ರಯದಲ್ಲಿ 5ನೇ ವರ್ಷದ ಶರನ್ನವರಾತ್ರಿ ಉತ್ಸವ ಅದ್ದೂರಿಯಿಂದ ಆಚರಿಸಲಾಗುವುದು ಎಂದು ಸಮಾಜದ ಯಜಮಾನರಾದ ಬಿ.ಪಿ. ಶಿವಕುಮಾರ್ ಹೇಳಿದರು.

ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.26ರಿಂದ ಅ.5 ರವರೆಗೆ ಶ್ರೀ ಬಸವೇಶ್ವರ ದೇವಾಲಯದಲ್ಲಿ ಶ್ರೀ ಆದಿಶಕ್ತಿ ನವದುರ್ಗೆಯರ ಘಟ ಸ್ಥಾಪನೆ, ಶ್ರೀ ದೇವಿ ಮಹಾತ್ಮೆ ಪಾರಾಯಣ ಸೇರಿದಂತೆ ವಿವಿಧ ಪೂಜೆಗಳು ನಡೆಯುವುದು. ಸೆ.26 ರಂದು ಬೆಳಗ್ಗೆ 8ಕ್ಕೆ ಆನೆಕೆರೆಯಿಂದ ಗಂಗೆ ಪೂಜೆಯೊಂದಿಗೆ ಶ್ರೀ ದುರ್ಗಾದೇವಿಯ ಮೂರ್ತಿಯನ್ನು ದೇವಾಲಯಕ್ಕೆ ತಂದು ಘಟ ಸ್ಥಾಪಿಸಲಾಗುವುದು. ದೇವಿಗೆ ಕೈಲಾಸ ದರ್ಶನ ಅಲಂಕಾರ ಮಾಡಲಾಗುವುದು ಎಂದು ಹೇಳಿದರು.

27 ರಂದು ದೇವಿಗೆ ವಿಳ್ಯೆದೆಲೆ ಅಲಂಕಾರ, 28 ರಂದು ಗೆಜ್ಜೆವಸ್ತ್ರ ಅಲಂಕಾರ, 29 ರಂದು ಬಳೆಗಳ ಅಲಂಕಾರ, 30 ರಂದು ಹಣ್ಣಿನ ಅಲಂಕಾರ, ಅ. 1 ರಂದು ನಗನಾಣ್ಯಗಳ ಅಲಂಕಾರ, 2 ರಂದು ತರಕಾರಿ ಅಲಂಕಾರ ಮಾಡಲಾಗುವುದು. ಅಂದು ಸರಸ್ವತಿ ಪೂಜೆ ಇರುವುದರಿಂದ ಮಕ್ಕಳಿಗೆ ಅಕ್ಷರಭ್ಯಾಸ ಮಾಡಿಸಲಾಗುವುದು. ಪೋಷಕರು ಮೊದಲೇ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದರು.

3 ರಂದು ಸೀರೆ ಅಲಂಕಾರ ಮಾಡಲಾಗುವುದು. ಅಂದು ದುರ್ಗಾಷ್ಟಮಿ ಇರುವುದರಿಂದ ದೇವಾಲಯದಲ್ಲಿ ದುರ್ಗಾ ಹೋಮ ನಡೆಸಲಾಗುವುದು. 4 ರಂದು ರಾಜರಾಜೇಶ್ವರಿ ಅಲಂಕಾರ ಹಾಗೂ 5 ರಂದು ಉಯ್ಯಾಲೋತ್ಸವ ಅಲಂಕಾರ ಮಾಡಲಾಗುವುದು. ಸಂಜೆ 6 ಗಂಟೆಗೆ ಬನ್ನಿ ಮುಡಿದು ವಿಜಯದಶಮಿ ಆಚರಣೆ, ನಂತರ ಶ್ರೀ ಆದಿಶಕ್ತಿ ಅಮ್ಮನವರ ಉಯ್ಯಾಲೋತ್ಸವ ನಡೆಯಲಿದೆ. 9 ದಿನಗಳು ಹಗಲು ಮತ್ತು ರಾತ್ರಿ ವಿಶೇಷ ಪೂಜಾ ಕಾರ್ಯಗಳು ನಡೆಯುವುದು. ಈ ಎಲ್ಲಾ ಕಾರ್ಯಕ್ರಮಗಳಿಗೆ ಸಮಾಜ ಬಾಂಧವರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು.

ಹೆಚ್ಚಿನ ಮಾಹಿತಿಗಾಗಿ 6360176468, 9448017656 ಸಂಪರ್ಕಿಸಲು ಮನವಿ ಮಾಡಿದ್ದಾರೆ. ಗೋಷ್ಠಿಯಲ್ಲಿ ಶೆಟ್ರು ಬಿ.ಆರ್. ಮೃತ್ಯುಂಜಯ ಪ್ರಧಾನ ಕಾರ್ಯದರ್ಶಿ ಸಿ.ಸಿ. ನಾಗರಾಜ್, ಸದಸ್ಯರಾದ ಬಿ.ಎಸ್. ಗುರುಪ್ರಸಾದ್ ಇದ್ದರು.

ಕೆರೆಗಳ ಒತ್ತುವರಿ ತೆರವು

ಸೋಮವಾರಪೇಟೆ, ಸೆ.23– ನೇರುಗಳಲೆ ಗ್ರಾಪಂ ವ್ಯಾಪ್ತಿಯ ಮಸಗೋಡು ಗ್ರಾಮದಲ್ಲಿ ಎರಡು ಕೆರೆಗಳ ಒತ್ತುವರಿಯನ್ನು ತಹಸೀಲ್ದಾರ್ ನೇತೃತ್ವದಲ್ಲಿ ಇತ್ತೀಚೆಗೆ ತೆರವುಗೊಳಿಸಲಾಯಿತು. ಮಸಗೋಡು ಗ್ರಾಮದ ಸರ್ವೆ ನಂಬರ್ 99/01ರಲ್ಲಿ 1.65 ಎಕರೆ ಸ್ಥಳವನ್ನು ವಿರೇಂದ್ರ ವಿಶ್ವನಾಥ್ ಹಾಗೂ ಸರ್ವೆ ನಂ. 25ರಲ್ಲಿ 32 ಸೆಂಟ್ಸ್ ಕೆರೆಯನ್ನು ಹನುಮಂತಪ್ಪ ಎಂಬವರು ಒತ್ತುವರಿ ಮಾಡಿಕೊಂಡಿದ್ದರು. ಈ ಸಂದರ್ಭ ತಹಸೀಲ್ದಾರ್ ನಾಗುಂದ ಮಾತನಾಡಿ, ಒತ್ತುವರಿ ಕೆರೆಗಳ ಸರ್ವೆ ನಡೆಸಿ ತೆರವುಗೊಳಿಸಲು ಆದೇಶ ನೀಡಿದ್ದು, ಈ ಹಿನ್ನೆಲೆಯಲ್ಲಿ ಎರಡು ಕೆರೆಗಳ ಒತ್ತುವರಿ ಸ್ಥಳವನ್ನು ತೆರವುಗೊಳಿಸಿ ಪಂಚಾಯಿತಿ ಪಿಡಿಓಗೆ ಹಸ್ತಾಂತರಿಸಲಾಗಿದೆ ಎಂದು ತಿಳಿಸಿದರು. ಸರ್ವೆ ಕಾರ್ಯವನ್ನು ತಾಲೂಕು ಸರ್ವೆಯರ್ ರವಿ ನಡೆಸಿದರು. ಈ ಸಂದರ್ಭ ಕಂದಾಯ ಅಧಿಕಾರಿ ಪ್ರಹ್ಲಾದ್, ಗ್ರಾಮ ಲೆಕ್ಕಿಗರಾದ ಎಚ್.ಕೆ.ಶ್ವೇತ, ಗ್ರಾಮ ಸಹಾಯಕ ರಾಯನ್ ಹಾಗೂ ಗ್ರಾಮಸ್ಥರು ಇದ್ದರು.



ನವಿಲು ಮಾರಾಟ ಯತ್ನ: ಇಬ್ಬರ ಬಂಧನ



ಮಡಿಕೇರಿ, ಸೆ.23– ಅಕ್ರಮವಾಗಿ ಜೀವಂತ ನವಿಲನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕ ಬಂಧಿಸಿ ಒಂದು ಜೀವಂತ ನವಿಲನ್ನು ವಶಕ್ಕೆ ಪಡೆದಿದೆ.

ಮಡಿಕೇರಿ–ಸುಂಟಿಕೊಪ್ಪ ಮಾರ್ಗದಲ್ಲಿರುವ ರೆಸಾರ್ಟ್ ಒಂದರ ಬಳಿ ಇಬ್ಬರು ವ್ಯಕ್ತಿಗಳು ನವಿಲನ್ನು ಮಾರಾಟ ಮಾಡಲು ಯತ್ನಿಸುತ್ತಿರುವ ಬಗ್ಗೆ ಮಾಹಿತಿ ತಿಳಿದು ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಸಿಬ್ಬಂದಿಗಳು ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಿ ಸಹಿತ ನವಿಲು ಮತ್ತು ಒಂದು ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದಿದ್ದಾರೆ.

ಜೆ.ಎಂ. ಕಾರ್ತಿಕ್ ಮತ್ತು ಎಸ್.ಹೆಚ್.ಹರೀಶ್ ಬಂಧಿತ ಆರೋಪಿಗಳು. ಬಂಧಿತರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಸಿಐಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಕೆ.ವಿ.ಶರತ್‌ಚಂದ್ರ ನಿರ್ದೇಶನದ ಮೇರೆಗೆ ಮಡಿಕೇರಿ ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಪೊಲೀಸ್ ಅಧೀಕ್ಷಕ ಕೆ.ಬಿ ವಿಶ್ವನಾಥ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮಡಿಕೇರಿ ಅರಣ್ಯ ಸಂಚಾರಿ ದಳದ ಪಿ.ಎಸ್.ಐ ಸಿ.ಯು.ಸವಿ, ಹೆಡ್‌ಕಾನ್ಸ್‌ಟೇಬಲ್‌ಗಳಾದ ಶೇಖರ್, ರಾಜೇಶ್, ರಾಘವೇಂದ್ರ, ಯೋಗೇಶ್, ಮೋಹನ ಹಾಗೂ ಕಾನ್ಸ್‌ಟೇಬಲ್ ಸ್ವಾಮಿ, ಮಂಜುನಾಥ ಅವರುಗಳು ಪಾಲ್ಗೊಂಡಿದ್ದರು.

ಸೆ.27ರಿಂದ ಚಾ.ನಗರ ದಸರಾ ಮಹೋತ್ಸವ

ಜಿಲ್ಲಾಡಳಿತದಿಂದ ಭರದ ಸಿದ್ಧತೆ

ಅನುರಾಧ ಭಟ್ ಗಾಯನ, ಪ್ರೊ. ಕೃಷ್ಣೇಗೌಡರ ಹಾಸ್ಯ, ಕಿಲಾಡಿಗಳಿಂದ ಕಾಮಿಡಿ


ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಸೆ.23–ಚಾಮರಾಜನಗರದಲ್ಲಿ ಸೆ.27ರಿಂದ ಸೆ.30ರವರೆಗೆ 4 ದಿನಗಳ ಕಾಲ ದಸರಾ ಮಹೋತ್ಸವ ನಡೆಯಲಿದ್ದು, ಇದಕ್ಕಾಗಿ ಭರದ ಸಿದ್ಧತೆ ನಡೆಯುತ್ತಿದೆ. ಖ್ಯಾತ ಗಾಯಕಿ ಅನುರಾಧ ಭಟ್ ಅವರ ತಂಡ, ಕಾಮಿಡಿ ಕಿಲಾಡಿಗಳ ತಂಡ, ಪ್ರೊ.ಎಂ.ಕೃಷ್ಣೇಗೌಡ ಅವರ ಹಾಸ್ಯ ಹಾಗೂ ಐಶ್ವರ್ಯ ಮತ್ತು ತಂಡದವರಿಂದ ಸಂಗೀತ ಸಂಜೆ ಆಯೋಜಿಸಲಾಗಿದೆ.

ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ಮೆರವಣಿಗೆ, ಮಹಿಳಾ ದಸರಾ, ರೈತ ದಸರಾ, ಫಲಪುಷ್ಪ ಪ್ರದರ್ಶನ, ಚಿತ್ರಕಲಾ ಪ್ರದರ್ಶನ ಹಾಗೂ ಮ್ಯಾರಥಾನ್ ಏರ್ಪಡಿಸಲಾಗಿದೆ. ದಸರಾವನ್ನು ಆಕರ್ಷಕವಾಗಿ ನಡೆಸುವ ಸಲುವಾಗಿ ಜಿಲ್ಲಾಡಳಿತದಿಂದ 14 ತಂಡಗಳನ್ನು ರಚಿಸಲಾಗಿದೆ. ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಹಾಕಲಾಗುವ ಪ್ರಧಾನ ವೇದಿಕೆಯಲ್ಲಿ ಸಂಜೆ ಕಾರ್ಯಕ್ರಮಗಳು ನಡೆಯಲಿದೆ. ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಜೆಹೆಚ್.ಪಟೇಲ್ ಸಭಾಂಗಣ ಹಾಗೂ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಬೆಳಗ್ಗೆಯಿಂದ ಸಂಜೆ ತನಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಕಾರ್ಯಕ್ರಮಗಳನ್ನು ಕೋರಿ 320 ಅರ್ಜಿಗಳು ಬಂದಿದ್ದವು. ಇದರಲ್ಲಿ 100 ಅರ್ಜಿಗಳನ್ನು ಪುರಸ್ಕರಿಸಲಾಗಿದೆ. ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಅವಕಾಶಗಳನ್ನು ನೀಡಲಾಗಿದೆ. ಮೈಸೂರಿನ ಯುವ ದಸರಾದಲ್ಲಿ ಪಾಲ್ಗೊಂಡಿದ್ದ ಜಿಲ್ಲೆಯ 10 ವಿವಿಧ ಕಾಲೇಜಿನ ವಿದ್ಯಾರ್ಥಿಗಳಿಗೆ ನೃತ್ಯ ಮಾಡಲು ಅವಕಾಶ ಕಲ್ಪಿಸಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಭಾರ ಉಪನಿರ್ದೇಶಕ ಗುರುಲಿಂಗಯ್ಯ ಅವರು 'ಮೈಸೂರುಮಿತ್ರ'ನಿಗೆ ತಿಳಿಸಿದರು.

ದಸರಾ ಆರಂಭವಾಗುವ ಮೊದಲ ದಿನ ಸೆ.27ರಂದು ಬೆಂಗಳೂರಿನ ಐಶ್ವರ್ಯ ಮತ್ತು ತಂಡದವರಿಂದ ಸಂಗೀತ ಸಂಜೆ ಏರ್ಪಡಿಸಲಾಗಿದೆ. 28ರಂದು ಖ್ಯಾತವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಅವರ ತಂಡದವರಿಂದ ಹಾಸ್ಯೋತ್ಸವ ಆಯೋಜಿಸಲಾಗಿದೆ. 29ರಂದು ಕಾಮಿಡಿ ಕಿಲಾಡಿಗಳ ತಂಡ ಮನರಂಜಿಸಲಿದೆ. 30ರಂದು ಸರಿಗಮಪ ಖ್ಯಾತಿಯ ಖ್ಯಾತ ಗಾಯಕಿ ಅನುರಾಧ ಭಟ್ ಅವರ ನೇತೃತ್ವದಲ್ಲಿ ಶ್ರೀಹರ್ಷ, ಕಂಬದ ರಂಗಯ್ಯ, ಅಂಕಿತ ಗುಂಡು ಸೇರಿದಂತೆ ಇತರ ಗಾಯಕರು ಸಂಗೀತ ಗಂಗೆಯನ್ನೇ ಹರಿಸಲಿದ್ದಾರೆ.



ಫೈಲ್ ಚಿತ್ರ

> ನಗರದ ದಸರಾ ಮಹೋತ್ಸವಕ್ಕೆ ಪ್ರಮುಖ ರಸ್ತೆಗಳು, ವೃತ್ತಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲು 27 ಲಕ್ಷ ರೂ. ನಿಗದಿಗೊಳಿಸಲಾಗಿದೆ. ಕಳೆದ ವರ್ಷಗಳಿಗಿಂತ ಈ ಬಾರಿ ಅದ್ದೂರಿಯಾಗಿ ವಿದ್ಯುತ್ ದೀಪಗಳಿಂದ ನಗರವನ್ನು ಕಂಗೊಳಿಸಲು ಎಲ್ಲಾ ಸಿದ್ಧತೆಗಳಲ್ಲಿ ನಡೆಯುತ್ತಿವೆ.
>
> –ಆರ್. ವಸಂತ್‌ಕುಮಾರ್, ಚಾ.ನಗರ ಸೆಸ್ಕ್ ವಿಭಾಗದ ಇಇ.

ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸಲಿದೆ ನಗರ

ಚಾಮರಾಜನಗರ: ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ನಗರ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸಲಿದೆ. ಸೆ.26 ರಿಂದ ಮೈಸೂರು ದಸರಾ ಮುಕ್ತಾಯವಾಗುವವರೆಗೆ ನಗರ ಜಗಮಗಿಸಲಿದೆ. ಇದಕ್ಕಾಗಿ ಬಗೆಬಗೆಯ ವಿದ್ಯುತ್ ದೀಪಗಳನ್ನು ಅಳವಡಿಸುವ ಕಾರ್ಯ ನಡೆಯುತ್ತಿವೆ. ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ, ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಮುಂಭಾಗದ ಉದ್ಯಾನವನ, ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ, ಸುಲ್ತಾನ್ ಷರೀಫ್ ವೃತ್ತ, ಸಂತೇಮರಹಳ್ಳಿ ವೃತ್ತಗಳಲ್ಲಿ ವಿದ್ಯುತ್‌ದೀಪ ಅಳವಡಿಸಲಾಗುವುದು.

ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಬಳಿ ಶ್ರೀ ಮಹದೇಶ್ವರ, ಜಿಲ್ಲಾಡಳಿತ ಮುಂಭಾಗ ಶ್ರೀ ಚಾಮುಂಡೇಶ್ವರಿದೇವಿ, ಸುಲ್ತಾನ್ ಷರೀಫ್ ವೃತ್ತದಲ್ಲಿ ಗೋಪಾಲಸ್ವಾಮಿ ದೇವರ ಪ್ರತಿಮೆಗಳನ್ನು ಅಳವಡಿಸಿ ವಿದ್ಯುತ್ ದೀಪಾಲಂಕಾರ ಮಾಡಲು ಸಿದ್ಧತೆಗಳು ನಡೆಯುತ್ತಿವೆ. ಜಿಲ್ಲಾಡಳಿತ ಭವನ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ, ಸೆಸ್ಕ್ ಕಚೇರಿ ಹಾಗೂ ತಾಲೂಕು ಕಚೇರಿ ಸೇರಿದಂತೆ ಇತರ ಕಚೇರಿಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತಿದೆ. ವಿದ್ಯುತ್ ದೀಪಾಲಂಕಾರಕ್ಕೆ 27 ಲಕ್ಷ ರೂ. ಅನುದಾನ ನೀಡಲಾಗಿದೆ. ವಿದ್ಯುತ್ ದೀಪಗಳನ್ನು ಅಳವಡಿಸುವ ಕಾರ್ಯ ಈಗಾಗಲೇ ಪ್ರಾರಂಭವಾಗಿದ್ದು, ಸೆ.27ರಿಂದ ಮೈಸೂರು ದಸರಾ ಮುಕ್ತಾಯವಾಗುವವರೆಗೆ ದೀಪಾಲಂಕಾರ ಇರಲಿದೆ ಎಂದು ಸೆಸ್ಕ್ ಚಾ.ನಗರ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಆರ್. ವಸಂತ್‌ಕುಮಾರ್ ಮೈಸೂರು ಮಿತ್ರನಿಗೆ ತಿಳಿಸಿದ್ದಾರೆ.

ಸ್ಥಳೀಯ ಕಲಾವಿದರೂ ಸಹ ತಮ್ಮ ಪ್ರತಿಭೆ ಪ್ರದರ್ಶಿಸಲಿದ್ದಾರೆ. ಭರತನಾಟ್ಯ, ಜಾನಪದ ಗೀತೆ, ಸೋಬಾನೆ ಪದಗಳಿಗೂ ಅವಕಾಶ ಕಲ್ಪಿಸಲಾಗಿದೆ. ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ 17 ನಾಟಕಗಳು ಸ್ಥಳೀಯ ಕಲಾವಿದರಿಂದ ಪ್ರದರ್ಶನವಾಗಲಿದೆ.

ಜಿಲ್ಲಾಡಳಿತ ಹಾಗೂ ಮೈಸೂರಿನ ದಸರಾ ಮಹೋತ್ಸವ ಸಮಿತಿಯ ಆಶ್ರಯದಲ್ಲಿ ನಗರದಲ್ಲಿ 4 ದಿನಗಳ ಕಾಲ ದಸರಾ ಮಹೋತ್ಸವ ಆಯೋಜಿಸಲಾಗಿದೆ. ಇದಕ್ಕಾಗಿ ಸರ್ಕಾರ 1 ಕೋಟಿ ರೂ. ಬಿಡುಗಡೆ ಮಾಡಿದೆ. ಇದಲ್ಲದೆ ಪ್ರಯೋಜಕರಿಂದ ಪ್ರಯೋಜಕತ್ವವನ್ನು ಸಹ ಪಡೆಯಲಾಗಿದೆ. ಒಟ್ಟಾರೆ ಚಾಮರಾಜನಗರದ ದಸರಾವನ್ನು ಅದ್ದೂರಿಯಾಗಿ ಆಚರಿಸಲು ಜಿಲ್ಲಾಡಳಿತ ಸಕಲ ಸಿದ್ಧತೆಯಲ್ಲಿ ತೊಡಗಿದೆ.

ಚಿರತೆ ದಾಳಿಗೆ ದನಗಾಹಿ ಬಲಿ

ಹನೂರು, ಸೆ.23–ಹಸು ಮೇಯಿಸಲು ತೆರಳಿದ್ದ ದನಗಾಹಿ ಮೇಲೆ ಚಿರತೆ ದಾಳಿ ನಡೆಸಿ ಬಲಿ ಪಡೆದಿರುವ ಘಟನೆ ತಾಲೂಕಿನಲ್ಲಿ ನಡೆದಿದೆ.



ತಾಲೂಕಿನ ಕೆವಿಎನ್ ದೊಡ್ಡಿ ಗ್ರಾಮದ ಗೋವಿಂದಯ್ಯ(65) ಬಳಿ ಚಿರತೆ ದಾಳಿಗೆ ಮೃತಪಟ್ಟಿದ್ದು, ಕರುವೊಂದನ್ನು ಚಿರತೆ ಬಲಿ ಪಡೆದಿದೆ. ಗೋವಿಂದಯ್ಯ ಎಂದಿನಂತೆ ಹಸು ಮೇಯಿಸಲು ತೆರಳಿದ್ದ ವೇಳೆ ಚಿರತೆ ದಾಳಿ ನಡೆಸಿ, ತೀವ್ರವಾಗಿ ಗಾಯಗೊಳಿಸಿದೆ. ಚಿರತೆ ದಾಳಿಗೆ ಗೋವಿಂದಯ್ಯ ಸ್ಥಳದಲ್ಲೇ ಅಸುನಿಗಿದ್ದಾರೆ. ಇದೇ ವೇಳೆ ಕರುವೊಂದನ್ನು ಎಳೆದೊಯ್ದು ಕೊಂದು, ಅರೆಬರೆ ತಿಂದು ಪರಾರಿಯಾಗಿದೆ. ಈ ಹಿಂದೆ ದಾಳಿ ನಡೆಸಿ ಮೇಕೆಯೊಂದನ್ನು ಬಲಿ ಪಡೆದಿತ್ತು. ವಿಷಯ ತಿಳಿಯುತ್ತಿದ್ದಂತೆ ರೈತ ಮುಖಂಡರು, ಅರಣ್ಯಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದರು. ಘಟನೆಯಿಂದ ಈ ಭಾಗದ ಜನರು ಭಯಭೀತರಾಗಿದ್ದು, ಕೂಡಲೇ ಚಿರತೆ ಸೆರೆ ಹಿಡಿದು ಬೇರೆಡೆ ಸ್ಥಳಾಂತರಿಸುವಂತೆ ಸುತ್ತಮುತ್ತಲಿನ ಗ್ರಾಮಸ್ಥರು ಆಗ್ರಹಿಸಿದರು.

ಬೈಕ್‌ಗಳ ಡಿಕ್ಕಿ; ಇಬ್ಬರಿಗೆ ಗಾಯ

ಬೇಗೂರು, ಸೆ.23–ಬೈಕ್‌ಗಳ ಮುಖಾಮುಖಿ ಡಿಕ್ಕಿ ಸಂಭವಿಸಿ ಸವಾರರಿಬ್ಬರು ಗಾಯಗೊಂಡಿರುವ ಘಟನೆ ಬೇಗೂರು ಬಳಿಯ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. ಬೇಗೂರಿನ ನಿವಾಸಿಗಳಾದ ಸೋಮು (35), ರಾಜಶೆಟ್ಟಿ (45) ಗಾಯಗೊಂಡವರು. ಇವರು ಬೈಕ್‌ನಲ್ಲಿ ಗ್ರಾಮದ ಚೆಸ್ಕಾಂ ಕಚೇರಿಯ ಬಳಿ ತಿರುವು ತಗೆದುಕೊಳ್ಳುವಾಗ ಗುಂಡ್ಲುಪೇಟೆಯಿಂದ ತೆರಳುತ್ತಿದ್ದ ಬೆಂಗಳೂರು ಮೂಲದ ಜೈಸನ್ ಅವರ ಬೈಕ್ ಮುಖಾಮುಖಿ ಡಿಕ್ಕಿಯಾಗಿದೆ. ಅಪಘಾತದಿಂದ ಸೋಮು ಮತ್ತು ರಾಜಶೆಟ್ಟಿ ಕಾಲುಗಳಿಗೆ ತೀವ್ರವಾದ ಪೆಟ್ಟಾಗಿದೆ. ಬೇಗೂರಿನ ಜೀವನ್‌ಜ್ಯೋತಿ ಚಾರಿಟಬಲ್ ಟ್ರಸ್ಟ್ ಆಂಬುಲೆನ್ಸ್ ಮೂಲಕ ಸ್ಥಳೀಯ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಲಾಯಿತು.

ಸ್ಥಳಕ್ಕೆ ಬೇಗೂರು ಠಾಣೆ ಪೊಲೀರು ಭೇಟಿ ನೀಡಿ, ಪರಿಶೀಲಿಸಿದರಲ್ಲದೆ, ಬೈಕ್‌ಗಳನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಜೀರ್ಣಾಂಗ ವೈಫಲ್ಯ: ಸಾಕಾನೆ ಗಣೇಶ ಸಾವು

ಗುಂಡ್ಲುಪೇಟೆ, ಸೆ.23– ಜೀರ್ಣಾಂಗ ವೈಫಲ್ಯದಿಂದ ಬಂಡೀಪುರದ ರಾಂಪುರ ಸಾಕಾನೆ ಶಿಬಿರದಲ್ಲಿದ್ದ ಗಂಡಾನೆ ಗಣೇಶ ಮೃತಪಟ್ಟಿದೆ. ವಾರದಿಂದ ಆಹಾರ ಸೇವಿಸದೆ ನಿತ್ರಾಣವಾಗಿದ್ದ 18 ವರ್ಷದ ಸಾಕಾನೆ ಗಣೇಶನನ್ನು ರಾಂಪುರ ಶಿಬಿರದಿಂದ ಬಂಡೀಪುರಕ್ಕೆ ಕರೆತಂದು ಚಿಕಿತ್ಸೆ ನೀಡಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೆ ಗಣೇಶ ಗುರುವಾರ ರಾತ್ರಿ ಅಸುನೀಗಿದೆ. ಶುಕ್ರವಾರ ಬೆಳಗ್ಗೆ ಅರಣ್ಯ ಇಲಾಖೆ ಪಶುವೈದ್ಯ ಡಾ.ವಾಸಿಂ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಅಂತ್ಯಸಂಸ್ಕಾರ ಮಾಡಲಾಯಿತು. ಸಣ್ಣ ಕರುಳು ಹಾಗೂ ದೊಡ್ಡಕರುಳಿನ ನಡುವೆ ನಾಳವು ತಿರುಚಿದ್ದರಿಂದ ಜೀರ್ಣಾಂಗ ವೈಫಲ್ಯವಾಗಿ ಆನೆ ಸಾವಿಗೀಡಾಗಿದೆ ಎಂದು ಹುಲಿ ಯೋಜನೆ ನಿರ್ದೇಶಕ ಡಾ.ರಮೇಶ್ ಕುಮಾರ್ ತಿಳಿಸಿದ್ದಾರೆ.

ಸರ್ಕಾರಿ ಗೌರವದೊಂದಿಗೆ ಡಿ.ಬಸವಯ್ಯ ಅಂತ್ಯಕ್ರಿಯೆ

ಚಾಮರಾಜನಗರ, ಸೆ.23 – ಗುರುವಾರ ನಿಧನರಾಗಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ತಾಲೂಕಿನ ಕಾಗಲವಾಡಿ ಗ್ರಾಮದ ಡಿ. ಬಸವಯ್ಯ ಅವರ ಅಂತ್ಯ ಕ್ರಿಯೆಯನ್ನು ಕಾಗಲವಾಡಿ ಗ್ರಾಮ ದಲ್ಲಿ ಸಕಲ ಸರ್ಕಾರಿ ಗೌರವಗ ಳೊಂದಿಗೆ ಇಂದು ನೆರವೇರಿಸ ಲಾಯಿತು. ಮೂರು ಸುತ್ತು ಕುಶಾಲ ತೋಪುಗಳನ್ನು ಹಾರಿಸಿ ಗೌರವ ಸಲ್ಲಿಸಲಾಯಿತು.



ತಹಸೀಲ್ದಾರ್ ಬಸವರಾಜು ಹಾಜರಿದ್ದು, ಮೃತರಿಗೆ ಗೌರವ ಸಲ್ಲಿಸಿದರು. ಇಂದು ಮಧ್ಯಾಹ್ನ ಸುಮಾರು 3 ಗಂಟೆಯ ವೇಳೆಗೆ ಮೃತರ ಜಮೀನಿನಲ್ಲಿ ಸಕಲ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಸಚಿವರ ಸಂತಾಪ: ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಮುತ್ಸದಿ ಬಸವಯ್ಯ ಅವರ ನಿಧನರಾದ ಸುದ್ದಿ ತಿಳಿದು ಅತೀವ ದುಃಖವಾಗಿದೆ. ಶ್ರೀಯುತರ ಹೋರಾಟ, ಬದುಕು ಮತ್ತು ಜೀವನ ನಮೆಗೆಲ್ಲ ಆದರ್ಶ ಪ್ರಾಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸಂತಾಪ ಸೂಚಿಸಿದ್ದಾರೆ.

ಯಳಂದೂರು ಟಿಎಪಿಸಿಎಂಎಸ್ ಸಭೆ



ಯಳಂದೂರು, ಸೆ.23–ತಾಲೂಕು ವ್ಯವಸಾಯೋತ್ಪನ್ನ ಮಾರಾಟಗಾರರ ಸಹಕಾರ ಸಂಘವನ್ನು ಮುಂದಿನ ವರ್ಷದಲ್ಲಿ ಲಾಭದ ಸಂಘವಾಗಿ ಪರಿವರ್ತನೆಗೊಳಿಸಲು ಪಣ ತೊಡಲಾಗುವುದು ಎಂದು ಸಂಘದ ಅಧ್ಯಕ್ಷ ಹಾಗೂ ಮಾಜಿ ಶಾಸಕ ಎಸ್.ಬಾಲರಾಜು ತಿಳಿಸಿದರು.

ಪಟ್ಟಣದ ಟಿಎಪಿಸಿಎಂಎಸ್ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಂಘದ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿದರು. ಹಲವು ವರ್ಷಗಳಿಂದ ಸಂಘದ ಮಹಾಸಭೆ ನಡೆದಿಲ್ಲ. 2021ರ ಡಿಸೆಂಬರ್‌ನಲ್ಲಿ ಮಹಾಸಭೆ ನಡೆಸಲಾಗಿದೆ. ಈ ಸಂಘಕ್ಕೆ ದಶಕಗಳ ಇತಿಹಾಸವಿದೆ. ರಾಜಕೀಯವಾಗಿ ನನಗೆ ನೆಲೆಕೊಟ್ಟ ಸಂಘವೂ ಇದಾಗಿದೆ. ಈ ಹಿಂದೆ ಹಣವನ್ನು ಕಟ್ಟದ ನಿಮಿತ್ತ ರದ್ದುಗೊಳ್ಳುವ ಅಪಾಯವಿತ್ತು ಆಗ ಮಾಜಿ ಪ್ರಧಾನಿ ದೇವೇಗೌಡರೊಂದಿಗೆ ಚರ್ಚಿಸಿ ಉಳಿಸಿಕೊಳ್ಳಲಾಗಿತ್ತು ಎಂದು ಸ್ಮರಿಸಿದರು. ಈ ಬಾರಿ ಸಂಘವು 4.23 ಲಕ್ಷ ರೂ. ಲಾಭ ಗಳಿಸಿದೆ. ಒಟ್ಟು 11.84 ಲಕ್ಷ ರೂ. ವಹಿವಾಟು ನಡೆದಿದೆ. ಎಂದು ಮಾಹಿತಿ ನೀಡಿದರು. ಸಂಘದ ಉಪಾಧ್ಯಕ್ಷ ಪಿ.ಕುಸುಮರಾಜು, ನಿರ್ದೇಶಕರಾದ ವೈ.ಎಸ್.ನಂಜಶೆಟ್ಟಿ, ಬಸವರಾಜು, ಶಿವಶಂಕರ, ಕಂದಹಳ್ಳಿ ಮಹೇಶ್, ಪುಟ್ಟರಾಜು, ಪ್ರತಾಪ್, ಪಿ.ಮಾದೇಶ್, ನಾಗರಾಜು, ರಾಜಮ್ಮ, ಮಾದೇಶ್, ಜಯರಾಮ್ ಕಾರ್ಯದರ್ಶಿ ಶೃತಿ ಗುಮಾಸ್ತ ರಮೇಶ್ ಸೇರಿದಂತೆ ಹಲವರಿದ್ದರು.

ಬಿ.ರಾಚಯ್ಯ ಪ್ರತಿಮೆ ಸ್ಥಾಪನೆ; ನಿಜಗುಣರಾಜು ಸ್ಥಳ ಪರಿಶೀಲನೆ

ಚಾಮರಾಜನಗರ, ಸೆ.23–ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ.ನಿಜಗುಣರಾಜು ಅವರು ಚಿಕ್ಕಹೊಳೆ, ಸುವರ್ಣಾವತಿ ಜಲಾಶಯ ಸೇರಿದಂತೆ ಮಾಜಿ ರಾಜ್ಯಪಾಲ ಬಿ. ರಾಚಯ್ಯ ಪ್ರತಿಮೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.



ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಅವಳಿ ಜಲಾಶಯಗಳ ನಿರ್ಮಾತೃ ಮಾಜಿ ರಾಜ್ಯಪಾಲರು ಹಾಗೂ ಮಾಜಿ ಸಚಿವ ಬಿ. ರಾಚಯ್ಯನವರ ಪ್ರತಿಮೆಯನ್ನು ಜಲಾಶಯದ ಆವರಣದಲ್ಲಿ ಸ್ಥಾಪಿಸಲು ಅನುಮೋದನೆ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಜಲಾಶಯದಲ್ಲಿ ಅಧಿಕಾರಿಗಳೊಂದಿಗೆ ಸೂಕ್ತ ಸ್ಥಳ ಪರಿಶೀಲಿಸಿದರು. ಪ್ರತಿಮೆ ಸ್ಥಾಪನೆಗಾಗಿ ಮುಖ್ಯ ವಾಸ್ತುಶಿಲ್ಪಿ ಅವರಿಗೆ ವಿನ್ಯಾಸಕ್ಕಾಗಿ ಪತ್ರ ಬರೆಯುವಂತೆ ಸೂಚಿಸಿದರು. ಅಲ್ಲದೆ ಪ್ರತಿಮೆ ನಿರ್ಮಾಣ ಸಂಬಂಧ ಕೆಲಸಗಳಿಗಾಗಿ ಅಂದಾಜು ಪಟ್ಟಿ ತಯಾರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಲಾಶಯಗಳ ಸುತ್ತಮುತ್ತ ಮಳೆಯಿಂದ ಆಗಿರುವ ಹಾನಿ ಸರಿಪಡಿಸುವ ಬಾಕಿ ಕಾಮಗಾರಿಗಳು ತುರ್ತಾಗಿ ಕೈಗೊಂಡು ಪರಿಹಾರ ಕ್ರಮಗಳಿಗೆ ಮುಂದಾಗಬೇಕೆಂದು ಕಾಡಾ ಅಧ್ಯಕ್ಷರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸಿದ್ದಯ್ಯನಪುರ ಭಾಗದ ನೀರು ಬಳಕೆದಾರರ ಸಂಘದ ಪ್ರತಿನಿಧಿಗಳು, ಗ್ರಾಮಸ್ಥರನ್ನು ಭೇಟಿ ಮಾಡಿ, ಅಹವಾಲು ಆಲಿಸಿದರು. ಕಾವೇರಿ ನೀರಾವರಿ ನಿಗಮದ ಇಇ ಎಂ.ಬಿ.ಪಾಟೀಲ್, ಎಇಇ ಮಂಜುನಾಥ್, ಇನ್ನಿತರೆ ಅಧಿಕಾರಿಗಳು ಈ ಸಂದರ್ಭದಲ್ಲಿದ್ದರು.

ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ

ಮೈಸೂರು,ಸೆ.23–ಲಯನ್ಸ್ ಕ್ಲಬ್ ಆಫ್ ಮೈಸೂರು ಪರಂಪರೆ ಮತ್ತು ಕ್ಲಿಯರ್ ಮೆಡಿ ರೇಡಿಯಂಟ್ ಆಸ್ಪತ್ರೆ ಸಹಯೋಗದೊಂದಿಗೆ ಬೆಳವಾಡಿಯ ಶ್ರೀಮತಿ ಭಾಗ್ಯ ಮತ್ತು ಶಿವಮೂರ್ತಿ ಪುತ್ರ ದಿ. ಬಿ.ಎಸ್.ಪ್ರತೀಪ್ ನೆನಪಿನಾರ್ಥ ಸೆ.25(ಭಾನುವಾರ) ಬೆಳಗ್ಗೆ 10ರಿಂದ ಸಂಜೆ 4.30ರವರೆಗೆ ಬೆಳವಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಲಿದ್ದಾರೆ. ಇದರಲ್ಲಿ ಇಸಿಜಿ, ಬಿಪಿ, ಮಧುಮೇಹ, ಮೂಳೆ, ಕಣ್ಣು ಹಾಗೂ ಸಾಮಾನ್ಯ ಆರೋಗ್ಯ ತಪಾಸಣೆ ನಡೆಸಲಾಗುವುದು. ಮಾಹಿತಿಗಾಗಿ ಮೊ.ಸಂ. 99458 48284, 9901205868 ಸಂಪರ್ಕಿಸಬಹುದು.

ಒಂದನೇ ಪುಟದಿಂದ

ಬೆಳಕಿನ ನಡುವೆ ಗಜಪಡೆ ನಡಿಗೆ...

ಯಾವುದೇ ವ್ಯತ್ಯಾಸವೂ ಕಾಣಿಸಲಿಲ್ಲ. ಸಹಜವಾಗಿ ಹೆಜ್ಜೆ ಹಾಕಿದ. ಹಾಗೆಯೇ ವನ ಹಿಂಬಾಲಿಸುತ್ತಿದ್ದ ಎಲ್ಲಾ ಆನೆಗಳೂ ಸರಾಗವಾಗಿ ಸಾಗಿದವು. ಬನ್ನಿಮಂಟಪದಿಂದ ವಾಪಸ್ಸಾಗುವಾಗ ಜಂಬೂಸವಾರಿಯ ಸಂಪೂರ್ಣ ಮಾರ್ಗ ವಿದ್ಯುತ್ ಬೆಳಕಲ್ಲಿ ಪ್ರಜ್ವಲಿಸಿತ್ತು. ಕಣ್ಣು ಕೋರೈಸುವ ಬೆಳಕಿಗೆ ಅಂಜದ ಗಜಪಡೆ ನಿಧಾನವಾಗಿಯೇ ರಾತ್ರಿ 8.30ರ ವೇಳೆಗೆ ಅರಮನೆ ಅಂಗಳ ಸೇರಿತು.

ಸಂಭ್ರಮಿಸಿದ ಜನ: ರಾಜಮಾರ್ಗದಲ್ಲಿ ಅತ್ಯಾಕರ್ಷಕ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ವಿಶಿಷ್ಟ ವಿದ್ಯುತ್ ದೀಪಗಳ ಬೆಳಕಲ್ಲಿ ಗಾಂಭೀರ್ಯದ ಹೆಜ್ಜೆ ಹಾಕುತ್ತಿದ್ದ ದಸರಾ ಆನೆಗಳನ್ನು ಕಣ್ತುಂಬಿಕೊಳ್ಳಲು ಇಕ್ಕೆಲಗಳಲ್ಲಿ ಜನ ಕಾದು ನಿಂತಿದ್ದರು. ದೀಪಾಲಂಕಾರದ ಸೊಬಗಿಗೆ ಮಾರು ಹೋದಂತೆ ನಿಧಾನವಾಗಿ ಹೆಜ್ಜೆ ಹಾಕುತ್ತಿದ್ದ ಗಜಪಡೆಯನ್ನು ಮೊಬೈಲ್‌ಗಳಲ್ಲಿ ಸೆರೆ ಹಿಡಿದು, ಸಂಭ್ರಮಿಸಿದರು. ಕೆಲವರಂತೂ ನಿಜವಾಗಿ ಜಂಬೂಸವಾರಿಯನ್ನೇ ಕಣ್ತುಂಬಿಕೊಳ್ಳುತ್ತಿರುವ ಭಾವದಲ್ಲಿ ತೇಲಿ ಹೋದರು. ಸಯ್ಯಾಜಿರಾವ್ ರಸ್ತೆಯ ವಿಭಜಕ(ಡಿವೈಡರ್)ವನ್ನು ತೆರವು ಮಾಡಿರುವುದರಿಂದ ವಿಶಾಲ ರಸ್ತೆಯಲ್ಲಿ ಗಜಪಯಣ ಸಾಗಿದ್ದು ಮತ್ತಷ್ಟು ಆಕರ್ಷಕವಾಗಿತ್ತು. ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ, ಪೊಲೀಸರು, ಸೆಸ್ಕ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಗಜಪಡೆ ತಾಲೀಮು ವೇಳೆ ಹಾಜರಿದ್ದರು. ಅಂಬಾರಿಗೆ ಸನಿಹವಾಗಬಹುದಾದ ವಿದ್ಯುತ್ ದೀಪದ ಸಾಲನ್ನು ಗುರುತಿಸಿ, ಅದನ್ನು ಸ್ವಲ್ಪ ಎತ್ತರಿಸಲು ಸಂಬಂಧಪಟ್ಟವರಿಗೆ ಸೂಚನೆ ನೀಡಲಾಯಿತು. ಈಗಾಗಲೇ ವಾಹನಗಳ ಲೈಟ್‌ಗಳಿಗೆ ಒಗ್ಗಿರುವ ಆನೆಗಳು ಬಣ್ಣ ಬಣ್ಣದ ದೀಪಾಲಂಕಾರವನ್ನು ಕಂಡು ಯಾವ ರೀತಿ ವರ್ತಿಸುತ್ತವೆ ಎನ್ನುವುದನ್ನು ಅರಿಯುವಲ್ಲಿ ಇಂದಿನ ತಾಲೀಮು ಸಹಕಾರಿಯಾಯಿತು. ಯಾವುದಾದರೂ ನಿಗದಿತ ವಿದ್ಯುತ್ ದೀಪಗಳಿಂದ ಆನೆಗಳ ವರ್ತನೆಯಲ್ಲಿ ಬದಲಾವಣೆಯಾಗಬಹುದೇ ಎಂದು ಅರಣ್ಯ ಸಿಬ್ಬಂದಿ ನಿಗಾ ವಹಿಸಿದ್ದರು. ಆದರೆ ವಿದ್ಯುತ್ ದೀಪಾಲಂಕಾರದ ಹಾದಿಯಲ್ಲಿ ಆನೆಗಳು ನಿರ್ಭೀತಿಯಿಂದ ಹೆಜ್ಜೆ ಹಾಕಿದ್ದರಿಂದ ಅರಣ್ಯ ಇಲಾಖೆ ಅಧಿಕಾರಿಗಳ ವಿಶ್ವಾಸ ಹೆಚ್ಚಿದೆ.

ನಾಡಗೀತೆ ಹಾಡಲು ಧಾಟಿ, ಕಾಲಮಿತಿ ನಿಗದಿ

ಮತ್ತು ಸಂಸ್ಕೃತಿ ಇಲಾಖೆ ಸಲ್ಲಿಸಿದ್ದ ಪ್ರಸ್ತಾಪಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅನುಮೋದನೆ ನೀಡಿದ್ದಾರೆ. ಹೀಗಾಗಿ ಇನ್ನು ಮುಂದೆ ರಾಷ್ಟ್ರಕವಿ ಕುವೆಂಪು ರಚಿಸಿರುವ "ಜಯಭಾರತ ಜನನಿಯ ತನುಜಾತೆ" ಕವನವು ನಾಡಗೀತೆಯಾಗಿ ಅಂಗೀಕೃತಗೊಂಡ ರೂಪದಲ್ಲೇ ಹಿಂದಿನ ಒಂದಕ್ಷರವನ್ನೂ ಬಿಡದಂತೆ ಮೈಸೂರು ಅನಂತಸ್ವಾಮಿ ರಾಗ ಸಂಯೋಜನೆ ಮಾಡಿದ ಧಾಟಿಯಲ್ಲೇ ಹಾಡಲಾಗುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ತಿಳಿಸಿದ್ದಾರೆ.

ಏನಿದು ವಿವಾದ: ನಾಡಗೀತೆಗೆ ಧಾಟಿ ಹಾಗೂ ಕಾಲಮಿತಿ ನಿಗದಿ ಮಾಡುವ ವಿಚಾರ 2005ರಿಂದಲೂ ನನೆಗುದಿಗೆ ಬಿದ್ದಿತ್ತು. ಕೆಲವು ಕಾರ್ಯಕ್ರಮಗಳಲ್ಲಿ ಏಳರಿಂದ ಎಂಟು ನಿಮಿಷಗಳ ಕಾಲ ನಾಡಗೀತೆ ಹಾಡುತ್ತಿದ್ದರು. ಇದು ಅಶಕ್ತರು, ಅಂಗವಿಕಲರಿಗೆ ಅನಾನುಕೂಲವಾಗುತ್ತಿತ್ತು. ಹೀಗಾಗಿ ಧಾಟಿ ಹಾಗೂ ಕಾಲಮಿತಿಯ ಬಗ್ಗೆ ಸ್ಪಷ್ಟತೆ ತರಬೇಕೆಂಬ ಒತ್ತಾಯ ಸರಕಾರದ ಮುಂದೆ ಇತ್ತು. 2006ರಲ್ಲಿ ಸಾಹಿತಿ ವಸಂತ ಕನಕಾಪುರೆ ನೇತೃತ್ವದಲ್ಲಿ ಸರಕಾರ ಒಂದು ಸಮಿತಿ ರಚಿಸಿತ್ತು. ಆದರೆ ಅವರ ಅಕಾಲಿಕ ಮರಣ ಹಿನ್ನೆಲೆಯಲ್ಲಿ ಚನ್ನವೀರ ಕಣವಿ ಅಧ್ಯಕ್ಷತೆಯಲ್ಲಿ ಸರಕಾರ ಮತ್ತೊಂದು ಸಮಿತಿ ರಚನೆ ಮಾಡಿತ್ತು. ಆದರೆ ಈ ಸಮಿತಿಯ ಸದಸ್ಯರಲ್ಲೇ ಸ್ಪಷ್ಟತೆ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ವಿ ಸುನಿಲ್‌ಕುಮಾರ್ ನಾಡಗೀತೆಗೆ ಧಾಟಿ ಹಾಗೂ ಕಾಲಮಿತಿ ನಿಗದಿ ಮಾಡುವಂತೆ ಹಿರಿಯ ಸಂಗೀತ ವಿದೂಷಿ ಎಸ್.ಆರ್. ಲೀಲಾವತಿ ಅಧ್ಯಕ್ಷತೆಯಲ್ಲಿ 18 ಜನರ ಸಮಿತಿ ರಚಿಸಲಾಗಿತ್ತು. ಈ ಸಮಿತಿ ಮೈಸೂರು ಅನಂತಸ್ವಾಮಿ ರಾಗಸಂಯೋಜನೆಯಲ್ಲಿ ಎರಡು ನಿಮಿಷ ಮೂವತ್ತು ಸೆಕೆಂಡ್‌ಗಳಲ್ಲಿ ನಾಡಗೀತೆ ಹಾಡಬೇಕೆಂದು ನೀಡಿದ್ದ ಶಿಫಾರಸು ಇದೀಗ ಅಧಿಕೃತಗೊಂಡಿದೆ.

ದಸರಾ ಉದ್ಘಾಟನೆಗಷ್ಟೇ ಸೀಮಿತ

ಲಗ್ನದಲ್ಲಿ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಂದಿಧ್ವಜಕ್ಕೆ ಪೂಜೆ ಸಲ್ಲಿಸಲಿದ್ದಾರೆ. ನಂತರ ಜಂಬೂಸವಾರಿ ಮೆರವಣಿಗೆ ಆರಂಭವಾಗಲಿದೆ. ಸಂಜೆ 5.07ರಿಂದ 5.18ರೊಳಗೆ ಸಲ್ಲುವ ಮೀನ ಲಗ್ನದಲ್ಲಿ ಅಭಿಮನ್ಯು ಮೇಲೆ ಚಿನ್ನದ ಅಂಬಾರಿಯಲ್ಲಿ ಕಂಗೊಳಿಸುವ ನಾಡದೇವಿ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಮುಖ್ಯಮಂತ್ರಿಗಳು ಪುಷ್ಪಾರ್ಚನೆ ಮಾಡಲಿದ್ದಾರೆ. ಈ ಸಂದರ್ಭದಲ್ಲಿ ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಮೇಯರ್ ಶಿವಕುಮಾರ್ ಇತರರು ಪಾಲ್ಗೊಳ್ಳಲಿದ್ದಾರೆ. ಅಂದು ಸಂಜೆ 7.30ಕ್ಕೆ ಬನ್ನಿಮಂಟಪದ ಮೈದಾನದಲ್ಲಿ ಪಂಜಿನ ಕವಾಯತು ನಡೆಯಲಿದ್ದು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪಾಲ್ಗೊಳ್ಳಲಿದ್ದಾರೆ.

ಸಿಇಟಿ ರ್‍ಯಾಂಕಿಂಗ್ ಪಟ್ಟಿ ಪ್ರಕಟ

ಪುನರಾವರ್ತಿತ ವಿದ್ಯಾರ್ಥಿಗಳು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್ ಪುನರಾವರ್ತಿತ ವಿದ್ಯಾರ್ಥಿಗಳ ಪಿಯುಸಿ ಅಂಕವನ್ನು ಪರಿಗಣಿಸುವಂತೆ ಆದೇಶ ನೀಡಿತ್ತು. ಹೈಕೋರ್ಟ್ 2020–21ನೇ ಸಾಲಿನ ದ್ವಿತೀಯ ಪಿಯುಸಿಯಲ್ಲಿ ತೇರ್ಗಡೆಯಾಗಿದ್ದ, ಸಿಇಟಿ ಪರೀಕ್ಷೆಗೆ ಪುನರಾವರ್ತಿತರಾಗಿರುವ ಅಭ್ಯರ್ಥಿಗಳಿಗೆ ವೃತ್ತಿಪರ ಕೋರ್ಸ್‌ಗಳ ಸೀಟು ಹಂಚಿಕೆ ಮಾಡುವಾಗ ದ್ವಿತೀಯ ಪಿಯುಸಿಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳನ್ನು ಸಹ ಪರಿಗಣಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಹೈಕೋರ್ಟ್ ಆದೇಶ ನೀಡಿತ್ತು. ಆದರೆ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸರ್ಕಾರ ಹೈಕೋರ್ಟ್ ಮೇಲ್ಮನವಿ ಸಲ್ಲಿಸಲು ಮುಂದಾಗಿತ್ತು. ಸರ್ಕಾರದ ಈ ನಿರ್ಧಾರಕ್ಕೆ ಪುನರಾವರ್ತಿತ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಆಕ್ರೋಶ ವ್ಯಕ್ತಪಡಿಸಿದರು. ನಿಮ್ಮ ಶಿಕ್ಷಣ ಇಲಾಖೆ ನೀಡಿದ ಪಿಯು ಬೋರ್ಡ್ ಅಂಕಪಟ್ಟಿಯನ್ನೇ ಪರಿಗಣಿಸಲ್ಲ ಅಂದರೆ ಹೇಗೆ 1 ವರ್ಷ ಮಕ್ಕಳಿಗೆ ಪ್ಲೇಸ್ಮೆಂಟ್ ಇಲ್ಲದಂತಾಗುತ್ತದೆ. ಇದಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವೇ ನೇರ ಹೊಣೆಯಾಗುತ್ತದೆ ಎಂದು ಎಚ್ಚರಿಕೆ ನೀಡಿದರು. 1 ವರ್ಷ ಮಕ್ಕಳ ಭವಿಷ್ಯ ಹಾಳಾಗುತ್ತೆ. ಕೋರ್ಟ್ ಆದೇಶವನ್ನು ಪಾಲಿಸದೆ ಮೇಲ್ಮನವಿ ಸಲ್ಲಿಸಿದರೆ ಕೋರ್ಟ್ ಆದೇಶಕ್ಕೂ ಬೆಲೆ ಇಲ್ಲವೆ, ಸಾವಿರಾರು ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟ ಆಡಬೇಡಿ. ನಾವೂ ಕಾನೂನಾತ್ಮಕವಾಗಿ ಹೋರಾಟಕ್ಕೆ ಮುಂದಾಗುತ್ತೇವೆ. ಯಾವ ಮಕ್ಕಳಿಗೂ ಅನ್ಯಾಯವಾಗದಂತೆ ಸಮಿತಿ ರಚಿಸಿ ಎಂದು ಆಗ್ರಹಿಸಿದ್ದರು. ಈ ಸಂಬಂಧ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಬಿ. ತಿಮ್ಮೇಗೌಡ ಅಧ್ಯಕ್ಷತೆಯಲ್ಲಿ ಐವರ ಸಮಿತಿ ರಚಿಸಿತ್ತು. ಸಮಿತಿ ವರದಿಯನ್ನು ಸಿದ್ದಪಡಿಸಿತ್ತು. ವರದಿಯನ್ನು ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ ಮುಚ್ಚಿದ ಲಗೋಟೆಯಲ್ಲಿ ಇಂದು ಹೈಕೋರ್ಟ್‌ಗೆ ವರದಿಯನ್ನು ನೀಡಿದರು.

ಮಹೇಂದ್ರ ಅಂಬಾರಿ ಆನೆ

ಗೋಪಾಲಸ್ವಾಮಿಯನ್ನು ಕಳುಹಿಸಲಾಗಿತ್ತು. ಆದರೆ, ಅಂಬಾರಿ ಹೊತ್ತು ಸಾಗುವ ವೇಳೆ ಸಮೀಪವೇ ಪಟಾಕಿ ಸಿಡಿಸಿದ್ದರಿಂದ ಗಾಬರಿಗೊಂಡು ಆತಂಕ ಸೃಷ್ಟಿಸಿದ್ದ. ಈ ಹಿನ್ನೆಲೆಯಲ್ಲಿ ಈ ಬಾರಿ ಅಂಬಾರಿ ಹೊರುವ ಅವಕಾಶ ಮಹೇಂದ್ರನ ಹೆಗಲಿಗೆ ಬಿದ್ದಿದೆ.

ನಡೆ ಉತ್ತಮವಾಗಿದೆ: ಡಿಸಿಎಫ್ ಡಾ.ವಿ.ಕರಿಕಾಳನ್ ಮಾತನಾಡಿ, ಶ್ರೀರಂಗಪಟ್ಟಣ ದಸರೆಗೆ 5 ಆನೆ ಕೇಳಿದ್ದಾರೆ. ಆದರೆ, ಇನ್ನು ಪಿಸಿಸಿಎಫ್ ಕಚೇರಿ ಯಿಂದ ಅನುಮತಿ ಬಂದಿಲ್ಲ. ನಾವು 3 ಆನೆಯನ್ನು ಕಳುಹಿಸಲು ಉದ್ದೇಶಿಸಿದ್ದೇವೆ. ಮಹೇಂದ್ರ ಶ್ರೀರಂಗಪಟ್ಟಣ ದಸರೆಯಲ್ಲಿ ಅಂಬಾರಿ ಹೊರಲಿದ್ದಾನೆ. ಇವನೊಂದಿಗೆ ಹಿರಿಯ ಅರ್ಜುನ ಹಾಗೂ ಕಾವೇರಿಯನ್ನು ಕಳುಹಿಸಲು ಉದ್ದೇಶಿಸಲಾಗಿದೆ. ಅರ್ಜುನನಿಗೆ 63 ವರ್ಷವಾಗಿರುವುದರಿಂದ ನ್ಯಾಯಾಲಯದ ಆದೇಶದಂತೆ ಭಾರ ಹೊರಿಸಲು ಸಾಧ್ಯವಿಲ್ಲ. ಆದರೆ ಅನುಭವಿಯಾಗಿರುವುದರಿಂದ ಮಹೇಂದ್ರನೊಂದಿಗೆ ಕಳುಹಿಸಲಾಗುತ್ತದೆ ಎಂದರು.

ಎಸ್‌ಓಪಿ ರೆಡಿ: ಕಳೆದ ವರ್ಷ ಪಟಾಕಿ ಸಿಡಿಸಿದ ಕಾರಣ ಗೋಪಾಲಸ್ವಾಮಿ ತಂಟೆ ಮಾಡಿ, ಆತಂಕ ಸೃಷ್ಟಿಸಿತ್ತು. ಆದರೆ, ಜನರಿಗೆ ಯಾವುದೇ ತೊಂದರೆ ಮಾಡಿರಲಿಲ್ಲ. ಈ ಬಾರಿ ಶ್ರೀರಂಗಪಟ್ಟಣ ದಸರೆಯಲ್ಲಿ ಆನೆ ಕಳುಹಿಸುವಾಗ ಎಸ್‌ಓಪಿಯನ್ನು ಕಡ್ಡಾಯಗೊಳಿಸಲಾಗುತ್ತಿದೆ. ಆನೆ ಸಾಗುವಾಗ ಸುತ್ತಲೂ ನಿಗದಿ ಮಾಡಿದ (10 ಅಡಿ) ಅಂತರದಲ್ಲಿ ಯಾರೂ ಸುಳಿಯುವಂತಿಲ್ಲ. ಆನೆಗಳ ಬಳಿ ಪಟಾಕಿ ಸಿಡಿಸುವುದು, ಪೀಪಿ, ಕರ್ಕಶ ಶಬ್ದ ಸೂಸುವ ತುತ್ತೂರಿ ಊದುವುದನ್ನು ನಿರ್ಬಂಧಿಸುವುದು, ಡ್ರೋನ್ ಬಳಕೆ ನಿಷೇಧ ಸೇರಿದಂತೆ ಕೆಲವು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ. ಪಶು ವೈದ್ಯರು, ಸಿಬ್ಬಂದಿಯೂ ಇರಲಿದ್ದಾರೆ. ಇದರ ಸಂಪೂರ್ಣ ಜವಾಬ್ದಾರಿಯನ್ನು ಆಯೋಜಕರು ವಹಿಸಬೇಕಿದೆ.

ಪಟ್ಟದ ಆನೆಗಳಾಗಿ ಧನಂಜಯ, ಭೀಮಾ: ದಸರಾದಲ್ಲಿ ಎರಡನೇ ಬಾರಿಗೆ ಪಾಲ್ಗೊಳ್ಳುತ್ತಿರುವ ಭೀಮಾ ಭರವಸೆ ಮೂಡಿಸಿದ್ದಾನೆ. 22 ವರ್ಷದ ಈತ ನಿರೀಕ್ಷೆಗೂ ಮೀರಿ ಸ್ಪಂದಿಸುತ್ತಿದ್ದಾನೆ. ಅಲ್ಲದೇ, ಪೌಷ್ಠಿಕ ಆಹಾರ ಸೇವಿಸಿ 400 ಕೆಜಿ ತೂಕ ಹೆಚ್ಚಿಸಿಕೊಂಡಿದೆ. ಉತ್ತಮ ವರ್ತನೆಯೊಂದಿಗೆ ಮುಖಭಾವ, ಲಕ್ಷಣವೂ ಚೆನ್ನಾಗಿರುವುದರಿಂದ ರಾಜವಂಶಸ್ಥರ ಮನ ಗೆದ್ದಿದೆ. ಹಾಗಾಗಿ ನವರಾತ್ರಿ ವೇಳೆ ಅರಮನೆಯಲ್ಲಿ ನಡೆಯುವ ಧಾರ್ಮಿಕ ಕಾರ್ಯದ ಪಟ್ಟದ ಆನೆಯಾಗಿ ಬಳಸಿಕೊಳ್ಳಲು ಧನಂಜಯನೊಂದಿಗೆ ಭೀಮಾನನ್ನು ಕಳುಹಿಸುವಂತೆ ರಾಜವಂಶಸ್ಥರು ಕೋರಿದ್ದಾರೆ. ಇದರಿಂದ ಮಹೇಂದ್ರನೊಂದಿಗೆ ಭೀಮಾನಿಗೂ ಈ ಬಾರಿ ಮಹತ್ವದ ಜವಾಬ್ದಾರಿ ನೀಡಲಾಗಿದೆ.

ಎನ್‌ಇಪಿ ಮೂಲಕ 2030ಕ್ಕೆ ಬಲಾಢ್ಯ ಭಾರತ ನಿರ್ಮಾಣ ಉದ್ದೇಶ

● ಶಾಸಕ ಎಸ್.ಎ. ರಾಮದಾಸ್ ಅಭಿಮತ ● 2040ಕ್ಕೆ ಬುದ್ಧಿವಂತ ಮಕ್ಕಳ ಕೊಡುಗೆ ● 'ಮೋದಿ ಯುಗ ಉತ್ಸವ'ದಲ್ಲಿ ವಿನೂತನ ಕಾರ್ಯಕ್ರಮ



ಮೈಸೂರು,ಸೆ.23(ಎಂಟಿವೈ)– ಭವಿಷ್ಯದಲ್ಲಿ ಬಲಾಢ್ಯ ಭಾರತ ನಿರ್ಮಾಣಕ್ಕೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಸಹಕಾರಿಯಾಗಲಿದೆ ಎಂದು ಶಾಸಕ ಎಸ್.ಎ.ರಾಮದಾಸ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ರಾಮಲಿಂಗೇಶ್ವರ ಪಾರ್ಕ್‌ನಲ್ಲಿ ಶುಕ್ರವಾರ ನಡೆದ 'ಮೋದಿ ಯುಗ ಉತ್ಸವ'ದ ಏಳನೇ ದಿನ ವಿವಿಧ ಶಾಲಾ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಭವಿಷ್ಯವನ್ನು ಬರೆಯಲಿರುವ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವುದಕ್ಕಾಗಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಲಾಗಿದೆ. 2030ಕ್ಕೆ ಹೊಸ ಶಿಕ್ಷಣದ ಮೂಲಕ ಬಲಾಢ್ಯ ಭಾರತ ನಿರ್ಮಾಣ ಉದ್ದೇಶ ಹೊಂದಲಾಗಿದೆ. ಪ್ರತಿಯೊಬ್ಬರಿಗೂ ಗುಣಾತ್ಮಕ, ಸೃಜನಾತ್ಮಕ ಶಿಕ್ಷಣ ದೊರೆಯಬೇಕೆಂಬ ಉದ್ದೇಶವನ್ನು ಎನ್‌ಇಪಿ ಹೊಂದಿದೆ ಎಂದರು.

ಪ್ರೌಢಶಾಲಾ ಶಿಕ್ಷಣ ಪಡೆಯುತ್ತಿರುವ ನೀವೆಲ್ಲಾ ಮುಂದಿನ ದಿನಗಳಲ್ಲಿ ಉನ್ನತ ಶಿಕ್ಷಣ ಪಡೆದು ನಾನಾ ಹುದ್ದೆ ಅಲಂಕರಿಸುವ ಕನಸ್ಸನ್ನು ಕಂಡಿದ್ದೀರಾ. ಭಾರತ ವಿಶ್ವಗುರು ಆಗಬೇಕಾದರೂ ನಾವು ಅನ್ಯ ದೇಶದ ಶಿಕ್ಷಣಕ್ಕಿಂತ ಒಂದು ಹೆಜ್ಜೆ ಹೆಚ್ಚಾಗಿ ಕಲಿತಿರಬೇಕಿದೆ. ನಮ್ಮ ಶಿಕ್ಷಣ ಪ್ರಪಂಚಕ್ಕೆ ಬೇಕಾದ ಜ್ಞಾನವನ್ನು ಕೊಡುವಂತಾಗಬೇಕು. ಯೋಗಾ, ಸಂಗೀತ ಇತರೆ ಚಟುವಟಿಕೆಗೂ ಆದ್ಯತೆ ನೀಡುವುದೇ ರಾಷ್ಟ್ರೀಯ ಶಿಕ್ಷಣ ನೀತಿ ಧ್ಯೇಯವಾಗಿದೆ. ಕೆ.ಆರ್.ಕ್ಷೇತ್ರದಲ್ಲಿ ಪ್ರಾಯೋಗಿಕವಾಗಿ ವಾರದಲ್ಲಿ ಎರಡು ದಿನ ಯೋಗ, ಸಂಗೀತ ಕಲಿಕೆಗೆ ಮೀಸಲಿಡುವ ಚಿಂತನೆ ನಡೆಸಿದ್ದೇವೆ. ಆ ಮೂಲಕ ಮಕ್ಕಳು ಕೇವಲ ಪಠ್ಯಕ್ಕೆ ಸೀಮಿತವಾಗಿರದೇ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೂ ಚಿಂತನೆ ನಡೆಸಿದ್ದು, ಅದಕ್ಕೆ ಬೇಕಾಗುವ ಸಲಕರಣೆಗಳ ವಿತರಣೆಗೆ ಕ್ರಮ ಕೈಗೊಳ್ಳಲಾಗುತ್ತದೆ. 2040ಕ್ಕೆ ದೇಶಕ್ಕೆ ಬುದ್ಧಿವಂತ ಮಕ್ಕಳನ್ನು ನೀಡುವುದೇ ಈ ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲ ಉದ್ದೇಶ ಎಂದು ತಿಳಿಸಿದರು.

ಇದೇ ವೇಳೆ ಡಿಡಿಪಿಐ ರಾಮಚಂದ್ರ ರಾಜೇ ಅರಸ್ ಮಾತನಾಡಿ, ಅಂತಾ ರಾಷ್ಟ್ರೀಯ ಯೋಗ ದಿನದಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಬಂದಿದ್ದಾಗ ಮಕ್ಕಳು ಯೋಗದಲ್ಲಿ ಭಾಗವಹಿಸುವ ಮೂಲಕ ಬದುಕನ್ನೇ ಸಾರ್ಥವಾಗಿಸಿಕೊಂಡರು. 35 ಸಾವಿರಕ್ಕೂ ಹೆಚ್ಚಿನ ಮಕ್ಕಳೂ 'ಹರ್ ಘರ್ ತಿರಂಗಾ' ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಜಿಲ್ಲೆಯ ಶೈಕ್ಷಣಿಕ ವಾತಾವರಣ ಈಗ ಬದಲಾಗಿದೆ. ದಕ್ಷಿಣ ವಲಯ ಅಗ್ರಗಣ್ಯ ಸ್ಥಾನ ಪಡೆದುಕೊಂಡಿದೆ. ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಇಲಾಖೆಯಿಂದ ನಾವು ಸಹ ಶಿಕ್ಷಕರ ಮೂಲಕ ತರಬೇತಿ ನೀಡಲಾಗಿದೆ. ಗುಣಮಟ್ಟದ ಶಿಕ್ಷಣ ನೀಡಲು ಪ್ರಜ್ಞಾವಂತರು ಸಲಹೆ ನೀಡಿದರೆ ನಾವು ಪರಿಶೀಲಿಸಿ ಸರ್ಕಾರಕ್ಕೆ ತಲುಪಿಸುವ ಕೆಲಸ ಮಾಡುತ್ತೇವೆ. ಶಿಕ್ಷಣದಿಂದ ಉಪಯೋಗ ಆಗಬೇಕು. ಕೇವಲ ಪ್ರಮಾಣಪತ್ರಕ್ಕಾಗಿ ಶಿಕ್ಷಣ ಆಗಬಾರದು ಎಂದರು.

ಪ್ರಸಕ್ತ ಸಾಲಿನಲ್ಲಿ ಈಗಾಗಲೇ ಎಲ್ಲಾ ಮಕ್ಕಳಿಗೆ ಒಂದು ಜೊತೆ ಶೂ, ಸಾಕ್ಸ್ ನೀಡಲು ಬಿಡುಗಡೆ ಹಣ ಬಿಡುಗಡೆಯಾಗಿದೆ. ಒಂದು ಜೊತೆ ಸಮವಸ್ತ್ರ ನೀಡಿದ್ದು, ಮತ್ತೊಂದು ಸೆಟ್ ನೀಡಲು ಕ್ರಮ ಕೈಗೊಳ್ಳಲಾಗಿದೆ. ಜಿಲ್ಲೆಯಲ್ಲಿ 4.23 ಲಕ್ಷ ಮಕ್ಕಳು ಎಲ್‌ಕೆಜಿಯಿಂದ 10ತರಗತಿವರೆಗೂ ವ್ಯಾಸಂಗ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರೂಪ ಕುಸುಮಾ ಸಹ ಎನ್‌ಇಪಿ ಕುರಿತು ಮಾತನಾಡಿದರು. ಬಿಇಓ ರಾಮಾರಾಧ್ಯ, ಡಿಆರ್‌ಸಿ ಶ್ರೀಕಂಠ ಶಾಸ್ತ್ರಿ, ಪಾಲಿಕೆ ಸದಸ್ಯರಾದ ಗೀತಾಶ್ರೀ ಯೋಗನಂದ, ಚಂಪಕ, ಬಿ.ವಿ.ಮಂಜುನಾಥ್, ಕೆ.ಆರ್.ಕ್ಷೇತ್ರದ ವಾರ್ಡ್ ಅಧ್ಯಕ್ಷ ವಡಿವೇಲು, ಪ್ರಧಾನ ಕಾರ್ಯದರ್ಶಿಗಳಾದ ನಾಗೇಂದ್ರ, ಓಂಶ್ರೀನಿವಾಸ್, ಮುಖಂಡರಾದ ದೇವರಾಜೇಗೌಡ ಇನ್ನಿತರರು ಪಾಲ್ಗೊಂಡಿದ್ದರು.

ಶಾಲಾ ಸಚಿವ ಸಂಪುಟ

ವಿದ್ಯಾರ್ಥಿಗಳಲ್ಲಿ ರಾಜಕೀಯ ಪ್ರಜ್ಞೆ ಬೆಳೆಸುವ ನಿಟ್ಟಿನಲ್ಲಿ ಇಂದು ಮೋದಿ ಯುಗ ಉತ್ಸವ ಕಾರ್ಯಕ್ರಮದಲ್ಲಿ ಶಾಲಾ ಸಚಿವ ಸಂಪುಟ ರಚಿಸಿ, ಜಾಗೃತಿ ಮೂಡಿಸಲಾಯಿತು. ಶಾಲಾ ಸಚಿವ ಸಂಪುಟದ ಮುಖ್ಯಮಂತ್ರಿಯಾಗಿ ಸೆಂಟ್ ಮೇರಿಸ್ ಬಾಲಕಿಯರ ಪ್ರೌಢಶಾಲೆಯ ರೇಷ್ಮಾ, ಉಪಮುಖ್ಯಮಂತ್ರಿ ಸೆಂಟ್ ಥಾಮಸ್ ಶಾಲೆಯ ಎಂ.ಸುಪ್ರಿಯಾ, ಹಣಕಾಸು ಸಚಿವೆಯಾಗಿ ಸೆಂಟ್ ಮೇರಿಸ್ ಬಾಲಕಿಯರ ಪ್ರೌಢಶಾಲೆಯ ಚೇತನಾ, ಶಿಕ್ಷಣ ಸಚಿವೆಯಾಗಿ ಕರ್ನಾಟಕ ಪಬ್ಲಿಕ್ ಶಾಲೆಯ ಎಂ.ಎಸ್.ಚಂದನ, ಆರೋಗ್ಯ ಸಚಿವೆಯಾಗಿ ಬಂಟ್ವಾಳ ಮಾಧವ ಪ್ರೌಢಶಾಲೆ ನಿಧಿ ಬಿ.ಭಾರದ್ವಾಜ್, ಸಮಾಜ ಕಲ್ಯಾಣ ಸಚಿವೆಯಾಗಿ ಕರ್ನಾಟಕ ಪಬ್ಲಿಕ್ ಶಾಲೆಯ ಯಶಿಕಾ, ಕ್ರೀಡಾ ಸಚಿವೆಯಾಗಿ ಬಂಟ್ವಾಳ ಮಾಧವ ಪ್ರೌಢಶಾಲೆಯ ಆರ್.ನಿಶ್ಚಿಯಾ, ಸ್ವಚ್ಛತಾ ಮಂತ್ರಿಯಾಗಿ ಸೆಂಟ್ ಮೇರಿಸ್ ಪ್ರೌಢ ಶಾಲೆಯ ಜಿ.ಪ್ರಿಯಾಂಕ, ಕನ್ನಡ ಮತ್ತು ಸಂಸ್ಕೃತಿ ಸಚಿವೆಯಾಗಿ ಸೆಂಟ್ ಥಾಮಸ್ ಶಾಲೆಯ ಭಾರ್ಗವಿ, ಶಿಕ್ಷಣ(ಬಿಸಿಯೂಟ) ಸಚಿವೆಯಾಗಿ ಎಂ.ಆರ್.ದುರ್ಗಾಂಭಾ ಎಂಬುವರು ಶಾಲಾ ಮಂತ್ರಿ ಮಂಡಲವನ್ನು ಪ್ರಸ್ತುತಪಡಿಸಿದರು.

ಪ್ರಬಂಧ ಸ್ಪರ್ಧೆಯ ವಿಜೇತರು

ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ಮುಂದಿನ 25ವರ್ಷದ ಕನಸ್ಸಿನಲ್ಲಿ ಭವ್ಯ ಭಾರತ ವಿಷಯ ಕುರಿತು ಈ ಹಿಂದೆ ವಿದ್ಯಾರ್ಥಿಗಳು ಹಾಗೂ ಮಕ್ಕಳ ಪೋಷಕರಿಗಾಗಿ ನಡೆಸಲಾಗಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಕೆ.ಆರ್.ಕ್ಷೇತ್ರ ವ್ಯಾಪ್ತಿಯ 2650 ಮಕ್ಕಳು, 860ಮಂದಿ ಪೋಷಕರು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಅವರಲ್ಲಿ ವಿದ್ಯಾರ್ಥಿಗಳ ವಿಭಾಗದಲ್ಲಿ ಕನಕಗಿರಿ ಸ.ಪ್ರೌ.ಶಾಲೆಯ ಶಾರದ(ಪ್ರಥಮ), ಮಹಾರಾಣಿ ಸ.ಪ್ರೌ. ಶಾಲೆಯ ಸೌಂದರ್ಯ(ದ್ವಿತೀಯ), ಬಿಎಂಶ್ರೀ ಪ್ರೌಶಾಲೆ ಹರ್ಷಿತ(ತೃತೀಯ), ವಾಸವಿ ವಿದ್ಯಾನಿಕೇತನ ಎಸ್.ಸಂಜನ(ಚತುರ್ಥಿ), ಜೆಎಸ್‌ಎಸ್ ಬಾಲಜಗತ್ ಪ್ರೌ. ಶಾಲೆಯ ಭವಿತಾ (ಪಂಚಮಿ) ಸ್ಥಾನ ಪಡೆದಿದ್ದು. ವಿಜೇತರಿಗೆ ಕ್ರಮವಾಗಿ ನಗದು ಬಹುಮಾನ ವಿತರಿಸಲಾಯಿತು.

ಪೋಷಕರ ವಿಭಾಗದಲ್ಲಿ ಜೆಎಸ್‌ಎಸ್ ಬಾಲಜಗತ್ ಪ್ರೌ.ಶಾಲೆಯ ಗಿರಿಜಾಮಣಿ(ಪ್ರಥಮ), ಕನಕಗಿರಿ ಪ್ರೌ ಶಾಲೆಯ ಸೌಮ್ಯ(ದ್ವಿತಿಯ), ವನಿತಾ ಪ್ರೌಢಶಾಲೆಯ ಲಕ್ಷ್ಮಿ ಮೋಹನ್(ತೃತೀಯ), ಜ್ಯೋತಿನಗರ ಜೆಎಸ್‌ಎಸ್ ಪಬ್ಲಿಕ್ ಶಾಲೆ ಬಿ.ಜ್ಯೋತಿ (ಚತುರ್ಥಿ), ಸೆಂಟ್ ಮೇರಿಸ್ ಪ್ರೌ ಶಾಲೆಯ ಕೋಮಲಾ(ಪಂಚಮಿ) ಸ್ಥಾನದೊಂದಿಗೆ ನಗದು ಪಡೆದುಕೊಂಡರು.

ಕಾಲೇಜು ವಿಭಾಗದಲ್ಲಿ ಎನ್.ಸಂಜಯ್, ಕೆ.ಸಂದೀಪ್, ಗಂಗಾಬಿಕೆ, ರಾಜೇಶ್, ಶ್ವೇತಾಬಿ, ರೂಪ ಅವರಿಗೆ ಪ್ರಶಸ್ತಿ ಹಾಗೂ ನಗದು ಬಹುಮಾನ ನೀಡಲಾಯಿತು.

ಮೈಸೂರಲ್ಲಿ ಮೆಗಾ ದಸರಾ ಸ್ವಚ್ಛತಾ ಅಭಿಯಾನ ಆರಂಭ

ಪಾಲಿಕೆ ಗುತ್ತಿಗೆದಾರರಿಂದ 80 ಟ್ರ್ಯಾಕ್ಟರ್, 65 ಜೆಸಿಬಿ, 6 ಡೋಜರ್, 3 ಹಿಟಾಚಿ ಉಚಿತ ಪೂರೈಕೆ



ಮೈಸೂರು, ಸೆ. 23 (ಆರ್‌ಕೆ)– ಪ್ರತಿ ವರ್ಷದಂತೆ ದಸರಾ ಮಹೋತ್ಸವದ ವೇಳೆ ಮೈಸೂರು ನಗರವನ್ನು ಸ್ವಚ್ಛ ಹಾಗೂ ಸುಂದರವಾಗಿಡಲು ಪಾಲಿಕೆಯು ಇಂದಿನಿಂದ ಮೆಗಾ ಸ್ವಚ್ಛತಾ ಅಭಿಯಾನ ಆರಂಭಿಸಿದೆ.

ಮೈಸೂರು ಮಹಾನಗರ ಪಾಲಿಕೆ ಗುತ್ತಿಗೆದಾರರು ಸ್ವಚ್ಛತಾ ಕಾರ್ಯಕ್ಕೆ 80 ಟ್ರ್ಯಾಕ್ಟರ್, ಟಿಪ್ಪರ್‌ಗಳು, 65 ಜೆಸಿಬಿ, 6 ಡೋಜರ್, 3 ಹಿಟಾಚಿಗಳನ್ನು ಚಾಲಕರ ಸಹಿತ ಉಚಿತವಾಗಿ ಒದಗಿಸಿದ್ದಾರೆ ಮೈಸೂರಿನ ದೊಡ್ಡಕೆರೆ ಮೈದಾನದಲ್ಲಿ ವಾಹನಗಳಿಗೆ ಹಸಿರು ನಿಶಾನೆ ತೋರುವ ಮೂಲಕ ಮೇಯರ್ ಶಿವಕುಮಾರ್ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿದರು.

ಈ ವೇಳೆ ಶಾಸಕ ಎಲ್. ನಾಗೇಂದ್ರ, ಉಪಮೇಯರ್ ಡಾ. ರೂಪಾ, ನಗರ ಪಾಲಿಕೆ ಸದಸ್ಯರಾದ ಎನ್.ಯು. ಸುಬ್ಬಯ್ಯ, ಪುಷ್ಪಲತಾ ಜಗನ್ನಾಥ್, ಪ್ರಮೀಳಾ ಭರತ್, ಸತೀಶ್, ಛಾಯಾದೇವಿ, ಸೌಮ್ಯ ಉಮೇಶ್, ರವೀಂದ್ರ, ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ರಂಜಿತ್ ಕುಮಾರ್, ಮಧುಸೂದನ್, ಸುವರ್ಣ, ಸಿಂಧು, ಅಭಿವೃದ್ಧಿ ಅಧಿಕಾರಿಗಳು, ಪರಿಸರ ಇಂಜಿನಿಯರ್‌ಗಳು, ಆರೋಗ್ಯ ನಿರೀಕ್ಷಕರು ಉಪಸ್ಥಿತರಿದ್ದರು.

ಪೌರಕಾರ್ಮಿಕರೊಂದಿಗೆ ತೆರಳಿ ರಸ್ತೆ ಬದಿಯಲ್ಲಿರುವ ತ್ಯಾಜ್ಯ, ಕಟ್ಟಡ ತ್ಯಾಜ್ಯ ಗಳನ್ನು ತೆರವುಗೊಳಿಸಲಿರುವ ಸಿಬ್ಬಂದಿ, ಜೆಸಿಬಿ, ಡೋಜರ್, ಹಿಟಾಚಿಗಳ ಮೂಲಕ ಸ್ವಚ್ಛಗೊಳಿಸಿ ಟ್ರ್ಯಾಕ್ಟರ್ ಮತ್ತು ಟಿಪ್ಪರ್‌ಗಳ ಮೂಲಕ ಘನ ತ್ಯಾಜ್ಯವನ್ನು ವಿದ್ಯಾರಣ್ಯಪುರಂ ಸೂಯೇಜ್ ಫಾರಂಗೂ, ಕಟ್ಟಡ ತ್ಯಾಜ್ಯವನ್ನು ಹಂಚ್ಯಾ–ಸಾತಗಳ್ಳಿ ಬಳಿಯ ಸಿ ಅಂಡ್ ಡಿ ವೇಸ್ಟ್ ಡಂಪಿಂಗ್ ಯಾರ್ಡ್‌ನಲ್ಲಿ ಸುರಿಯುವರು.

ಅರಮನೆ ಸುತ್ತಲಿನ ಪ್ರದೇಶ, ಅಗ್ರಹಾರ, ಮಹಾತ್ಮ ಗಾಂಧಿ ರಸ್ತೆ, ಲಲಿತ ಮಹಲ್ ರಸ್ತೆ, ಚಾಮುಂಡಿಬೆಟ್ಟ ರಸ್ತೆ, ಬಸವೇಶ್ವರ ರಸ್ತೆ, ನಾರಾಯಣಶಾಸ್ತ್ರಿ ರಸ್ತೆ, ಕೆ.ಆರ್. ಸರ್ಕಲ್, ಗಾಂಧಿ ಚೌಕ, ಡಿ. ದೇವರಾಜ ಅರಸು ರಸ್ತೆ, ಧನ್ವಂತರಿ ರಸ್ತೆ ಜೆಎಲ್‌ಬಿ ರಸ್ತೆ ಬಿ.ಎನ್. ರಸ್ತೆ, ಸಯ್ಯಾಜಿ ರಾವ್ ರಸ್ತೆ, ಕೆಆರ್‌ಎಸ್ ರಸ್ತೆ ಹುಣಸೂರು ರಸ್ತೆ, ವಾಲ್ಮೀಕಿ ರಸ್ತೆ, ಬೋಗಾದಿ ರಸ್ತೆ, ಅಶೋಕ ರಸ್ತೆ ಇರ್ವಿನ್ ರಸ್ತೆ ಸೇರಿದಂತೆ ಮೈಸೂರು ನಗರದಾದ್ಯಂತ ಎಲ್ಲಾ ಪ್ರಮುಖ ರಸ್ತೆ ಸರ್ಕಲ್‌ನ್ನು ಸ್ವಚ್ಛಗೊಳಿಸಿ, ಕಸ ವಿಲೇವಾರಿ ಮಾಡಲಾಗುತ್ತಿದ್ದು, ಸಿ ಅಂಡ್ ವೇಸ್ಟ್ ಅನ್ನು ವೈಜ್ಞಾನಿಕವಾಗಿ ನೆಲ ಭರ್ತಿ ಮಾಡಲು ಬಳಸಲಾಗುತ್ತಿದೆ.

ಅಲ್ಲದೆ, ಮಳೆ ನೀರು ಚರಂಡಿ, ಒಳಚರಂಡಿಯಲ್ಲಿ ತುಂಬಿರುವ ಕಸ ತೆಗೆದು ನೀರು ಸರಾಗವಾಗಿ ಹರಿದು ಹೋಗು ವಂತೆ ವ್ಯವಸ್ಥೆ ಕಲ್ಪಿಸುವ ಜೊತೆಗೆ ರಸ್ತೆ ಬದಿ ಇರುವ ಕಸವನ್ನು ಸಾಗಿಸಿ, ಸೂಯೇಜ್ ಫಾರಂನಲ್ಲಿ ಡಂಪ್ ಮಾಡುವ ಮೂಲಕ ಮೈಸೂರು ನಗರವನ್ನು ಸ್ವಚ್ಛಗೊಳಿಸಲು ಸೂಚನೆ ನೀಡಲಾಗಿದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ತಾವು ಮತ್ತು ಅಧಿಕಾರಿಗಳು ಸಭೆ ಕರೆದು ಮೈಸೂರು ನಗರವನ್ನು ಸ್ವಚ್ಛಗೊಳಿ ಸಲು ಟ್ರ್ಯಾಕ್ಟರ್, ಟಿಪ್ಪರ್, ಜೆಸಿಬಿ, ಹಿಟಾಚಿ ಗಳನ್ನು ಉಚಿತವಾಗಿ ನೀಡಿ, ಸಹಕರಿಸ ಬೇಕೆಂದು ಕೇಳಿಕೊಂಡಾಗ ಗುತ್ತಿಗೆದಾರರು ಒಪ್ಪಿ ನಮ್ಮೊಂದಿಗೆ ಕೈಜೋಡಿಸಿರುವುದರಿಂದ ಮೂರು ದಿನ ನಿರಂತರವಾಗಿ ಸ್ವಚ್ಛತಾ ಕಾರ್ಯ ನಡೆಯಲಿದೆ. ಎಲ್ಲಾ ವಲಯ ಕಚೇರಿ ಅಭಿವೃದ್ಧಿ ಅಧಿಕಾರಿಗಳು, ಹೆಲ್ತ್ ಇನ್ಸ್‌ಪೆಕ್ಟರ್, ಪರಿಸರ ಇಂಜಿನಿಯರ್‌ಗಳು ಜೊತೆಯಲ್ಲಿದ್ದು ಮೇಲ್ವಿಚಾರಣೆ ನಡೆಸುವರು ಎಂದು ಅವರು ತಿಳಿಸಿದರು.

ಎಲ್ಲಾ 65 ವಾರ್ಡ್‌ಗಳ ಕಾರ್ಪೊರೇಟರ್‌ಗಳು ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡು ಸಿಬ್ಬಂದಿಗೆ ಸಹಕಾರ ನೀಡುವರು. ಒಟ್ಟಾರೆ ದಸರಾ ವೇಳೆ ಮೈಸೂರಿನ ಹೃದಯ ಭಾಗ ಸೇರಿದಂತೆ ನಗರವನ್ನು ಸ್ವಚ್ಛ ಹಾಗೂ ಸುಂದರವಾಗಿರಿಸಲು ಅಭಿಯಾನ ಸಹಕಾರಿಯಾಗಲಿದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದರು.

ಜೋಡೋಯಾತ್ರೆಯಲ್ಲಿ ಚಾಮುಂಡೇಶ್ವರಿಯ ಹತ್ತು ಸಾವಿರ ಜನ ಭಾಗಿ: ಮರೀಗೌಡ



ಮೈಸೂರು, ಸೆ. 23 : ರಾಹುಲ್‌ಗಾಂಧಿಯವರು ಹಮ್ಮಿಕೊಂಡಿರುವ ಭಾರತ್ ಜೋಡೋ ಯಾತ್ರೆಗೆ ಚಾಮುಂಡೇಶ್ವರಿ ಕ್ಷೇತ್ರದಿಂದ ಹತ್ತು ಸಾವಿರ ಜನ ಸೇರುವ ನಿರೀಕ್ಷೆ ಇದೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ. ಮರೀಗೌಡ ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಗೋಪಾಲಪುರ ಗ್ರಾಮದಲ್ಲಿ ನಡೆದ ಭಾರತ್ ಜೋಡೋ ಯಾತ್ರೆ ಮತ್ತು ಬೂತ್‌ಮಟ್ಟದ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ವಿಪಕ್ಷನಾಯಕರಾದ ಸಿದ್ದರಾಮಯ್ಯನವರು ಪಕ್ಷದ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್‌ರವರ ಆದೇಶದ ಮೇರೆಗೆ ಬೂತ್‌ಮಟ್ಟದಲ್ಲಿ ಪಕ್ಷವನ್ನು ಸಂಘಟಿಸಲು ಪ್ರತಿ ಬೂತ್‌ನಲ್ಲಿ 13 ಜನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಅಲೆ ಇದ್ದು, ಬೂತ್‌ಮಟ್ಟದ ಪದಾಧಿಕಾರಿಗಳು, ಕಾರ್ಯಕರ್ತರು ಬಿಜೆಪಿ ಸರ್ಕಾರದ ಹಗರಣಗಳು, ಭ್ರಷ್ಟಾಚಾರ, ಅಧಿಕಾರ ದುರುಪಯೋಗ, 40%, ಕಮಿಷನ್‌ಗಳನ್ನು ಜನರಿಗೆ ತಿಳಿಸುವುದರ ಮೂಲಕ ಜಾಗೃತಿ ಮೂಡಿಸಬೇಕು.

ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಆದ ಅಭಿವೃದ್ಧಿ ಕಾರ್ಯಕ್ರಮಗಳನ್ನು ತಿಳಿಸಬೇಕು. 2023ಕ್ಕೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗೆ ಎಲ್ಲರು ಶಕ್ತಿಮೀರಿ ಶ್ರಮಿಸಬೇಕು. ಎಂತಹ ಪ್ರಬಲ ವಿರೋಧಿ ಅಭ್ಯರ್ಥಿಗಳಿದ್ದರೂ ಯಾರೂ ಎದೆಗುಂದ ಬೇಕಾಗಿಲ್ಲ. ಸಿದ್ದರಾಮಯ್ಯನವರ ಆಶೀರ್ವಾದವೊಂದಿದ್ದರೆ ಸಾಕು ಎಂದ ಅವರು, ಭಾರತ್ ಜೋಡೋ ಯಾತ್ರೆಯ ಯಶಸ್ಸಿಗೆ ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಜಿ.ಕೆ. ಬಸವಣ್ಣ, ಜಿಲ್ಲಾ ಕಾಂಗ್ರೆಸ್, ಎಸ್.ಸಿ. ಘಟಕದ ಅಧ್ಯಕ್ಷ ಸಿದ್ದರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ. ಗುರುಸ್ವಾಮಿ ಅಸಂಘಟಿತ ಕಾರ್ಮಿಕ ಸಂಘದ ಅಧ್ಯಕ್ಷ ಕೆರೆಹುಂಡಿ ಮಹೇಶ್, ಎನ್.ಎಸ್.ಯು.ಐ. ಯುವ ಘಟಕದ ಅಧ್ಯಕ್ಷ ಕೋಟೆ ಹುಂಡಿ ಮನೋಜ್, ಗ್ರಾ.ಪಂ. ಮಾಜಿ ಅಧ್ಯಕ್ಷ ಜಯರಾಮೇಗೌಡ ಮುಖಂಡರಾದ ಮಹೇಶ್, ನಂಜುಂಡ, ರಾಜೇಗೌಡ, ಕೃಷ್ಣಮೂರ್ತಿ, ಜಿ.ಸಿ. ಮಹೇಸ್, ಮಹಾದೇವು. ಶಿವಲಿಂಗ, ಬೈರೇಗೌಡ, ಸಣ್ಣಸ್ವಾಮಿನಾಯ್ಕ, ಸುರೇಶ್, ಯೋಗೇಶ್, ಚಿನ್ನಸ್ವಾಮಿ, ಬಸವಲಿಂಗ, ಶಿವಣ್ಣ. ಕೆಂಪಸಿದ್ದು, ಭಾಸ್ಕರ್, ರವಿ ಹಾಜರಿದ್ದರು.

ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರ ಮೈಸೂರು ಜಿಲ್ಲಾ ಪ್ರವಾಸ

ಮೈಸೂರು, ಸೆ.23– ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾದ ಎಂ.ಶಿವಣ್ಣ (ಕೋಟೆ) ಅವರು 2022 ರ ಸೆಪ್ಟೆಂಬರ್ 26 ರಂದು ಮೈಸೂರು ಜಿಲ್ಲಾ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಸೆಪ್ಟೆಂಬರ್ 26 ರಂದು ಬೆಳಗ್ಗೆ 9 ಗಂಟೆಗೆ ರಾಷ್ಟ್ರಪತಿಗಳು ಉದ್ಘಾಟನೆ ಮಾಡಲಿರುವ ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ಜಲದರ್ಶಿನಿ ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಹೂಡುವರು ಎಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಧಾನಸಭೆ ಕಲಾಪ ಅನಿರ್ದಿಷ್ಟಾವಧಿ ಮುಂದೂಡಿಕೆ

ಬೆಂಗಳೂರು,ಸೆ.23(ಕೆಎಂಶಿ)–ಸರ್ಕಾರದ ವಿರುದ್ಧ ಹಗರಣಗಳ ಆರೋಪ ಹೊರಿಸಿ ಕಾಂಗ್ರೆಸ್ ಮತ್ತು ಜೆಡಿಎಸ್ ಗದ್ದಲವೆಬ್ಬಿಸುತ್ತಿದ್ದಂತೆಯೇ ವಿಧಾನಸಭೆಯ ಕಲಾಪವನ್ನು ಅನಿರ್ದಿ ಷ್ಟಾವಧಿಯವರೆಗೆ ಮುಂದೂಡಲಾಗಿದೆ. ಇಂದು ಸದನ ಸೇರುತ್ತಿದ್ದಂತೆಯೇ ಬಿಎಂಎಸ್ ಟ್ರಸ್ಟ್‌ನಲ್ಲಿ ಹಗರಣ ನಡೆದಿದೆ ಎಂದು ಆರೋಪಿಸಿ ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ಎದುರಿನ ಬಾವಿಗೆ ಇಳಿದು ಧರಣಿ ನಡೆಸಿದರು.

ಈ ವಿಷಯಕ್ಕೆ ಸಂಬಂಧಿಸಿದಂತೆ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಅವರು ಸುದೀರ್ಘವಾಗಿ ಮಾತನಾಡಿದ್ದಲ್ಲದೆ, ಉನ್ನತ ಶಿಕ್ಷಣ ಸಚಿವ ಡಾ.ಅಶ್ವಥ್ ನಾರಾಯಣ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಅಹೋರಾತ್ರಿ ಧರಣಿ ನಡೆಸುವುದಾಗಿ ಘೋಷಿಸಿದ್ದರು. ಆದರೆ ವಿಷಯಕ್ಕೆ ಸಂಬಂಧಿಸಿದಂತೆ ಶುಕ್ರವಾರ ಪುನಃ ಚರ್ಚಿಸೋಣ. ಹೀಗಾಗಿ ರಾತ್ರಿ ಸದನದಲ್ಲೇ ಉಳಿದು ಧರಣಿ ನಡೆಸುವ ತೀರ್ಮಾನವನ್ನು ಕೈ ಬಿಡಿ ಎಂದರೂ ಪಟ್ಟುಬಿಡದೆ ಜೆಡಿಎಸ್ ಸದಸ್ಯರು ಧರಣಿ ನಡೆಸಿದಾಗ ಗದ್ದಲ ಏರ್ಪಟ್ಟಿತು.

ಮನೆ ಮನೆ ಗೊಂಬೆ ಕೂರಿಸುವ ಸ್ಪರ್ಧೆಗೆ ಶಾಸಕರಿಂದ ಚಾಲನೆ



ಮೈಸೂರು, ಸೆ.23(ಆರ್‌ಕೆಬಿ)– ಮನೆ ಮನೆಗಳಲ್ಲಿ ಗೊಂಬೆ ಕೂರಿಸುವುದರಿಂದ ಗೃಹಿಣಿಯರು ನಮ್ಮ ಪರಂಪರೆಯನ್ನು ಉಳಿಸಿ ಬೆಳೆಸುತ್ತಿದ್ದಾರೆ ಎಂದು ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ತಿಳಿಸಿದರು.


ಮೈಸೂರಿನ ಕೆ.ಎಂ.ಪ್ರವೀಣ್‌ಕುಮಾರ್ ಚಾರಿಟಬಲ್ ಟ್ರಸ್ಟ್ ದಸರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿರುವ ಮನೆ ಮನೆಗಳಲ್ಲಿ ದಸರಾ ಗೊಂಬೆ ಕೂರಿಸುವ ಸ್ಪರ್ಧೆಗೆ ಬಿ.ಎನ್.ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಚಾಲನೆ ನೀಡಿ, ಅವರು ಮಾತನಾಡಿದರು.

ಸಂಸ್ಕೃತಿ ಮತ್ತು ನಮ್ಮ ಪರಂಪರೆಯ ಉಳಿವಿಗಾಗಿ ಹೋರಾಡುವ ಸಂದರ್ಭ ಎದುರಾಗಿದೆ. ಪ್ರತಿಯೊಬ್ಬರೂ ಅದಕ್ಕಾಗಿ ಶ್ರಮಿಸಬೇಕು. ನಮ್ಮ ಸಂಪ್ರದಾಯ ಮತ್ತು ಧಾರ್ಮಿಕತೆಯ ರಕ್ಷಣೆಗಾಗಿ ಪ್ರತಿಯೊಬ್ಬರೂ ಒಗ್ಗಟ್ಟು ಪ್ರದರ್ಶಿಸಿ, ಮುಂದಿನ ಪೀಳಿಗೆಗೆ ಸಂರಕ್ಷಿಸಬೇಕು ಎಂದು ಕರೆ ನೀಡಿದರು.

ಮೈಸೂರು ಪರಂಪರೆಯಲ್ಲಿ ಅತ್ಯಂತ ಪವಿತ್ರವಾದ ನವರಾತ್ರಿ ದಸರಾ ಗೊಂಬೆ ಪ್ರದರ್ಶನಕ್ಕೆ ಅತ್ಯಂತ ಮಹತ್ವವಿದೆ. ಪಟ್ಟದ ಗೊಂಬೆಗಳನ್ನು ಲಕ್ಷ್ಮಿ ನಾರಾಯಣ ಸ್ವರೂಪದಲ್ಲಿ ಪೂಜಿಸಿ, ಪುರಾಣ ಪುಣ್ಯ ಕಥೆಗಳನ್ನು ಗೊಂಬೆಗಳ ಮೂಲಕ ರೂಪಕವಾಗಿ ಪ್ರಚುರಪಡಿಸಿ, ಅದನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದೇ ಇದರ ಮೂಲ ಉದ್ದೇಶ ಎನ್ನಲಾಗಿದೆ. ಹಾಗಾಗಿ ಮನೆ ಮನೆಗಳಲ್ಲಿ ಗೊಂಬೆಗಳ ಕೂರಿಸುವ ಮೂಲಕ ಗೃಹಿಣಿಯವರು ನಮ್ಮ ಪರಂಪರೆಯನ್ನು ಉಳಿಸಿ, ಬೆಳೆಸುತ್ತಾ ಬಂದಿದ್ದಾರೆ ಎಂದು ಹೇಳಿದರು.

ನಂತರ ಮಾತನಾಡಿ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಸ್ಪರ್ಧೆಯ ವಿವರಗಳನ್ನು ನೀಡಿದರು. ಸಂಸ್ಕೃತಿ, ಇತಿಹಾಸ ಸಾರುವ ಹಾಗೂ ಐತಿಹಾಸಿಕ ಹಿನ್ನಲೆ ಒಳಗೊಂಡ ಗೊಂಬೆಗಳನ್ನು ಕೂರಿಸಿದವರಿಗೆ ಮೊದಲನೇ ಬಹುಮಾನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರಿನಲ್ಲಿ ಕ್ರಮವಾಗಿ 2 ಸಾವಿರ, ಒಂದು ಸಾವಿರ ಮತ್ತು 500 ರೂ. ನಗದು ಬಹುಮಾನದ ಜೊತೆಗೆ ಪಾರಿತೋಷಕ, ಪ್ರಮಾಣಪತ್ರ ನೀಡಲಾಗುವುದು. 10 ಸ್ಪರ್ಧಿಗಳಿಗೆ ಸಮಾಧಾನಕರ ಬಹುಮಾನ, ಪ್ರಮಾಣಪತ್ರ, ಭಾಗವಹಿಸಿದ್ದ ಎಲ್ಲ ಸ್ಪರ್ಧಿಗಳಿಗೂ ಪ್ರಮಾಣಪತ್ರ ನೀಡಲಾಗುವುದು. ಸ್ಪರ್ಧೆಗೆ ಅ.5 ಕಡೆಯ ದಿನಾಂಕವಾಗಿದ್ದು, ಸ್ಪರ್ಧೆಯಲ್ಲಿ ಭಾಗವಹಿಸುವವರು 9880752727 ಸಂಖ್ಯೆಗೆ ತಮ್ಮ ಗೊಂಬೆ ಜೋಡಣೆ ಮಾಡಿರುವ ಚಿತ್ರ, ಮೂರು ನಿಮಿಷದ ವೀಡಿಯೋ ಕಳಿಸಿಕೊಡಬೇಕು ಎಂದರು.

ಕಾರ್ಯಕ್ರಮದಲ್ಲಿ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಟ್ರಸ್ಟ್ ಉಪಾಧ್ಯಕ್ಷ ರಾಜೇಶ್, ನಗರಪಾಲಿಕೆ ಉಪ ಆಯುಕ್ತ ಮಹೇಶ್, ಕಾರ್ಯಪಾಲಕ ಇಂಜಿನಿಯರ್ ರಂಜಿತ್‌ಕುಮಾರ್, ಅಭಿವೃದ್ಧಿ ಅಧಿಕಾರಿ ಮಂಜುನಾಥ್ ಇನ್ನಿತರರು ಉಪಸ್ಥಿತರಿದ್ದರು.



ದಸರಾ ಯುವ ಸಂಭ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಶೌರ್ಯ ಅನಾವರಣ

ಮೈಸೂರು, ಸೆ.23(ಜಿಎ)- ವೀರ ಮರಣವನ್ನಪ್ಪಿದ ಯೋಧರಿಗೆ ನಮನ... ಸಂಗೊಳ್ಳಿ ರಾಯಣ್ಣನ ದೇಶಾಭಿಮಾನದ ಜೊತೆಗೆ ಕನ್ನಡ ಜನಪದ ಲೋಕದ ವೈಭವವನ್ನು ಅನಾವರಣಗೊಳ್ಳಿಸಿದ ಯುವ ಸಮೂಹ...

ಮಾನಸಗಂಗೋತ್ರಿ ಬಯಲು ರಂಗ ಮಂದಿರದಲ್ಲಿ ನಡೆಯುತ್ತಿರುವ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ 'ಯುವ ಸಂಭ್ರಮ'ದಲ್ಲಿ ಜಾನಪದ ಕಲಾಪ್ರಕಾರಗಳ ಪ್ರದರ್ಶನ, ಕನ್ನಡ ವೈಭವ ಮತ್ತು ಶಿವ ವಿಷಕಂಠನಾದ ಪುರಾಣದ ಸೃಷ್ಟಿ ಜೊತೆಗೆ ಪುಲ್ವಾಮಾ ದಾಳಿಯುಲ್ಲಿ ಹುತಾತ್ಮರಾದ ವೀರ ಯೋಧರಿಗೆ ಗೌರವವನ್ನು ವಿದ್ಯಾರ್ಥಿಗಳು ಸಲ್ಲಿಸಿದರು.

ಶ್ರೀರಂಗಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಮೈಸೂರಿನ ಮಹಾರಾಣಿ ಕಲಾ ಕಾಲೇಜಿನ ವಿದ್ಯಾರ್ಥಿಗಳು 'ಯುವ ಸಂಭ್ರಮ'ದ ವೇದಿಕೆಯಲ್ಲಿ ಜಾನಪದ ಪ್ರಕಾರ ಪೂಜಾ ಕುಣಿತ, ಡೊಳ್ಳು ಕುಣಿತ, ಕೋಲು ಕುಣಿತ, ವೀರಗಾಸೆ ಗಾರುಡಿ ಗೊಂಬೆ ಕುಣಿತದ ನೃತ್ಯ ರೂಪಕದ ಮೂಲಕ ನಾಡು ನುಡಿಯ ವೈಭವವನ್ನು ಪ್ರದರ್ಶಿಸಿ ನೆರೆದಿದ್ದ ಯುವ ಸಮೂಹದಿಂದ ಚಪ್ಪಾಳೆ ಗಿಟ್ಟಿಸಿಕೊಂಡರು.

ಭಾರತ ಸ್ವಾತಂತ್ರ ಹೋರಾಟಗಾರರ ವೀರ ಪರಾಕ್ರಮ ಸೃಷ್ಟಿ : ಮೈಸೂರಿನ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿಗಳು ಬ್ರಿಟಿಷರ ಎದೆಯಲ್ಲಿ ನಡುಕ ಹುಟ್ಟಿಸಿದ್ದ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣನ ವೀರ ಪರಾಕ್ರಮವನ್ನು ಸಾರಿದರೆ, ಮೈಸೂರಿನ ಸುಮುಖ ಪಿ.ಯು ಕಾಲೇಜಿನ ವಿದ್ಯಾರ್ಥಿಗಳು ವೀರ ವನಿತೆ ಝಾನ್ಸಿ ರಾಣಿ ಲಕ್ಷ್ಮಿ ಬಾಯಿ ಬಿಟಿಷರ ವಿರುದ್ಧ ಯುದ್ಧದಲ್ಲಿ ಸೆಣಸಾಡಿದ ವೀರಗಾಥೆಯ ಕಥೆಯನ್ನು ನೃತ್ಯದ ಮೂಲಕ ನಿರೂಪಿಸಿದರೂ ಹಾಗೂ ಚಾಮರಾಜನಗರದ ಜೋಡಿ ರಸ್ತೆಯ ಜೆ.ಎಸ್.ಎಸ್. ಮಹಿಳಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ಚಿತ್ರದುರ್ಗದ ಕೋಟೆಗೆ ಲಗ್ಗೆ ಹಾಕಿದ ಶತ್ರು ಪಡೆಯ ಸೈನಿಕರನ್ನು ಸದೆಬಡಿದು ಅನೇಕರಿಗೆ ಸ್ಫೂರ್ತಿಯಾದ ಒನಕೆ ಓಬವ್ವನ ಸಾಹಸ ಪ್ರದರ್ಶನ, ನೃತ್ಯದ ಮೂಲಕ ಸ್ವಾತಂತ್ರ್ಯ ಹೋರಾಟದ ವೀರ ಪರಾಕ್ರಮದ ಮರು ಸೃಷ್ಟಿಗೆ ಜಯ ಘೋಷಗಳು ಮೊಳಗಿದ್ದವು.

ಪುಲ್ವಾಮಾ ಯೋಧರಿಗೆ ನಮನ : 2019ರ ಫೆಬ್ರವರಿ 14 ರಂದು ಜಮ್ಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾರತೀಯ ಭದ್ರತಾ ಸಿಬ್ಬಂದಿ ಪ್ರಯಾಣಿಸುವ ಬಸ್ ಮೇಲೆ ಆತ್ಮಹತ್ಯಾ ಬಾಂಬರ್ ದಾಳಿಯಿಂದ 40 ವೀರ ಯೋಧರಿಗೆ ಮೈಸೂರಿನ ಕೆ.ಎನ್.ಪುರದ ಶ್ರೀಕಂಠೇಶ್ವರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ವೀರ ಗೀತೆಗಳ ನೃತ್ಯ ರೂಪಕದ ಮೂಲಕ ನಮನ ಸಲ್ಲಿಸಿದರು. ಈ ವೇಳೆ ನೆರೆದಿದ್ದವರು ಎದ್ದು ನಿಂತು ವೀರ ಯೋಧರಿಗೆ ಜಯ ಘೋಷಣೆ ಕೂಗುವ ಮೂಲಕ ಗೌರವ ಸಲ್ಲಿಸಿದರು.

ಗುಂಡ್ಲುಪೇಟೆ ಗೌತಮ ಪ್ರಥಮ ದರ್ಜೆ ಕಾಲೇಜು, ಮೈಸೂರಿನ ಬಸುದೇವ ಸೋಮಾನಿ ಕಾಲೇಜಿನ ವಿದ್ಯಾರ್ಥಿಗಳು ಕನ್ನಡ ವೈಭವವನ್ನು ಪ್ರದರ್ಶಿಸಿದರು. ಮಳವಳ್ಳಿಯ ಭಾರತಿ ಪದವಿ ಪೂರ್ವ ಕಾಲೇಜು, ಹೆಗ್ಗಡದೇವನ ಕೋಟೆಯ ವಿಶ್ವ ಭಾರತಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಮಾನವನಿಂದ ಪರಿಸರ ಸಂರಕ್ಷಣೆ ಮತ್ತು ಮಾನವ ನಿರ್ಮಿತ ಆಪತ್ತುಗಳ ಬಗ್ಗೆ ಮನವರಿಕೆ ಮಾಡಿಕೊಟ್ಟರು.


ಮೈಸೂರಿನ ಕೆಎನ್.ಪುರದ ಶ್ರೀಕುಠೇಶ್ವರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ನೃತ್ಯ ರೂಪಕ

'ಶುಭಮಂಗಳ' ಮತ್ತು 'ಕಂಬಳಿ ಹುಳ' ಚಿತ್ರತಂಡದ ಮಾತು..

ಮೈಸೂರಿನ ಯುವ ಸಂಭ್ರಮಕ್ಕೆ ಭೇಟಿ ನೀಡಿದ ಕಂಬಳ್ಳಿ ಹುಳ ಚಿತ್ರ ತಂಡ ಚಿತ್ರದ ಗೀತೆಯನ್ನು ಬಿಡುಗಡೆ ಮಾಡಿತು. ಈ ವೇಳೆ ಮಾತನಾಡಿದ ನಟ ಅಂಜನ್ ನಾಗೇಂದ್ರ ಮೈಸೂರು ಕನ್ನಡ ಚಿತ್ರರಂಗಕ್ಕೆ ಕಣ್ಣು ಇದ್ದ ಹಾಗೆ ಮೈಸೂರಿಗರು ಕನ್ನಡದ ಪ್ರತಿ ಚಿತ್ರವನ್ನು ಅಪ್ಪಿಕೊಳ್ಳುತ್ತಾರೆ ಎಂದರು. ನಂತರ ವೇದಿಕೆಗೆ ಆಗಮಿಸಿದ 'ಶುಭಮಂಗಳ' ಚಿತ್ರದ ತಂಡವು ಚಿತ್ರ ಟ್ರೈಲರ್ ಬಿಡುಗಡೆ ಮಾಡಿತು. ನಂತರ ಚಿತ್ರ ನಾಯಕಿ ಮೇಘನಾ ಗಾಂವ್ಕರ್ ಮಾತನಾಡಿ, ಮೈಸೂರು ಎಂದರೆ ನನಗೆ ಹಿಂದಿನಿಂದಲೂ ಅಚ್ಚು ಮೆಚ್ಚು. ಅದರಲ್ಲೂ ದಸರಾ ವೇಳೆಯಲ್ಲಿ ನಾನು ಬಂದಿರುವುದು ಮತ್ತಷ್ಟು ಸಂತಸ ಹೆಚ್ಚಿಸಿದೆ ಎಂದರು.


ಶ್ರೀರಂಗಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಜಾನಪದ ನೃತ್ಯ


ಮೈಸೂರಿನ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿಗಳಿಂದ ರಾಯಣ್ಣನ ಪರಾಕ್ರಮ

ದಸರಾ ಪ್ರಯುಕ್ತ ರಾಜ್ಯ ಮಟ್ಟದ ಚಿತ್ರಕಲಾ ಶಿಬಿರಕ್ಕೆ ಶಾಸಕ ನಾಗೇಂದ್ರ ಚಾಲನೆ

ವಿವಿಧ ಜಿಲ್ಲೆಗಳ 15 ಚಿತ್ರಕಲಾವಿದರು ಭಾಗಿ



ಮೈಸೂರು, ಸೆ.23(ಆರ್‌ಕೆಬಿ)- ಮೈಸೂರು ಮಹಾರಾಜರು ಚಿತ್ರಕಲೆ, ಶಿಲ್ಪಕಲೆ ಸೇರಿದಂತೆ ಅನೇಕ ಕಲೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದ ಹಿನ್ನೆಲೆಯಲ್ಲಿ ಇಂದು ಮೈಸೂರಿನಲ್ಲಿ ನೂರಾರು ಕಲಾವಿದರು ಅರಳಿದ್ದಾರೆ. ಅಂದು ಮಹಾರಾಜರು ಕಲಾವಿರದ ಪೋಷಿಸಿದ್ದರು. ಇಂದು ಸರ್ಕಾರ ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿದ್ದು, ಹೀಗಾಗಿ ಮೈಸೂರಿನ ಕಲಾ ಸಂಸ್ಕೃತಿ ಪರಂಪರೆ ಉಳಿಯುವಂತಾಗಿದೆ ಎಂದು ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಇಂದಿಲ್ಲಿ ತಿಳಿಸಿದರು.

ದಸರಾ ಮಹೋತ್ಸವದ ಅಂಗವಾಗಿ ಲಲಿತಕಲೆ ಮತ್ತು ಕರಕುಶಲ ಉಪ ಸಮಿತಿ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿ ಜಂಟಿಯಾಗಿ ಕಲಾಮಂದಿರ ಆವರಣದಲ್ಲಿ ಆಯೋಜಿಸಿರುವ ರಾಜ್ಯಮಟ್ಟದ ಚಿತ್ರಕಲಾ ಶಿಬಿರದಲ್ಲಿ ಬ್ರಷ್‌ನಿಂದ ಚಿತ್ರ ರಚಿಸುವ ಮೂಲಕ ಉದ್ಘಾಟಿಸಿ, ಮಾತನಾಡಿದರು.

ಚಿತ್ರಕಲಾ ಸ್ಪರ್ಧೆಯಲ್ಲಿ ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ 15 ಮಂದಿ ಚಿತ್ರಕಲಾವಿದರು ಭಾಗವಹಿಸಿದ್ದು, ಚಿತ್ರಕಲಾ ಶಿಬಿರ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಇಂತಹ ಶಿಬಿರಗಳಲ್ಲಿ ಕಲಾವಿದರಿಗೆ ಮತ್ತಷ್ಟು ಪ್ರೋತ್ಸಾಹ ದೊರೆತರೆ ಕಲೆ ವಿಶ್ವಮಾನ್ಯವಾಗಲು ಸಾಧ್ಯವಿದೆ. ಕಲೆಯೂ ಬೆಳೆಯುತ್ತದೆ. ಇದಕ್ಕೆ ಮೈಸೂರಿಗೆ ಆಗಮಿಸುವ ಪ್ರವಾಸಿಗರು ಇಲ್ಲಿಗೂ ಭೇಟಿ ನೀಡಿ ಇವರ ಕಲೆಯನ್ನು ನೋಡಿ, ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು.

ಲಲಿತಕಲೆ ಮತ್ತು ಕರಕುಶಲ ಉಪಸಮಿತಿಯ ಕಾರ್ಯಾಧ್ಯಕ್ಷ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಶಿಬಿರದಲ್ಲಿ ರಚನೆಯಾದ ಕಲಾಕೃತಿಗಳ ಪ್ರದರ್ಶನ ಹಾಗೂ ಮಾರಾಟವೂ ಇದ್ದು, ಇದರಿಂದ ಕಲಾವಿದರ ಬ್ಯಾಂಕ್ ಖಾತೆಗಳಿಗೆ ಹಣ ಜಮೆಯಾಗಲಿದೆ ಎಂದರು.

ಲಲಿತಕಲಾ ಅಕಾಡೆಮಿ ಸದಸ್ಯ ವಿನೋದ್‌ಕುಮಾರ್, ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಉಪಸಮಿತಿ ಉಪ ವಿಶೇಷಾಧಿಕಾರಿ ವಿಜಯಕುಮಾರ್ ಉಪಸ್ಥಿತರಿದ್ದರು.

ಸೆ.28ರಿಂದ ಐದು ದಿನ ದಸರಾ ಕವಿಗೋಷ್ಠಿ

ಪ್ರಧಾನ ಕವಿಗೋಷ್ಠಿ, ಹಾಸ್ಯ ಕವಿಗೋಷ್ಠಿ, ಜನಪದ ಕಾವ್ಯ ಸಂಭ್ರಮ, ಉರ್ದು ಕವಿಗೋಷ್ಠಿ, ಯುವ ಕವಿಗೋಷ್ಠಿ, ಪ್ರಾದೇಶಿಕ ಕವಿಗೋಷ್ಠಿ, ಚಿಗುರು ಕವಿಗೋಷ್ಠಿ



ಮೈಸೂರು, ಸೆ.23(ಆರ್‌ಕೆಬಿ)- ಐದು ದಿನಗಳ ಈ ಬಾರಿಯ ದಸರಾ ಕವಿಗೋಷ್ಠಿ ಸೆ.28ರಂದು ಆರಂಭವಾಗಲಿದ್ದು, ಇದರಲ್ಲಿ ಪ್ರಧಾನ ಕವಿಗೋಷ್ಠಿ ಸೇರಿದಂತೆ ಹಾಸ್ಯ ಕವಿಗೋಷ್ಠಿ, ಜನಪದ ಕಾವ್ಯ ಸಂಭ್ರಮ, ಉರ್ದು ಕವಿಗೋಷ್ಠಿ (ಮುಷಾಹಿರ), ಯುವ ಕವಿಗೋಷ್ಠಿ, ಪ್ರಾದೇಶಿಕ ಕವಿಗೋಷ್ಠಿ, ಚಿಗುರು ಕವಿಗೋಷ್ಠಿಗಳು ನಡೆಯಲಿವೆ ಎಂದು ದಸರಾ ಕವಿಗೋಷ್ಠಿ ಉಪಸಮಿತಿಯ ಉಪ ವಿಶೇಷಾಧಿಕಾರಿ ಡಾ.ಎಂ.ದಾಸೇಗೌಡ ತಿಳಿಸಿದರು.

ಮೈಸೂರಿನ ನಗರಪಾಲಿಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ದಸರಾ ಕವಿಗೋಷ್ಠಿಯ ವಿವರಗಳನ್ನು ಬಿಡುಗಡೆ ಮಾಡಿದರು. ಸೆ.28ರಂದು ಬೆಳಗ್ಗೆ 10.30 ಗಂಟೆಗೆ ಕಲಾಮಂದಿರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರಿಂದ ಕವಿಗೋಷ್ಠಿ ಉದ್ಘಾಟನೆಗೊಳ್ಳಲಿದೆ ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನೀಲ್‌ಕುಮಾರ್, ಪ್ರಸಿದ್ಧ ಕವಿ ಡಾ.ದೊಡ್ಡರಂಗೇಗೌಡ, ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಮುಖ್ಯ ಅತಿಥಿಯಾಗಿ ಭಾಗವಹಿಸುವರು.

ಬೆಳಗ್ಗೆ 11.30ಕ್ಕೆ ಖ್ಯಾತ ಕವಿ ಬಿ.ಆರ್.ಲಕ್ಷ್ಮಣ್ ರಾವ್ ಅಧ್ಯಕ್ಷತೆಯಲ್ಲಿ ಹಾಸ್ಯ ಕವಿಗೋಷ್ಠಿ ನಡೆಯಲಿದ್ದು, ಪ್ರೊ.ಎಂ.ಕೃಷ್ಣೇಗೌಡ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ದುಂಡೀರಾಜ್, ಭುವನೇಶ್ವರಿ ಹೆಗಡೆ, ಮೋಹನ್ ಕಳಸಾಪುರ, ಭಾಸ್ಕರ್ ಹೆಜ್ಜೆ ಇನ್ನಿತರ 20 ಸುಪ್ರಸಿದ್ಧ ಕವಿಗಳು ಭಾಗವಹಿಸುವರು. ನಂತರ ನಿತಿನ್ ರಾಜಾರಾಮ್‌ರಿಂದ ಹಾಸ್ಯ ಗೀತೆಗಳ ಗಾಯನ ನಡೆಯಲಿದೆ

ಅದೇ ದಿನ ಮಧ್ಯಾಹ್ನ 2.30ಕ್ಕೆ ಜನಪದ ಗಾಯಕ ಪ್ರೊ.ಪಿ.ಕೆ ರಾಜಶೇಖರ್, ಡಾ.ಮಳವಳ್ಳಿ ಮಹದೇವಸ್ವಾಮಿ ಮತ್ತು ತಂಡದಿಂದ ಜನಪದ ಕಾವ್ಯ ಸಂಭ್ರಮ ನಡೆಯಲಿದೆ.

ಸೆ29ರಂದು ಉರ್ದು ಕವಿಗೋಷ್ಠಿ ಸೆ29ರಂದು ಸಂಜೆ 7 ಗಂಟೆಗೆ ಮೈಸೂರು-ಬೆಂಗಳೂರು ರಸ್ತೆ ಜೆಎಸ್‌ಎಸ್ ಮೆಡಿಕಲ್ ಕಾಲೇಜು ಬಳಿ ಕ್ಲಾಸಿಕ್ ಕನ್‌ವೆನ್ಷನ್ ಹಾಲ್‌ನಲ್ಲಿ ಉದು ಕವಿಗೋಷ್ಠಿ (ಮುಷಾಹಿರ) ನಡೆಯಲಿದೆ. ಗೋಷ್ಠಿಯಲ್ಲಿ ಉರ್ದು ಕವಿಗಳಾದ ರಾಜಾಸ್ಥಾನದ ಜೈಪುರ ಲತಾಹಯ, ಆಂಧ್ರಪ್ರದೇಶದ ಕಡಪದ ಡಾ.ರಹಿಫಿದಾಯಿ, ದೆಹಲಿಯ ರಾಜು ರಿಯಾಜ್, ಹೈದರಾಬಾದ್‌ನ ಟಿಪಿಕಲ್ ಜಗಾತಿಯಲ್, ಹೈದರಾಬಾದ್‌ನ ಶಾಹಿದ್ ಅದೀಲ್, ಭೋಪಾಲ್‌ನ ಶಬನಾ ಶಬನಂ, ತಮಿಳುನಾಡಿನ ರಹತ್ ಹರಾರ್ತ್, ಮಹಾರಾಷ್ಟ್ರದ ಷಿರಾಜ್ ಶೋಲಾಪುರಿ ತಮ್ಮ ಕವಿತೆಗಳನ್ನು ಮುಷಾಹಿರಿಗಳನ್ನು ಪ್ರಸ್ತುತಪಡಿಸಲಿದ್ದಾರೆ.

ಸುಮಾರು 15ರಿಂದ 20 ಕವಿಗಳು ಭಾಗವಹಿಸುವ ಈ ಉರ್ದು ಕವಿಗೋಷ್ಠಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟನೆ ನೆರವೇರಿಸಲಿದ್ದು, ಶಾಸಕ ತನ್ವೀರ್‌ಸೇಠ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಎಸ್.ಎ.ರಾಮದಾಸ್, ಡಾ.ಯತೀಂದ್ರ ಸಿದ್ದರಾಮಯ್ಯ, ಭಾಗವಹಿಸುವರು ಎಂದರು.

ಸೆ30ರಂದು ಯುವ ಕವಿಗೋಷ್ಠಿ ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಸೆ.30ರಂದು ಬೆಳಗ್ಗೆ 10.30 ಗಂಟೆಗೆ ಯುವ ಕವಿಗೋಷ್ಠಿ ನಡೆಯಲಿದ್ದು, 40 ಕವಿಗಳು ಭಾಗವಹಿಸುವರು. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಉದ್ಘಾಟಿಸುವರು. ಕ್ಯಾತ ಕವಿ ಡಾ.ಎಚ್.ಎಸ್.ವೆಂಕಟೇಶಮೂರ್ತಿ, ವಿಮರ್ಶಕಿ ಡಾ.ಮಂಗಳಾ ಪ್ರಿಯದರ್ಶಿನಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಅ.1ರಂದು ಪ್ರಾದೇಶಿಕ ಕವಿಗೋಷ್ಠಿ: ರಾಣಿ ಬಹದ್ದೂರ್ ಸಭಾಂಗಣದಲ್ಲಿ ಅ.1ರಂದು ಬೆಳಗ್ಗೆ 10.30 ಗಂಟೆಗೆ ಪ್ರಾದೇಶಿಕ ಕವಿಗೋಷ್ಠಿ ನಡೆಯಲಿದೆ. ಸುಮಾರು 40 ಕವಿಗಳು ಭಾಗವಹಿಸುವರು. ಶಾಸಕ ಎಸ್.ಎ. ರಾಮದಾಸ್ ಕವಿಗೋಷ್ಠಿಗೆ ಚಾಲನೆ ನೀಡುವರು. ಖ್ಯಾತ ಕವಯಿತ್ರಿ ನೂತನ ದೋಶೆಟ್ಟಿ ಅಧ್ಯಕ್ಷತೆ ವಹಿಸುವರು. ಖ್ಯಾತ ಕವಿ ಡಾ.ಯಲ್ಲಪ್ಪ ಕೆ.ಕೆ.ಪುರ ಅತಿಥಿಯಾಗಿ ಭಾಗವಹಿಸುವರು.

ಚಿಗುರು ಕವಿಗೋಷ್ಠಿ: ಅಂದು ಮಧ್ಯಾಹ್ನ 2.30 ಗಂಟೆಗೆ ಚಿಗುರು ಕವಿಗೋಷ್ಠಿ ನಡೆಯಲಿದ್ದು, ಸುಮಾರು 40 ಕವಿಗಳು ಭಾಗವಹಿಸುವರು. ಶಾಸಕ ಎಲ್.ನಾಗೇಂದ್ರ ಉದ್ಘಾಟಿಸುವರು. ಖ್ಯಾತ ಕವಯಿತ್ರಿ ಜ್ಯೋಗಿ ಗುರುಪ್ರಸಾದ್ ಅಧ್ಯಕ್ಷತೆ ವಹಿಸುವರು. ವಿಮರ್ಶಕ ಡಾ.ಸಿ.ಪಿ.ಸಿದ್ದಾಶ್ರಮ ಅತಿಥಿಯಾಗಿ ಭಾಗವಹಿಸುವರು.

ಅ.3ರಂದು ಪ್ರಧಾನ ಕವಿಗೋಷ್ಠಿ

ದಸರಾ ಕವಿಗೋಷ್ಠಿಯ ಮುಖ್ಯ ಭಾಗವಾದ ಪ್ರಧಾನ ಕವಿಗೋಷ್ಠಿ ಅ.3ರಂದು ಬೆಳಗ್ಗೆ 10.30 ಗಂಟೆಗೆ ಮಾನಸ ಗಂಗೋತ್ರಿಯ ಸೆನೆಟ್ ಸಭಾಂಗಣದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ, ಕವಿ ಡಾ.ಚಂದ್ರಶೇಖರ್ ಕಂಬಾರ ಉದ್ಘಾಟನೆ ನೆರವೇರಿಸುವರು. ಸುಮಾರು 40 ಮಂದಿ ಖ್ಯಾತ ಕವಿಗಳು ಭಾಗವಹಿಸಲಿದ್ದಾರೆ. ಕವಿ ಡಾ.ಹೆಚ್.ಎಸ್.ಶಿವಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದು, ಸಚಿವರಾದ ಎಸ್.ಟಿ.ಸೋಮಶೇಖರ್, ವಿ.ಸುನೀಲ್‌ಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸುವರು ಎಂದು ದಸರಾ ಕವಿಗೋಷ್ಠಿ ಉಪ ವಿಶೇಷಾಧಿಕಾರಿ ಡಾ.ಎಂ.ದಾಸೇಗೌಡ ತಿಳಿಸಿದರು.


ದಸರಾ ಕುಸ್ತಿ ಪೋಸ್ಟರ್‌ಅನ್ನು ಮೈಸೂರು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಶುಕ್ರವಾರ ವಸ್ತುಪ್ರದರ್ಶನ ಪ್ರಾಧಿಕಾರ ಮೈದಾನದ ಬಳಿಯ ಡಿ.ದೇವರಾಜು ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಬಿಡುಗಡೆ ಮಾಡಿದರು. ಈ ವೇಳೆ ಕುಸ್ತಿ ಉಪಸಮಿತಿ ಅಧ್ಯಕ್ಷ ಕೆ.ದೇವರಾಜ್, ಅಡಿಷನಲ್ ಎಸ್‌ಪಿ ನಂದಿನಿ ಇತರರು ಉಪಸ್ಥಿತರಿದ್ದರು.

ಸೆ.26ರಿಂದ ಅ.3ರವರೆಗೆ ದಸರಾ ಆಹಾರ ಮೇಳದಲ್ಲಿ ಬುಡಕಟ್ಟು ಆಹಾರ ಮಳಿಗೆ

ಈ ಬಾರಿ ಆಹಾರ ಪ್ರಿಯರಿಗೆ ನಾಟಿ ಕೋಳಿ ಬೊಂಬು ಬಿರಿಯಾನಿ, ಕಾಡು ಸೊಪ್ಪಿನ ಪಲ್ಯ ಸವಿಯುವ ಸದವಕಾಶ



ಮೈಸೂರು, ಸೆ.23(ಆರ್‌ಕೆಬಿ)- ಈ ಬಾರಿಯ ದಸರಾ ಹಿನ್ನೆಲೆಯಲ್ಲಿ ನಗರದ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಸೆ.26ರಿಂದ ಅ.3 ರವರೆಗೆ ನಡೆಯುವ ಆಹಾರ ಮೇಳದಲ್ಲಿ ಪ್ರಕೃತಿ ಆದಿವಾಸಿ ಫೌಂಡೇಷನ್ ಟ್ರಸ್ಟ್ ವತಿಯಿಂದ ಮಳಿಗೆಯೊಂದನ್ನು ತೆರೆಯಲಾಗುತ್ತಿದೆ. ಈ ಬಾರಿ ಎಂದಿನಂತೆ ಬೊಂಬು ಬಿರಿಯಾನಿ ಜೊತೆಗೆ ಕಾಡು ಸೊಪ್ಪಿನ ಪಲ್ಯ ಪ್ರಮುಖ ಆಕರ್ಷಣೆಯಾಗಲಿವೆ ಎಂದು ಟ್ರಸ್ಟ್ ಅಧ್ಯಕ್ಷ ಎಂ.ಕೃಷ್ಣಯ್ಯ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2014 ರಿಂದಲೂ ತಮ್ಮ ಟ್ರಸ್ಟ್ ಇಲ್ಲಿ ತೆರೆಯುವ ಮಳಿಗೆ ಅಪಾರ ಜನಪ್ರಿಯತೆ ಕಂಡಿದೆ ಈ ಬಾರಿ ಪಲ್ಯ ಸೊಪ್ಪು, ಮಾಗಡೆ ಸೊಪ್ಪು, ಜಾಗಡಿ ಸೊಪ್ಪು, ಆಲೆ ಸೊಪ್ಪು, ಗಣಿಕೆ ಸೊಪ್ಪುಗಳನ್ನು ಒಳಗೊಂಡ ವಿಶೇಷ ಪಲ್ಯ ಆಹಾರ ಪ್ರಿಯರಿಗೆ ಲಭ್ಯವಾಗಲಿದೆ. ಇದರ ಬೆಲೆ ಒಂದು ಪ್ಲೇಟ್‌ಗೆ 50 ರೂ. ಇರಲಿದೆ. ಇವು ನೈಸರ್ಗಿಕವಾಗಿ ಕಾಡಿನಲ್ಲೇ ಬೆಳೆಯುವಂತಹ ಪ್ರೊಟೀನ್‌ಯುಕ್ತ ಸೊಪ್ಪುಗಳು. ಇನ್ನು ತುಂಬೆ ಸೊಪ್ಪನ್ನು ಹಾವು ಕಡಿತಕ್ಕೂ ಆದಿವಾಸಿಗಳು ಔಷಧವಾಗಿ ಬೆಳೆಸುತ್ತಾರೆ. ಇವುಗಳ ಸೇವನೆಯಿಂದ ರೋಗ ನಿರೋಧಕ ಶಕ್ತಿ ಹೆಚ್ಚಾಗುವುದಲ್ಲದೆ, ಆರೋಗ್ಯವೂ ಉತ್ತಮವಾಗುತ್ತದೆ ಎಂದು ವಿವರಿಸಿದರು.

ಮಳಿಗೆಯ ಜನಪ್ರಿಯ ಆಹಾರವಾದ ಬೊಂಬು ಬಿರಿಯಾನಿ ಈ ಬಾರಿಯೂ ಇರಲಿದ್ದು, ಈ ಬಾರಿ ನಾಟಿಕೋಳಿ ಬೊಂಬು ಬಿರಿಯಾನಿ ಉಣ ಬಡಿಸಲಾಗುವುದು. ಇದಕ್ಕೆ ಉತ್ತೇಜನ ಸಿಕ್ಕಿದರೆ ನಾಟಿ ಕೋಳಿ ಬಳಕೆ ಮುಂದುವರೆಸಲಾಗುವುದು. ಕಾಡು ಕೋಳಿ ಹಿಡಿಯಲು ಅರಣ್ಯ ಇಲಾಖೆಯಲ್ಲಿ ಅವಕಾಶ ಇಲ್ಲದಿರುವುದರಿಂದ ಬುಡಕಟ್ಟು ಜನರು ಸಾಕಿದ ನಾಟಿ ಕೋಳಿಯಿಂದಲೇ ಬೊಂಬು ಬಿರಿಯಾನಿ ಸಿದ್ಧಪಡಿಸಲಾಗುವುದು. ಇದಕ್ಕೆ ಮಸಾಲೆಯನ್ನು ಸಹ ಅರಣ್ಯದಲ್ಲಿ ಬೆಳೆದ ಸೊಪ್ಪು ಮೊದಲಾದವುಗಳಿಂದಲೇ ಸಿದ್ಧಪಡಿಸಲಾಗುವುದು. ಬೊಂಬಿನಲ್ಲಿ ತುಂಬಿ, ಸೌದೆಯಲ್ಲಿ ಬೇಯಿಸಿ ಪೂರೈಸಲಾಗುವುದು. ಇದರ ಬೆಲೆ ಒಂದು ಪ್ಲೇಟ್‌ಗೆ 200 ರೂ. ಆದಿವಾಸಿ ಗಿಡಮೂಲಿಕೆ ತಜ್ಞೆ ನಾಗಮ್ಮ ಅವರು ಸಹ ಹಾಜರಿದ್ದು, ವಿವಿಧ ಕಾಯಿಲೆಗಳಿಗೆ ಆದಿವಾಸಿಗಳಲ್ಲಿ ಜನಪ್ರಿಯವಾಗಿರುವ ಔಷಧಿ ನೀಡಲಿದ್ದು, ನಗರದ ಜನತೆ ಪ್ರಯೋಜನ ಪಡೆಯಬೇಕೆಂದು ಮನವಿ ಮಾಡಿದರು.

ಮೇಳದಲ್ಲಿ ನಳ್ಳಿ ಸಾರು, ಮುದ್ದೆ ಒಂದು ಪ್ಲೇಟ್‌ಗೆ 100 ರೂ., ಕಾಡುಗೆಣಸು ಜೇನುತುಪ್ಪ ಮಿಶ್ರಾ ಪ್ಲೇಟ್‌ಗೆ 50 ರೂ., ಬಿದಿರಕ್ಕಿ ಪಾಯಸ 50 ರೂ., ಮಾಕಳಿ ಬೇರಿನ ಟೀ 20 ರೂ., ನೀಡಿ ಸೇವಿಸಬಹುದಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕುಮಾರ್, ನಾಗಮ್ಮ, ಇನ್ನಿತರರು ಉಪಸ್ಥಿತರಿದ್ದರು.

ಸಿಡಿಮದ್ದು ಅಂತಿಮ ತಾಲೀಮು ಯಶಸ್ವಿ

ಭಾರೀ ಸದ್ದಿಗೂ ಮಿಸುಕಾಡದ ಗಜ, ಅಶ್ವಪಡೆ


ಗಜಪಡೆಯ ಮುಂದೆ ಸಿಡಿಮದ್ದು ತಾಲೀಮು. ಚಿತ್ರ: ಎಂ.ಎನ್.ಲಕ್ಷ್ಮೀ ನಾರಾಯಣ ಯಾದವ್



ಸಿಡಿಮದ್ದು ತಾಲೀಮಿಗೆ ದಸರಾ ಗಜಪಡೆಯನ್ನು ದಸರಾ ವಸ್ತು ಪ್ರದರ್ಶನದ ಆವರಣಕ್ಕೆ ಕರೆತರುತ್ತಿರುವುದು.

ಮೈಸೂರು,ಸೆ.23(ಎಂಟಿವೈ)- ನವರಾತ್ರಿ ಆರಂಭಕ್ಕೆ ಇನ್ನು ಎರಡೇ ದಿನ ಬಾಕಿ ಇದೆ. ಈ ಹಿನ್ನೆಲೆಯಲ್ಲಿ ಶುಕ್ರವಾರ ಜಂಬೂ ಸವಾರಿಯಲ್ಲಿ ಪಾಲ್ಗೊಳ್ಳುವ ಗಜಪಡೆ ಹಾಗೂ ಅಶ್ವಪಡೆಗೆ ಮೈಸೂರು ದಸರಾ ವಸ್ತು ಪ್ರದರ್ಶನ ಆವರಣದಲ್ಲಿರುವ ಪಾರ್ಕಿಂಗ್ ಸ್ಥಳದಲ್ಲಿ ಅಂತಿಮ ಹಂತದ ಸಿಡಿಮದ್ದು ತಾಲೀಮನ್ನು ಯಶಸ್ವಿಯಾಗಿ ನಡೆಸಲಾಯಿತು.

ಆ ಮೂಲಕ ಪ್ರಸಕ್ತ ಸಾಲಿನ ಸಿಡಿಮದ್ದು ತಾಲೀಮು ಪೂರ್ಣಗೊಂಡಿದ್ದು, ಅ.5ರಂದು ಜಂಬೂಸವಾರಿ ದಿನ ಚಿನ್ನದ ಅಂಬಾರಿಗೆ ಪುಷ್ಪಾರ್ಚನೆ ಮಾಡುವ ವೇಳೆ ಫಿರಂಗಿ ದಳದ ಸಿಬ್ಬಂದಿ ಒಂದೇ ನಿಮಿಷದಲ್ಲಿ 21 ಬಾರಿ ಸಿಡಿಮದ್ದು ಸಿಡಿಸಲಿದ್ದಾರೆ.

ಕೋವಿಡ್ ಹಿನ್ನೆಲೆಯಲ್ಲಿ ಎರಡು ವರ್ಷ ಅರಮನೆ ಆವರಣಕ್ಕಷ್ಟೇ ದಸರಾ ಮಹೋತ್ಸವ ಸೀಮಿತಗೊಂಡಿತ್ತು. ಈ ಬಾರಿ ವಿಜೃಂಭಣೆಯಿಂದ ಆಚರಿಸಲು ಉದ್ದೇಶಿಸಿರುವುದರಿಂದ ಜಂಬೂಸವಾರಿ ವೀಕ್ಷಣೆಗೆ ಹೆಚ್ಚಿನ ಜನ ಸೇರುವ ನಿರೀಕ್ಷೆಯಿದೆ. ಈ ಹಿನ್ನೆಲೆಯಲ್ಲಿ ದಸರಾ ಗಜಪಡೆ ಹಾಗೂ ಅಶ್ವಪಡೆ ಜನರ ಸದ್ದುಗದ್ದಲ ಹಾಗೂ ಸಿಡಿಮದ್ದು ಶಬ್ದಕ್ಕೆ ಬೆದರದಂತೆ ಸಜ್ಜುಗೊಳಿಸುವ ನಿಟ್ಟಿನಲ್ಲಿ ಈ ವರ್ಷವೂ ಮೂರು ಬಾರಿ ಸಿಡಿಮದ್ದು ತಾಲೀಮು ನಡೆಸಲಾಗಿದೆ. ಇಂದು ಮಧ್ಯಾಹ್ನ ನಡೆದ ಕೊನೆ ತಾಲೀಮಿನಲ್ಲಿ ದಸರಾ ಗಜಪಡೆಯ 12 ಆನೆ ಹಾಗೂ ಅಶ್ವಪಡೆಯ 34 ಕುದುರೆಗಳು ಭಾರೀ ಸದ್ದಿಗೆ ಅಂಜದೇ ಗಟ್ಟಿತನ ಪ್ರದರ್ಶಿಸಿ, ಗಮನ ಸೆಳೆದವು.

ಅರಮನೆಯ ಕೋಟೆ ಗೋಡೆ ಸೇರಿದಂತೆ ಇತರೆ ಸೂಕ್ಷ್ಮ ನಿರ್ಮಾಣಗಳ ಸುರಕ್ಷತೆ ದೃಷ್ಟಿಯಿಂದ ದಸರಾ ವಸ್ತು ಪ್ರದರ್ಶನದ ಆವರಣದಲ್ಲಿರುವ ಪಾರ್ಕಿಂಗ್ ಸ್ಥಳಕ್ಕೆ ಅಂತಿಮ ತಾಲೀಮು ಸ್ಥಳಾಂತರ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ 12 ಆನೆಗಳನ್ನು ಜಯಮಾರ್ತಾಂಡ ದ್ವಾರ ಬಿಎನ್ ರಸ್ತೆ ಮೂಲಕ ದಸರಾ ವಸ್ತು ಪ್ರದರ್ಶನದ ಮುಖ್ಯ ದ್ವಾರದಿಂದ ಪಾರ್ಕಿಂಗ್ ಸ್ಥಳಕ್ಕೆ ಕರೆತರಲಾಯಿತು ಮೌಂಟೆಡ್ ಪೊಲೀಸ್ ಕಚೇರಿಯಿಂದ ಅಶ್ವಪಡೆಯನ್ನು ಮಹಾತ್ಮಗಾಂಧಿ ರಸ್ತೆ ಮೂಲಕ ಪಾರ್ಕಿಂಗ್ ಸ್ಥಳಕ್ಕೆ ಕರೆತರಲಾಯಿತು.

7 ಫಿರಂಗಿ ಬಳಸಿ 21 ಬಾರಿ ಸಿಡಿಮದ್ದು ಸಿಡಿತ: ನಗರ ಸಶಸ್ತ್ರ ಮೀಸಲು ಪಡೆಯ ನುರಿತ ಸಿಬ್ಬಂದಿಗಳುಳ್ಳ ಫಿರಂಗಿ ದಳದ ಸಿಬ್ಬಂದಿ ಎಂದಿನಂತೆ 7 ಫಿರಂಗಿ ಬಳಸಿ, ಮೂರು ಸುತ್ತಿನಲ್ಲಿ ಒಟ್ಟು 21 ಸಿಡಿಮದ್ದನ್ನು ಸಿಡಿಸಿದರು. ಇಂದು 1 ಕೆಜಿ 400 ಗ್ರಾಂ ಗನ್‌ಪೌಡರ್ ಬಳಸಿ ತಯಾರಿಸಿದ್ದ ಮದ್ದನ್ನು ಬಳಸಲಾಯಿತು.

ತಾಲೀಮಿನಲ್ಲಿ ಅಂಬಾರಿ ಆನೆ ಅಭಿಮನ್ಯು ನೇತೃತ್ವದಲ್ಲಿ ಗಜಪಡೆಯ ಸದಸ್ಯರಾದ ಅರ್ಜುನ, ಕಾವೇರಿ, ವಿಜಯ, ಗೋಪಾಲಸ್ವಾಮಿ, ಧನಂಜಯ, ಗೋಪಿ, ಭೀಮ, ಮಹೇಂದ್ರ ಶ್ರೀರಾಮ, ಸುಗ್ರೀವ ಹಾಗೂ ಪಾರ್ಥಸಾರಥಿ ಪಾಲ್ಗೊಂಡಿದ್ದವು. ಅಲ್ಲದೆ, ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗುವ 34 ಕುದುರೆಗಳೂ ಪಾಲ್ಗೊಂಡಿದ್ದವು. ಪುತ್ರ ಶ್ರೀ ದತ್ತಾತ್ರೇಯನೊಂದಿಗೆ ಅರಮನೆ ಆವರಣದಲ್ಲಿರುವ ಲಕ್ಷ್ಮೀಗೆ ಜೊತೆಯಾಗಿರುವ ಚೈತ್ರ ತಾಲೀಮಿನಲ್ಲಿ ಪಾಲ್ಗೊಳ್ಳಲಿಲ್ಲ.

ಶಬ್ಧಕ್ಕೆ ಹೊಂದಿಕೊಂಡ ಆನೆಗಳು: ಮೊದಲ ಹಾಗೂ 2ನೇ ತಾಲೀಮಿನಲ್ಲಿ ಬೆದರಿದ್ದ ಹೊಸ ಆನೆಗಳಾದ ಪಾರ್ಥಸಾರಥಿ, ಸುಗ್ರೀವ, ಶ್ರೀರಾಮ, ಇಂದು ಭಾರೀ ಶಬ್ಧಕ್ಕೆ ಹೊಂದಿಕೊಂಡಿರುವಂತೆ ಕಂಡು ಬಂದವು. ಉಳಿದಂತೆ ಅಂಬಾರಿ ಆನೆ ಅಭಿಮನ್ಯು, ಅರ್ಜುನ ಸೇರಿದಂತೆ ಇನ್ನಿತರ ಆನೆಗಳು ಮಿಸುಕಾಡಲಿಲ್ಲ.

ಈ ಸಂದರ್ಭದಲ್ಲಿ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಡಾ.ವಿ.ಕರಿಕಾಳನ್, ಕೆ.ಕಮಲಾ ಕರಿಕಾಳನ್, ಡಿಸಿಪಿ ಗೀತಾ ಪ್ರಸನ್ನ, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ಸೇರಿದಂತೆ ಹಲವರು ಇದ್ದರು.

ಫಲ ದೊರೆತಿದೆ

"ಗಜಪಡೆ, ಅಶ್ವದಳಕ್ಕೆ ಅಂತಿಮ ಹಂತದ ಕುಶಾಲತೋಪು ತಾಲೀಮನ್ನು ಯಶಸ್ವಿಯಾಗಿ ನಡೆಸಲಾಗಿದೆ ಕೊನೆ ತಾಲೀಮಿನಲ್ಲಿ ಯಾವ ಆನೆಗೂ ಬೇಡಿ ಹಾಕಿರಲಿಲ್ಲ ಯಾವುದನ್ನೂ ಮರಕ್ಕೆ ಕಟ್ಟಿ ಹಾಕಿರಲಿಲ್ಲ. ಅಲ್ಲದೇ 21 ಸುತ್ತು ಸಿಡಿಮದ್ದು ಸಿಡಿದರೂ ಯಾವೊಂದು ಬೆದರಿಲ್ಲ. ಎಲ್ಲವೂ ಶಬ್ಧಕ್ಕೆ ಹೊಂದಿಕೊಂಡಿವೆ. ದಸರಾ ಜಂಬೂ ಸವಾರಿಗೆ ಗಜಪಡೆ ಸನ್ನದ್ಧವಾಗಿದೆ. ಇದುವರೆಗೆ ನಾವು ನೀಡಿರುವ ತರಬೇತಿಗೆ ಫಲ ದೊರೆತಿದೆ.

- ಡಾ.ವಿ. ಕರಿಕಾಳನ್, ಡಿಸಿಎಫ್

"ಗಜಪಡೆ ಹಾಗೂ ಅಶ್ವದಳಕ್ಕೆ 3ನೇ ಹಂತದ ಕುಶಾಲತೋಪು ತಾಲೀಮು ಯಶಸ್ವಿಯಾಗಿ ನಡೆದಿದೆ. ಆನೆಗಳು, ಕುದುರೆಗಳು ಸಿಡಿಮದ್ದಿನ ಸದ್ದಿಗೆ ಹೊಂದಿಕೊಂಡಿವೆ. ದಸರಾ ಉದ್ಘಾಟನೆ ಸೇರಿದಂತೆ ಎಲ್ಲ ಕಾರ್ಯಕ್ರಮಗಳಿಗೂ ಪೊಲೀಸ್ ಇಲಾಖೆ ಸಿದ್ಧತೆ ಕೈಗೊಂಡಿದ್ದು, ಈ ಬಾರಿಯ ದಸರಾಗೆ ವ್ಯಾಪಕ ಭದ್ರತೆ ಮಾಡಲಾಗುತ್ತದೆ.

-ಡಾ.ಚಂದ್ರಗುಪ್ತ, ಮೈಸೂರು ಪೊಲೀಸ್ ಆಯುಕ್ತ

ಅಕ್ರಮ ಮದ್ಯ ಮಾರಾಟ ತಡೆಗೆ ಸಾರ್ವಜನಿಕರ ಸಹಕಾರ ಅಗತ್ಯ

ಉಪವಿಭಾಗಾಧಿಕಾರಿ ವರ್ಣಿತ್ ನೇಗಿ



ಹುಣಸೂರು, ಸೆ.23– ತಾಲೂಕಿನ ಕೆಲ ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟದ ಬಗ್ಗೆ ದೂರುಗಳು ಕೇಳಿ ಬರುತ್ತಿದ್ದು, ಅವುಗಳನ್ನು ತಡೆಗಟ್ಟಲು ಅಬಕಾರಿ ಇಲಾಖೆಗೆ ಸಾರ್ವಜನಿಕರ ಸಹಕಾರ ಅಗತ್ಯ ಎಂದು ಉಪವಿಭಾಗಾಧಿಕಾರಿ ವರ್ಣಿತ್ ನೇಗಿ ಮನವಿ ಮಾಡಿದರು.

ನಗರದ ಉಪವಿಭಾಗಾಧಿಕಾರಿ ಕಚೇರಿಯಲ್ಲಿ ನಡೆದ ಅನುಸೂಚಿತ ಜಾತಿ, ಅನುಸೂಚಿತ ವರ್ಗಗಳ ದೌರ್ಜನ್ಯ ಪ್ರತಿಬಂಧಕ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನ ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟದ ಬಗ್ಗೆ ದೂರುಗಳು ಕೇಳಿ ಬರುತ್ತಿದ್ದು, ಅಬಕಾರಿ ಇಲಾಖೆ ಅಧಿಕಾರಿಗಳು ಎಲ್ಲಾ ಗ್ರಾಮಗಳಿಗೂ ಭೇಟಿ ನೀಡಿ ಅಕ್ರಮ ಮದ್ಯ ಮಾರಾಟ ತಡೆಗಟ್ಟಲು ಸಾಧ್ಯವಿಲ್ಲ. ಹೀಗಾಗಿ ಸಾರ್ವಜನಿಕರು ಅಧಿಕಾರಿಗಳಿಗೆ ಸಹಕರಿಸಬೇಕು. ಅಲ್ಲದೇ ಕುಡಿತದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಮುಖಂಡ ನಿಂಗರಾಜ ಮಲ್ಲಾಡಿ ಮಾತನಾಡಿ, ಫ್ಲೆಕ್ಸ್, ಬ್ಯಾನರ್ ಅಳವಡಿಸಿ ತಿಂಗಳಾದರೂ ತೆರವುಗೊಳಿಸದ ಕಾರಣ ಗ್ರಾಮೀಣ ಭಾಗದಲ್ಲಿ ಗಲಾಟೆ ನಡೆಯುತ್ತಿವೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ವರ್ಣಿತ್ ನೇಗಿ, ಸಾರ್ವಜನಿಕರಿಗೆ ತೊಂದರೆಯಾಗದಂತೆ ಗ್ರಾಪಂ ವ್ಯಾಪ್ತಿಯಲ್ಲಿ ಫ್ಲೆಕ್ಸ್ ಅಳವಡಿಸಲು ಜಾಗ ಗುರುತಿಸಬೇಕು. ಅಲ್ಲದೇ ಫ್ಲೆಕ್ಸ್ ಅಳವಡಿಸಲು ಇಂತಿಷ್ಟು ಹಣ ಹಾಗೂ ದಿನ ನಿಗದಿ ಮಾಡಬೇಕು. ದಿನ ಕಳೆದ ಬಳಿಕ ಫ್ಲೆಕ್ ಅಳವಡಿಸಿದವರೇ ಅದನ್ನು ತೆರವುಗೊಳಿಸುವಂತೆ ಸೂಚಿಸಲು ಗ್ರಾಪಂಗಳಿಗೆ ತಾಪಂ ಇಓ ಆದೇಶ ಹೊರಡಿಸುವಂತೆ ತಿಳಿಸಿದರು. ಹೊಸೂರು ಕುಮಾರ್ ಮಾತನಾಡಿ, ಅರಸು ಕಲ್ಲಹಳ್ಳಿಯಲ್ಲಿ ಕೆಲ ರೈತರು ತಮ್ಮ ಜಮೀನಿಗೆ ಹೋಗಲು ಇನ್ನೊಬ್ಬರ ಜಮೀನಿನ ಮೇಲೆ ಹಾದು ಹೋಗಬೇಕಾಗಿರುವುದರಿಂದ ಗಲಾಟೆ ನಡೆಯುತ್ತಿವೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಎಸಿ ಸ್ಥಳಕ್ಕೆ ತಹಸೀಲ್ದಾರ್, ಡಿವೈಎಸ್ಪಿ ಭೇಟಿ ನೀಡಿ ಕ್ರಮ ಕೈಗೊಳ್ಳಲಿದ್ದಾರೆ ಎಂದು ತಿಳಿಸಿದರು.

ದೌರ್ಜನ್ಯ ಪ್ರಕರಣಗಳಲ್ಲಿ ಸಾಕ್ಷಿದಾರರು ವಾಹನ ಭತ್ಯೆ ಪಡೆಯಲು ಕಂದಾಯ ಇಲಾಖೆಗೆ ಅಲೆಯುವ ಪರಿಸ್ಥಿತಿ ಇದೆ. ವಾಹನ ಭತ್ಯೆಯನ್ನು ಪೊಲೀಸರೇ ನೀಡಿದರೆ ಒಳ್ಳೆಯದು ಎಂದು ಮುಖಂಡರು ತಿಳಿಸಿದಾಗ ಡಿವೈಎಸ್‌ಪಿ ರವಿಪ್ರಸಾದ್ ಮಾತನಾಡಿ, ಸಾಕ್ಷಿದಾರರು ನಿಜ ಸಾಕ್ಷಿ ಹೇಳಿದರೆ ಅಂತಹವರಿಗೆ ವಾಹನ ಭತ್ಯೆ ಕೊಡಿಸಬಹುದು. ಆದರೆ ಕೆಲವರು ಸುಳ್ಳು ಸಾಕ್ಷಿ ಹೇಳುವುದರಿಂದ ಅವರಿಗೆ ಕೊಡಿಸಲು ಸಾಧ್ಯವಿಲ್ಲ ಎಂದರು.

ಸಭೆಯಲ್ಲಿ ಅಶೋಕ್ ಕುಮಾರ್, ನಾಗರಾಜ್, ಉಪವಿಭಾಗ ಮಟ್ಟದ ಕೋಟೆ, ಸರಗೂರು, ಪಿರಿಯಾಪಟ್ಟಣ ಸೇರಿದಂತೆ ಕಂದಾಯ, ಪುರಸಭೆ, ಅಬಕಾರಿ ಸಮಾಜ ಕಲ್ಯಾಣ ಸೇರಿದಂತೆ ಇತರೆ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

ಕಸುವಿನಹಳ್ಳಿ ಪಿಎಸಿಎಸ್‌ಗೆ 5.65 ಲಕ್ಷ ರೂ. ಲಾಭ



ತಗಡೂರು, ಸೆ.23– ರೈತರು ಸಕಾಲಕ್ಕೆ ಸಾಲ ಮರುಪಾವತಿಸಿದ ಕಾರಣ ಕಸುವಿನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘ 5 ಲಕ್ಷ 65 ಸಾವಿರ ರೂ. ಲಾಭ ಗಳಿಸಿದೆ ಎಂದು ಅಧ್ಯಕ್ಷ ಕೆಎನ್.ಚಿನ್ನಸ್ವಾಮಿ ತಿಳಿಸಿದರು.

ನಂಜನಗೂಡು ತಾಲೂಕಿನ ಕಸುವಿನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ನಡೆದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತರಿಗೆ ಈಗಾಗಲೇ 5 ಕೋಟಿಗೂ ಹೆಚ್ಚಿನ ಸಾಲ ವಿತರಿಸಲಾಗಿದೆ. ಈ ಸಾಲಿನಲ್ಲಿ ಸುಮಾರು 47 ಲಕ್ಷ ಸಾಲ ವಿತರಿಸುವ ಗುರಿ ಹೊಂದಲಾಗಿದೆ. ನಮ್ಮ ಸಂಘದ ಎಲ್ಲಾ ಸದಸ್ಯರ ಸಹಕಾರದಿಂದ ಸಂಘವು ಮಾದರಿಯಾಗಿ ಕೆಲಸ ಮಾಡುತ್ತಿದೆ. ರೈತರು ಸಂಘದಿಂದ ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿಸಿದರೆ ಸಂಘವು ಉತ್ತಮ ಲಾಭ ಪಡೆಯಲು ಸಾಧ್ಯವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಸಹಕಾರ ಸಂಘಕ್ಕೆ ಸಹಕಾರ ನೀಡುವ ಮೂಲಕ ಸರ್ಕಾರದ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಆರ್.ಅರುಣ್ ಕುಮಾರ್, ನಿರ್ದೇಶಕರಾದ ಎಸ್.ಪುಟ್ಟಸ್ವಾಮಿ, ಗ್ರಾಪಂ ಸದಸ್ಯ ಹಾಗೂ ನಿರ್ದೇಶಕ ಕೆ.ಎನ್.ಮಲ್ಲೇಶ್, ಮಂಜೇಶ್ ಕುಮಾರ್, ಮಂಜುಳ, ನೀಲಮ್ಮ, ನಡಕೇರಯ್ಯ, ನಾಗರಾಜಚಾರ್, ಕೆ.ಎಂ.ಶಿವಮೂರ್ತಿ, ಸಿದ್ದನಾಯಕ, ಕೆ.ಎಂ.ಶಿವಪ್ಪ, ಸಿಇಓ ಶಿವಕುಮಾರ್, ಕಾಂಗ್ರೆಸ್ ಮುಖಂಡ ರಾಜಶೇಖರಮೂರ್ತಿ, ಸತ್ಯನಾರಾಯಣಸ್ವಾಮಿ ಇದ್ದರು.

1700 ಹಳೇ ಸದಸ್ಯರಿಗೆ ಸದಸ್ಯತ್ವ ನೀಡದೇ ಕಾನೂನು ಉಲ್ಲಂಘನೆ

ಟಿಎಪಿಸಿಎಂಎಸ್ ವಿರುದ್ಧ ಸಹಕಾರಿ ಇಲಾಖೆಗೆ ದೂರು ಸಲ್ಲಿಸುವೆ

ಯಾಚೇನಹಳ್ಳಿ ಪಿಎಸಿಎಸ್ ಅಧ್ಯಕ್ಷ, ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ



ತಿ.ನರಸೀಪುರ, ಸೆ.23– ಪಟ್ಟಣದ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ(ಟಿಎಪಿಸಿಎಂಎಸ್)ದಲ್ಲಿ 1700 ಹಳೇ ಸದಸ್ಯರಿಗೆ ಸದಸ್ಯತ್ವ ನೀಡದೇ ಕಾನೂನು ಉಲ್ಲಂಘಿಸಿರುವ ಆಡಳಿತ ಮಂಡಳಿ ವಿರುದ್ಧ ಸಹಕಾರಿ ಇಲಾಖೆಯಲ್ಲಿ ದೂರು ಸಲ್ಲಿಸಲಾಗುವುದು ಎಂದು ಯಾಚೇನಹಳ್ಳಿ ಪಿಎಸಿಎಸ್ ಅಧ್ಯಕ್ಷ ಹಾಗೂ ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಟಿಎಪಿಸಿಎಂಎಸ್‌ನಲ್ಲಿ ತಮಗೆ ಬೇಕಾದವರಿಗೆ ಮಾತ್ರ ಸದಸ್ಯತ್ವ ನೀಡಿ, ಚುನಾವಣೆಗೆ ಅನುಕೂಲ ಮಾಡಿಕೊಂಡಿದ್ದಾರೆ. ಗ್ರಾಮವೊಂದರಲ್ಲಿ 120 ಮಂದಿ ಖಾತೆದಾರರಿದ್ದು, 450 ಮಂದಿಗೆ ಸದಸ್ಯತ್ವ ನೀಡುವ ಮೂಲಕ ಭಾರೀ ಅವ್ಯವಹಾರ ಮಾಡಿದ್ದಾರೆ. ಅಲ್ಲದೇ 1700 ಹಳೇ ಸದಸ್ಯರಿಗೆ ಕಾಯಿದೆ ಪ್ರಕಾರ ಸದಸ್ಯತ್ವ ನೀಡಿಲ್ಲ. ಈ ಸಂಬಂಧ ಸಹಕಾರ ಇಲಾಖೆಗೆ ದೂರು ನೀಡಲಾಗುತ್ತದೆ. ಅಲ್ಲದೇ ಇನ್ನೊಂದು ತಿಂಗಳೊಳಗಾಗಿ ಸದಸ್ಯತ್ವ ನೀಡದಿದ್ದರೆ ಸಹಕಾರ ಸಂಘದ ಮುಂದೆ ಬೃಹತ್ ಪ್ರತಿಭಟನೆ ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ಕಳೆದ 20 ವರ್ಷಗಳಿಂದ ಸಂಸ್ಥೆ ಕೇವಲ ಠೇವಣಿ ಇಡುವ ಕಾರ್ಯಕ್ಕೆ ಮೀಸಲಾಗಿದೆ. ತಾಲೂಕಿನ ಜನತೆಗೆ ನೀಡಬೇಕಾದ ಸೌಲಭ್ಯ ಕೊಡಲು ಸಂಸ್ಥೆ ವಿಫಲವಾಗಿದೆ. ಬರೀ ರಸಗೊಬ್ಬರ ಮಾರಾಟದಿಂದಲೇ 10 ರಿಂದ 15 ಕೋಟಿ ರೂ. ವ್ಯವಹಾರ ಮಾಡಬಹುದಿತ್ತು. ಅಲ್ಲದೇ ಸಗಟು ವ್ಯಾಪಾರ ಮಾಡಿ ಲಾಭ ಗಳಿಸುವ ಎಲ್ಲಾ ಅವಕಾಶಗಳು ಇತ್ತಾದರೂ ಆಡಳಿತ ಮಂಡಳಿ ಪಿಡಿಎಸ್ ವ್ಯವಸ್ಥೆ ಕೈ ಬಿಟ್ಟಿದೆ. ಕೇಂದ್ರ ಸರ್ಕಾರ ಜನೌಷಧಿ ಕೇಂದ್ರಗಳನ್ನು ತಾಲೂಕು ಮಟ್ಟಕ್ಕೆ ವಿಸ್ತರಿಸಿದೆ. ಆದರೆ ಅದರ ಮಳಿಗೆ ಹಾಗೂ ಶುದ್ಧ ಕುಡಿಯುವ ನೀರಿನ ಘಟಕ ತೆರೆಯದೇ ನಿರ್ಲಕ್ಷ್ಯ ವಹಿಸಿದೆ ಎಂದರು.

ತಾಲೂಕಿನ ರೈತರು ಹೆಚ್ಚಾಗಿ ಹೈನುಗಾರಿಕೆ ಅವಲಂಬಿಸಿದ್ದು, ಮಳಿಗೆ ತೆರೆದು ಪಶು ಆಹಾರ ಮಾರಾಟ ಮಾಡಬಹುದಿತ್ತು. ಇದರಿಂದ ಅನೇಕ ಜನರಿಗೆ ಉದ್ಯೋಗ ಕೊಡಬಹುದಿತ್ತು. ಆದರೆ ಇದ್ಯಾವುದನ್ನು ಮಾಡದ ಆಡಳಿತ ಮಂಡಳಿ ಸಂಘದ ಆವರಣದಲ್ಲಿ ನೀರು ತುಂಬಿದೆ ಎಂಬ ಕಾರಣ ಹೇಳಿ ಮಣ್ಣು ಭರ್ತಿ ಮಾಡಲು ಇಲಾಖೆ ಅನುಮತಿ ಪಡೆಯದೇ, ಪತ್ರಿಕಾ ಜಾಹೀರಾತು ನೀಡದೇ ಬ್ಯಾಂಕ್‌ನಿಂದ 18 ಲಕ್ಷ ರೂ. ಡ್ರಾ ಮಾಡಿ ಹಣ ದುರುಪಯೋಗ ಪಡಿಸಿಕೊಂಡಿದೆ ಎಂದು ಆರೋಪಿಸಿದರು. ಗೋಷ್ಠಿಯಲ್ಲಿ ಯಾಚೇನಹಳ್ಳಿ ಸೋಮಶೇಖರ್, ವೈ.ಸಿ.ಬೋರೇಗೌಡ ಇತರರಿದ್ದರು.

ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಶ್ರಮಿಸಿ



ಕೆ.ಆರ್.ನಗರ, ಸೆ.23– ಪಕ್ಷವನ್ನು ತಳಮಟ್ಟದಿಂದ ಸಂಘಟಿಸುವ ಮೂಲಕ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಶ್ರಮಿಸುವಂತೆ ಪಂಚಾಯತ್ ರಾಜ್ ಸಂಘಟನೆ ಜಿಲ್ಲಾಧ್ಯಕ್ಷ ಮಲ್ಲೇಶ್ ಕೋಟೆ ಪದಾಧಿಕಾರಿಗಳಿಗೆ ಕರೆ ನೀಡಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ರಾಜೀವ್‌ಗಾಂಧಿ ಪಂಚಾಯತ್ ರಾಜ್ ಸಂಘಟನೆ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸದಸ್ಯರು ಪಂಚಾಯಿತಿವಾರು ಪಕ್ಷ ಸಂಘಟಿಸಿ ಜನತೆಗೆ ಜೆಡಿಎಸ್ ಶಾಸಕರ ಆಡಳಿತ ವೈಖರಿ ತಿಳಿಸುವ ಮೂಲಕ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಕಾರಣ ಕರ್ತರಾಗಬೇಕು ಎಂದರು.

ಬಿಜೆಪಿ ಶ್ರೀಮಂತರು ಮತ್ತು ಉದ್ಯಮಿಗಳ ಪರ ಆಡಳಿತ ನಡೆಸುತ್ತಿದ್ದು, ಬಡವರು ಮತ್ತು ಹಿಂದುಳಿದ ವರ್ಗಗಳಿಗೆ ಮುಳ್ಳಾಗಿದೆ. ಉತ್ತಮ ಜೀವನ ನಡೆಸಲು ಕಾಂಗ್ರೆಸ್ ಪಕ್ಷ ಮತ್ತೆ ಅಧಿಕಾರಕ್ಕೆ ಬರಬೇಕು. ಆದ್ದರಿಂದ ಬಿಜೆಪಿ ಪಕ್ಷದ 'ಬಿ' ಟೀಂ ಆಗಿರುವ ಜೆಡಿಎಸ್ ಪಕ್ಷಕ್ಕೆ ಮುಸ್ಲಿಂ ಸಮುದಾಯ ಸೇರಿದಂತೆ ಹಿಂದುಳಿದ ವರ್ಗಗಳು ಯಾವುದೇ ಕಾರಣಕ್ಕೂ ಮತ ನೀಡಬೇಡಿ ಎಂದು ಮನವಿ ಮಾಡಿದರು.

ಜೆಡಿಎಸ್ 25 ರಿಂದ 30 ಕ್ಷೇತ್ರಗಳಲ್ಲಿ ಗೆಲ್ಲುವ ಅವಕಾಶಗಳಿದ್ದು ಮಂಡ್ಯ ಜಿಲ್ಲೆಯಲ್ಲೂ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲುವ ಅವಕಾಶಗಳು ಹೆಚ್ಚಾಗಿವೆ ಎಂದ ಅಧ್ಯಕ್ಷರು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದು ಕೆ.ಆರ್.ನಗರ ಕ್ಷೇತ್ರದ ಅಭಿವೃದ್ಧಿಗಾಗಿ ಡಿ.ರವಿಶಂಕರ್ ಅವರನ್ನು ಬೆಂಬಲಿಸಬೇಕು ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಡಿ.ರವಿಶಂಕರ್ ಮಾತನಾಡಿದರು. ಉಪಾಧ್ಯಕ್ಷ ಮಂಜುನಾಥ್, ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಮಾಜಿ ಸದಸ್ಯ ನಟರಾಜ್, ಪುರಸಭೆ ಮಾಜಿ ಅಧ್ಯಕ್ಷ ನರಸಿಂಹರಾಜು, ಸಂಘಟನೆಯ ತಾಲೂಕು ಅಧ್ಯಕ್ಷ ವಾಸಿಂಪಾಷ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹ ದೇವ್, ಉದಯಶಂಕರ್, ವಕ್ತಾರ ಸೈಯದ್ ಜಾಬೀರ್, ಯುವ ಕಾಂಗ್ರೆಸ್ ಅಧ್ಯಕ್ಷ ಆನಂದ್, ಮುಖಂಡರಾದ ನಾಗೇಂದ್ರ, ರಾಜೇಗೌಡ, ಮುಸ್ತಫ್, ಗೋವಿಂದೇಗೌಡ ಮತ್ತಿತರರಿದ್ದರು.



ನಂಜನಗೂಡು ತಾಲೂಕಿನ ಮಾದನಹಳ್ಳಿ ಗ್ರಾಮದ ರೈತರಿಗೆ ಅರಣ್ಯ ಇಲಾಖೆಯಿಂದ ನೀಡಿದ ಸಸಿಗಳನ್ನು ಕೃಷಿ ಟ್ರಾಕ್ಟರ್ ಮಾಲೀಕರ ಸಂಘದ ತಾಲೂಕು ಅಧ್ಯಕ್ಷ ಮೂರ್ತಿ ವಿತರಿಸಿದರು. ಈ ವೇಳೆ ದೀಪಕ್, ರವಿ ಸೇರಿದಂತೆ ಇತರರಿದ್ದರು.

ಮುಳ್ಳೂರು ಶಾಲೆಗೆ ಮಂಜುನಾಥ್ ಎಸ್‌ಡಿಎಂಸಿ ಅಧ್ಯಕ್ಷ



ಸರಗೂರು, ಸೆ.23– ತಾಲೂಕಿನ ಮುಳ್ಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎಸ್‌ಡಿಎಂಸಿ ಅಧ್ಯಕ್ಷರಾಗಿ ಎಂ.ಮಂಜುನಾಥ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶಾಲೆ ಆವರಣದಲ್ಲಿ ನಡೆದ ಸಭೆಯಲ್ಲಿ ಎಸ್‌ಡಿಎಂಸಿ ನೂತನ ಅಧ್ಯಕ್ಷರಾಗಿ ಎಂ.ಮಂಜುನಾಥ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ನಾಗರಾಜು, ಸದಸ್ಯರಾಗಿ ಜೀವಿಕಾ ಮಹೇಶ್, ಸುರೇಶ್, ನಂದೀಶ್, ಮುದ್ದುಮಾದಶೆಟ್ಟಿ, ಚೆನ್ನನಾಯಕ, ಚಿನ್ನಸ್ವಾಮಿ, ನಾಗರಾಜು, ಶಿಶುಪಾಲ, ಶಿವನಂಜಮ್ಮ, ಸುಮಾ, ಮಮತಾ, ರೂಪ, ಪ್ರೇಮಾ, ದೇವಮ್ಮ, ನಾಗರತ್ನ, ಕೆ.ಡಿ.ಪವಿತ್ರಾ, ಎನ್.ಸುರೇಖಾ ಆಯ್ಕೆಯಾಗಿದ್ದಾರೆ. ಸಭೆಯಲ್ಲಿ ಪೋಷಕರಾದ ತಾಪಂ ಮಾಜಿ ಅಧ್ಯಕ್ಷ ರವಿಕುಮಾರ್, ಮುಖಂಡರಾದ ಎಂ.ಎನ್.ಚಂದ್ರಪ್ಪ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಶಿವಣ್ಣ, ಗೋಪಾಲರಾಜು, ಮಹದೇವಸ್ವಾಮಿ ಸೇರಿದಂತೆ ಶಾಲಾ ಸಿಬ್ಬಂದಿ ಹಾಜರಿದ್ದರು.

ಪ್ರಧಾನಿ ಮೋದಿ ಹುಟ್ಟುಹಬ್ಬ ಹಿನ್ನೆಲೆ

ಶಾಲಾ ಮಕ್ಕಳಿಗೆ ನೋಟ್‌ಬುಕ್, ಬ್ಯಾಗ್ ವಿತರಣೆ



ಬೈಲಕುಪ್ಪೆ ಸೆ.23– ಪ್ರಧಾನಿ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಕಳೆದ 8 ವರ್ಷಗಳಿಂದ ದೇಶದಲ್ಲಿ ಉತ್ತಮವಾಗಿ ಆಡಳಿತ ನಡೆಸುತ್ತಿದೆ ಎಂದು ಮೈಸೂರು ಜಿಲ್ಲಾ ಬಿಜೆಪಿ ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್ ತಿಳಿಸಿದರು.

ಪ್ರಧಾನಿ ಮೋದಿ ಜನ್ಮದಿನದ ಪ್ರಯುಕ್ತ ಪಿರಿಯಾಪಟ್ಟಣ ತಾಲೂಕು ಬಿಜೆಪಿ ಘಟಕದಿಂದ ಚೆನ್ನಕಾವಲು ಹಾಗೂ ಮರಡಿಯೂರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ನೋಟ್‌ಬುಕ್ ಹಾಗೂ ಬ್ಯಾಗ್ ವಿತರಿಸಿ ಅವರು ಮಾತನಾಡಿದರು. ಬಿಜೆಪಿ ತಾಲೂಕು ಅಧ್ಯಕ್ಷ ರಾಜೇಗೌಡ ಮಾತನಾಡಿ, ಬಿಜೆಪಿ ಬಡವರ ಹಾಗೂ ದೀನ ದಲಿತರ ಬಗ್ಗೆ ಕಾಳಜಿ ಹೊಂದಿರುವ ಪಕ್ಷವಾಗಿದೆ. ದ್ರೌಪದಿ ಮುರ್ಮು ರಾಷ್ಟ್ರಪತಿಯಾದ ಮೇಲೆ ಕ್ಷಯರೋಗ ಮುಕ್ತ ಮಾಡುವ ಶಪಥ ಮಾಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಚಂದ್ರು, ದರ್ಕಸ್ ಕಮಿಟಿ ಸದಸ್ಯ ಲೋಕಪಾಲಯ್ಯ, ಶಾಲೆ ಮುಖ್ಯೋಪಾಧ್ಯಾಯ ಪುಟ್ಟಸ್ವಾಮಿ, ಎಸ್‌ಡಿಎಂಸಿ ಅಧ್ಯಕ್ಷ ಹರೀಶ್, ಬಿಜೆಪಿ ತಾಲೂಕು ಉಪಾಧ್ಯಕ್ಷ ಪ್ರವೀಣ್‌ಶೆಟ್ಟಿ, ಮುಖಂಡರಾದ ನಟರಾಜು, ಪುಟ್ಟಿ, ಜಿಲ್ಲಾ ಮೋರ್ಚಾ ಮಹಿಳಾ ಸಂಘ, ಗ್ರಾಮಸ್ಥರಾದ ರಾಜು, ಶಿವಣ್ಣ, ವಿದ್ಯಾರ್ಥಿಗಳು ಇದ್ದರು.

ನೇಮಕ



ಮಲ್ಕುಂಡಿ, ಸೆ.23– ಜಿಲ್ಲೆ ಬಿಜೆಪಿ ಗ್ರಾಮಾಂತರ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ನಂಜನಗೂಡು ತಾಲೂಕಿನ ಕಪ್ಪಸೋಗೆ ಗ್ರಾಮದ, ನಲ್ಲಿತಾಳಪುರ ಪಿಎಸಿಎಸ್ ಅಧ್ಯಕ್ಷರವೀಂದ್ರ ಅವರನ್ನು ನೇಮಕ ಮಾಡಲಾಗಿದೆ.

ಬಡ ಜನರ ಆರ್ಥಿಕಾಭಿವೃದ್ಧಿಗಾಗಿ ಸೊಸೈಟಿ ಸ್ಥಾಪನೆ



ನಂಜನಗೂಡು, ಸೆ.23– ಬಡ ಜನರಿಗೆ ಹಣಕಾಸು ನೆರವು ನೀಡಿ ಅವರನ್ನು ಆರ್ಥಿಕವಾಗಿ ಸದೃಢಗೊಳಿಸುವ ಉದ್ದೇಶದಿಂದ ವೀರಶೈವ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಸ್ಥಾಪಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಎನ್.ಸಿ.ಬಸವಣ್ಣ ತಿಳಿಸಿದರು.

ನಗರದ ಶ್ರಾವಣ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ವೀರಶೈವ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಂಘ ಲಾಭ ಕಾಣಲು ಎಲ್ಲಾ ಸದಸ್ಯರ ಸಹಕಾರ ಮುಖ್ಯ. ಬಡ ಜನರಿಗೆ ಸೌಲಭ್ಯಗಳನ್ನು ದೊರಕಿಸಿ ಕೊಡುವ ನಿಟ್ಟಿನಲ್ಲಿ ಸಂಘದ ಸದಸ್ಯರು ಶ್ರಮಿಸಬೇಕಿದೆ ಎಂದರು. 2007ರಲ್ಲಿ ಸಂಘ ಪ್ರಾರಂಭಿಸಿದ ಹಿರಿಯ ವಕೀಲರಾದ ಹಾಗೂ ಸಂಸ್ಥಾಪಕ ಬಿ.ಮಹದೇವಪ್ಪ ಮತ್ತು ಕೆ.ವಿ.ಶಿವಕುಮಾರ್ ಅವರನ್ನು ಇದೇ ವೇಳೆ ಸನ್ಮಾನಿಸಲಾಯಿತು.

ಈ ಸಂದರ್ಭ ಉಪಾಧ್ಯಕ್ಷ ಎಂ.ವಿ. ಶಿವಕುಮಾರ್, ಕಾರ್ಯದರ್ಶಿ ಬಸಪ್ಪ, ಕೆ.ವಿ.ಶಿವಕುಮಾರ್, ಜಿ.ಚನ್ನಬಸಪ್ಪ, ಡಿ.ಎಸ್.ಕೆಂಡಗಣ್ಣಸ್ವಾಮಿ, ಎನ್.ವಿ.ವಿನಯ್ ಕುಮಾರ್, ಎನ್.ಮಹೇಶ್, ಮಂಜುಳ, ಶಾಂತಕುಮಾರಿ, ಗೀತಾದೇವಿ ಇತರರು ಹಾಜರಿದ್ದರು.

ರೈತರು ಒಕ್ಕೂಟಕ್ಕೆ ಗುಣಮಟ್ಟದ ಹಾಲು ನೀಡಿ

ಮೈಮುಲ್ ಮಾಜಿ ಅಧ್ಯಕ್ಷ ಓಂಪ್ರಕಾಶ್ ಮನವಿ



ತಿ.ನರಸೀಪುರ, ಸೆ.23– ರೈತರು ಒಕ್ಕೂಟಕ್ಕೆ ಗುಣಮಟ್ಟದ ಹಾಲನ್ನು ನೀಡುವಂತೆ ಮೈಮುಲ್ ಮಾಜಿ ಅಧ್ಯಕ್ಷ ಓಂಪ್ರಕಾಶ್ ಮನವಿ ಮಾಡಿದರು.

ತಾಲೂಕಿನ ಮಾಕನಹಳ್ಳಿಯಲ್ಲಿ ನಡೆದ ಹಾಲು ಉತ್ಪಾದಕರ ಸಹಕಾರ ಸಂಘದ ಸರ್ವ ಸದಸ್ಯರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಇಲ್ಲಿನ ಸಹಕಾರ ಸಂಘಕ್ಕೆ ರೈತರು ನಿತ್ಯ 800 ಲೀ. ಹಾಲನ್ನು ಹಾಕುವ ಮೂಲಕ ಸಂಘದ ಬೆಳವಣಿಗೆಗೆ ಸಹಕರಿಸಿದ್ದಾರೆ. ಹಾಲಿನ ಗುಣಮಟ್ಟ ಸರಿ ಇಲ್ಲದಿದ್ದರೆ ಸ್ಥಳೀಯ ಮಾರಾಟ ಕಷ್ಟವಾಗುತ್ತದೆ. ಜಿಲ್ಲೆಯ ರೈತರು ಒಕ್ಕೂಟಕ್ಕೆ ಉತ್ತಮವಾಗಿ ಸ್ಪಂದಿಸಿದ್ದಾರೆ. ತಿ.ನರಸೀಪುರ ತಾಲೂಕಿನಲ್ಲಿ 1000 ಸಂಘಗಳಿದ್ದು, ಬಹುತೇಕ ಎಲ್ಲಾ ಸಂಘಗಳು ಲಾಭದಲ್ಲಿ ಮುನ್ನಡೆಯುತ್ತಿದ್ದು, ಬೆರಳೆಣಿಕೆ ಸಂಘಗಳು ಮಾತ್ರ ನಷ್ಟದಲ್ಲಿವೆ. ರೈತರು ಒಕ್ಕೂಟದೊಂದಿಗೆ ಸ್ಪಂದಿಸಿದಲ್ಲಿ ಒಕ್ಕೂಟ ಸೇರಿದಂತೆ ರೈತರೂ ಸಹ ಆರ್ಥಿಕಾಭಿವೃದ್ಧಿ ಹೊಂದಬಹುದು ಎಂದರು.

ಮೈಮುಲ್ ನಿರ್ದೇಶಕ ಚೆಲುವರಾಜು ಮಾತನಾಡಿ, ಡೈರಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸಲು ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಪಾತ್ರ ಮುಖ್ಯ. ಸಹಕಾರಿ ತತ್ವದ ಯಶಸ್ಸು ಹೊಂದಾಣಿಕೆ ಮೇಲೆ ಅವಲಂಬಿತವಾಗಿರುತ್ತದೆ. ಸಂಘದ ಸದಸ್ಯರಿಗೆ ವಿಶ್ವಾಸ ಮೂಡಿಸಲು ಆಡಳಿತದಲ್ಲಿ ಪಾರದರ್ಶಕತೆ ಮುಖ್ಯ. ಸಕಾಲಕ್ಕೆ ಸರ್ವ ಸದಸ್ಯರ ಸಭೆ ನಡೆಸಿ ಲೆಕ್ಕಪತ್ರ ಮಂಡಿಸಬೇಕು. ಇದರಿಂದ ಸಂಘವು ಲಾಭದಾಯಕವಾಗಿ ನಡೆಯುತ್ತದೆ ಎಂದರು.

ಹಾಲು ಒಕ್ಕೂಟದ ಮಾರ್ಗ ವಿಸ್ತರಣಾಧಿಕಾರಿ ಆರ್.ಪ್ರಮೋದ್ ಸಂಘದ ವಾರ್ಷಿಕ ವರದಿ ಮಂಡಿಸಿ ಸಂಘವು ಪ್ರಸಕ್ತ ಸಾಲಿನಲ್ಲಿ 3,24,566 ರೂ. ನಿವ್ವಳ ಲಾಭ ಗಳಿಸಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಅಲ್ಲದೇ 1,22 ಲಕ್ಷ ರೂ. ಸಿಬ್ಬಂದಿ ವೇತನ ನೀಡಲಾಗಿದೆ. ಸಂಘದ ಸದಸ್ಯರಿಗೆ ಬೋನಸ್ ಹಣ ನೀಡಲಾಗುತ್ತದೆ ಎಂದರು.

ವಿಸ್ತರಣಾಧಿಕಾರಿ ದಿವ್ಯಶ್ರೀ, ಸಂಘದ ಅಧ್ಯಕ್ಷ ಎಂ.ಕೆ.ಮಹೇಶ್ ಮಾತನಾಡಿ, ಸಹಕಾರ ಸಂಘದಿಂದ ಉತ್ಪಾದಕರಿಗೆ ದೊರಕಿಸಿಕೊಡಬಹುದಾದ ಸವಲತ್ತುಗಳ ಬಗ್ಗೆ ವಿವರ ನೀಡಿದರು.

ಉಪಾಧ್ಯಕ್ಷ ರಾಜೇಂದ್ರ ಪ್ರಸಾದ್, ನಿರ್ದೇಶಕರಾದ ಸೋಮಲಿಂಗು, ಎಂ.ಡಿ.ಚನ್ನೇಗೌಡ, ಕೆ.ಮಹದೇವಸ್ವಾಮಿ, ಎಂ.ಸಿ.ಪ್ರದೀಪ್, ಮಾಯಿಗೌಡ, ನಿರ್ಮಲ ರಮೇಶ್, ಸವಿತಾ ನಟರಾಜು, ಕಾರ್ಯದರ್ಶಿ ಎಂ.ಪಿ.ಮಹೇಶ್, ಹಾಲು ಪರೀಕ್ಷಕ ಎಂ.ನಾಗೇಂದ್ರ, ಸಹಾಯಕ ಗೋವಿಂದೇಗೌಡ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.10.05ಕ್ಕೆ, ಮ.1.05ಕ್ಕೆ, ಕೃಷ್ಣ ವೃಂದ ವಿಹಾರಿ (ತೆ): ಸಂ.4.20ಕ್ಕೆ, ಅವತಾರ್ (3ಡಿ)(ಇಂ): ರಾ.7ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಚುಪ್ (ಹಿಂ): ಬೆ.10.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಲಕ್ಕಿಮ್ಯಾನ್ (ಕ): ಮ.1.15ಕ್ಕೆ, ಸಂ.4.15ಕ್ಕೆ
ಸ್ಕ್ರೀನ್ 3	ರಾಜ ರಾಣಿ ರೋರರ್ ರ್‍ಯಾಕೆಟ್ (ಕ): ಬೆ.11.30ಕ್ಕೆ, ಮಾನ್ಸೂನ್ ರಾಗ (ಕ): ಮ.1.50ಕ್ಕೆ, ದೊಂಗಲುನ್ನಾರು ಜಾಗ್ರತ (ತೆ): ಸಂ.5ಕ್ಕೆ, ಧೋಕಾ ರೌಂಡ್ ಡಿ ಕಾರ್ನರ್ (ಹಿಂ): ರಾ.7.20ಕ್ಕೆ, ರಾ.9.50ಕ್ಕೆ
ಸ್ಕ್ರೀನ್ 4	ಗುರುಶಿಷ್ಯರು (ಕ): ಬೆ.9.55ಕ್ಕೆ, ಸಂ.4ಕ್ಕೆ, ರಾ.7.05ಕ್ಕೆ, ಟ್ರಿಗರ್ (ತ): ಮ.1.10ಕ್ಕೆ, ಬ್ರಹ್ಮಾಸ್ತ್ರ (3ಡಿ) (ಹಿಂ): ರಾ.10.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE ದೂ : 2533444 / 2433456

ಸ್ಕ್ರೀನ್ 1	ಚುಪ್ (ಹಿಂ): ಬೆ.10.10ಕ್ಕೆ, ಧೋಕಾ ರೌಂಡ್ ಡಿ ಕಾರ್ನರ್ (ಹಿಂ): ಮ.1ಕ್ಕೆ, ಅವತಾರ್ (3ಡಿ)(ಇಂ): ಮ.3.25ಕ್ಕೆ, ರಾ.10ಕ್ಕೆ, ಲಕ್ಕಿಮ್ಯಾನ್ (ಕ): ಸಂ.6.50ಕ್ಕೆ,
ಸ್ಕ್ರೀನ್ 2	ಗುರುಶಿಷ್ಯರು (ಕ): ಬೆ.9.30ಕ್ಕೆ, ಮ.12.50ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಚುಪ್ (ಹಿಂ): ಸಂ.4.10ಕ್ಕೆ
ಸ್ಕ್ರೀನ್ 3	ಟ್ರಿಗರ್ (ತ): ಬೆ.11ಕ್ಕೆ, ದೊಂಗಲುನ್ನಾರು ಜಾಗ್ರತ (ತೆ): ಮ.1.45ಕ್ಕೆ, ಕೃಷ್ಣ ವೃಂದ ವಿಹಾರಿ (ತೆ): ರಾ.7.15ಕ್ಕೆ, ಗುರುಶಿಷ್ಯರು (ಕ): ಮ.3.55ಕ್ಕೆ, ಚುಪ್ (ಹಿಂ): ರಾ.10.10ಕ್ಕೆ
ಸ್ಕ್ರೀನ್ 4	ಬ್ರಹ್ಮಾಸ್ತ್ರ (3ಡಿ)(ಹಿಂ): ರಾ.10.05ಕ್ಕೆ, ಸಂ.4.40ಕ್ಕೆ, ರಾ.10.30ಕ್ಕೆ, ಲಕ್ಕಿಮ್ಯಾನ್ (ಕ): ಮ.1.30ಕ್ಕೆ, ಧೋಕಾ ರೌಂಡ್ ಡಿ ಕಾರ್ನರ್ (ಹಿಂ): ರಾ.8.05ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಸ್ವಚ್ಛ ಕರ್ನಾಟಕ (ಕ): ಬೆ.11ಕ್ಕೆ, ಮಾನ್ಸೂನ್ ರಾಗ (ಕ): ಮ.1.30ಕ್ಕೆ, ಸಂ.4.30ಕ್ಕೆ, ಕೊಟ್ಟು (ಮ): ರಾ.7.45ಕ್ಕೆ
ಸ್ಕ್ರೀನ್ 2	ಗುರುಶಿಷ್ಯರು (ಕ): ಬೆ.10.30ಕ್ಕೆ, ಮ.1.35ಕ್ಕೆ, ರಾ.7.45ಕ್ಕೆ, ಲಕ್ಕಿಮ್ಯಾನ್ (ಕ): ಸಂ.4.45ಕ್ಕೆ
ಸ್ಕ್ರೀನ್ 3	ಬ್ರಹ್ಮಾಸ್ತ್ರ (3ಡಿ)(ಹಿಂ): ಮ.1.15ಕ್ಕೆ, ರಾ.7.45ಕ್ಕೆ, ಬ್ರಹ್ಮಾಸ್ತ್ರ (3ಡಿ)(ಕ): ಸಂ.4.30ಕ್ಕೆ
ಸ್ಕ್ರೀನ್ 4	ಲಕ್ಕಿಮ್ಯಾನ್ (ಕ): ಬೆ.10.30ಕ್ಕೆ, ಮ.1.35ಕ್ಕೆ, ರಾ.7.45ಕ್ಕೆ, ಗುರುಶಿಷ್ಯರು (ಕ): ಸಂ.4.35ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲಕ್ಕಿಮ್ಯಾನ್ (ಕ): ಬೆ.11.30ಕ್ಕೆ, ಮ.3.50ಕ್ಕೆ, ಸಂ.6.15ಕ್ಕೆ, ಮಾನ್ಸೂನ್ ರಾಗ (ಕ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಬ್ರಹ್ಮಾಸ್ತ್ರ (3ಡಿ)(ಹಿಂ): ಮ.12ಕ್ಕೆ, ಮ.2.45ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ವೆಂದು ತನಿಂದದು ಕಾಡು (ತ): ಬೆ.10.05ಕ್ಕೆ, ಬೆ.11.30ಕ್ಕೆ, ಮ.3.05ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ವೇರ್ ದಿ ಕ್ರೌಡಾಡ್ಸ್ ಸಿಂಗ್ (ಇಂ): ಮ.1.40ಕ್ಕೆ, ರಾ.9.45ಕ್ಕೆ, ನೇನು ಮೀಕು ಭಾಗ ಕಾವಾಲ್ಸಿನವಾಡಿನಿ (ತೆ): ರಾ.7.30ಕ್ಕೆ, ಆ ಅಮ್ಮಾಯಿ ಗುರಿಂಚಿ ಮೀಕು ಚೆಪ್ಪಾಲಿ (ತೆ): ಸಂ.4.25ಕ್ಕೆ, ರಾ.10.20ಕ್ಕೆ, ಜಹಾನ್ ಚಾರ್ ಯಾರ್ (ಹಿಂ): ಮ.1.05ಕ್ಕೆ, ಸಿಯಾ (ಹಿಂ): ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಕಾರ್ತಿಕೇಯ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಲಕ್ಕಿಮ್ಯಾನ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಶಂಶೀರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗುರುಶಿಷ್ಯರು (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮರ್ದಿನಿ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಟ್ರಿಗರ್ (ತ)	4 ಪ್ರದರ್ಶನಗಳು
ಸಂಗಂ	
ಮಾನ್ಸೂನ್ ರಾಗ (ಕ)	4 ಪ್ರದರ್ಶನಗಳು
ಲಿಡೋ	
ರಾಜಾ ರಾಣಿ ರೋರರ್ ರಾಕೆಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗುರುಶಿಷ್ಯರು (ಕ)	4 ಪ್ರದರ್ಶನಗಳು
ಪ್ರಭಾ	
ಗಾಳಿಪಟ–2 (ಕ)	4 ಪ್ರದರ್ಶನಗಳು

ಮೈಸೂರು ರೇಸುಗಳು–2022



9ನೇ ದಿನ, ಶನಿವಾರ 24-9-2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ನೈನಿತಾಲ್ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಕ್ಯಾಪಿಟಲ್ ಗೇನ್ 2. ಸ್ಯಾಂಡ್ ಕ್ಯಾಸಲ್ 3. ಸ್ಮೈಲ್ ಅರೌಂಡ್

II. ಮಂಡಕಳ್ಳಿ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಸೆಕ್‌ಮೆಟ್ 2. ಲವ್ 3. ಓಸಿ ಬಿಸಾ

III. ಜಗನ್ಮೋಹನ ಪ್ಯಾಲೇಸ್ ಡಿ2–1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ವೈಲ್ಡ್ ಎಂಪರರ್ 2 ವರ್ಲ್ಡ್‌ಲಿ ವೈಸ್ 3 ವಿಜಯ ಸಾರಥಿ

IV. Dr. MAM ರಾಮಸ್ವಾಮಿ ಟ್ರೋಫಿ–1200 ಮೀ. ರೇಟೆಡ್ 60 ರಿಂದ 85. ಮ.3.30ಕ್ಕೆ
1. ಒ ಆ್ಯನ್‌ಸಿನಿ 2. ನೋಟೊರಿಟಿ 3. ಬ್ರೂನ್‌ಹಿಲ್ಡ್

V. ಮಹಾರಾಜಾಸ್ ಕಪ್–2022– 1600 ಮೀ. 4 ವರ್ಷದ (ಟರ್ಮ್ಸ್). ಸಂ.4.00ಕ್ಕೆ
1. ನಾಟಿ ಡ್ಯಾನ್ಸರ್ 2. ಟ್ರಫಾಲ್‌ಗರ್ 3. ಮೈ ಒಪಿನಿಯನ್

VI. ಕೂರ್ಗ್ ಪ್ಲೇಟ್–1100 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). ಸಂ.4.30ಕ್ಕೆ
1. ಜಬ್ಬರ್ 2. ಸ್ಪಿರಿಚ್ಯುಯಲ್ ಫೋರ್ಸ್ 3. ದಿ ಫೈರ್

VII. ಜಗನ್ಮೋಹನ ಪ್ಯಾಲೇಸ್ ಡಿ3–1400 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1 ನಾಟಿ ವುಡ್ಸ್ 2 ಕುಶಾಕ್ 3. ಜಿನೆ ಸೇ ಕೋಯಿ

ದಿನದ ಅತ್ಯುತ್ತಮ	: ನಾಟಿ ಡ್ಯಾನ್ಸರ್
ಡಬ್ಬಲ್	: ಸೆಕ್‌ಮೆಟ್, ಜಬ್ಬರ್
ಜಾಕ್‌ಪಾಟ್	: 3, 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 6 ಮತ್ತು 7

ಟಿಪ್ ಸ್ಟರ್ ಪಿಜೆಸಿ

ಬ್ಯಾಂಕ್ ಆಫ್ ಬರೋಡಾದಿಂದ ಸಾಲ ಸೌಲಭ್ಯ



ಹುಣಸೂರು, ಸೆ.23– ನಗರದ ಬ್ಯಾಂಕ್ ಆಫ್ ಬರೋಡಾದಿಂದ ರೈತರು, ಸಣ್ಣಪುಟ್ಟ ವ್ಯಾಪಾರಸ್ಥರು ಹಾಗೂ ವಾಣಿಜ್ಯೋದ್ಯಮಿಗಳಿಗೆ ವಿವಿಧ ಸಾಲ ಸೌಲಭ್ಯ ನೀಡಲಾಗುವುದು ಎಂದು ಶಾಖಾ ವ್ಯವಸ್ಥಾಪಕ ಎಸ್.ವೈಕುಂಠಯ್ಯ ತಿಳಿಸಿದರು.

ಬ್ಯಾಂಕ್ ಆಫ್ ಬರೋಡಾ ಸಾರ್ವಜನಿಕರು ಮನೆ ಕಟ್ಟಲು ಹಾಗೂ ಮನೆ ರಿಪೇರಿಗಾಗಿ ಗೃಹ ಸಾಲ, ವಾಹನ ಖರೀದಿ, ರೈತರ ಕೃಷಿ ಚಟುವಟಿಕೆಗೆ ಸಾಲ, ಸಣ್ಣಪುಟ್ಟ ವ್ಯಾಪಾರಸ್ಥರಿಗೆ, ವ್ಯಾಪಾರ–ವಾಣಿಜ್ಯೋದ್ಯಮ ಹಾಗೂ ಕೈಗಾರಿಕೋದ್ಯಮಗಳಿಗೆ ವಿವಿಧ ರೀತಿಯ ಸಾಲ ಒದಗಿಸುತ್ತಿದೆ. ಸಾರ್ವಜನಿಕರು ಸಾಲ ಸದುಪಯೋಗಪಡಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಸರ್ಕಾರಿ ರಜಾ ದಿನ ಬಿಟ್ಟು ಕೆಲಸದ ವೇಳೆ ಬ್ಯಾಂಕ್‌ಗೆ ಭೇಟಿ ನೀಡುವಂತೆ ಅವರು ಮನವಿ ಮಾಡಿದ್ದಾರೆ.

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಪ್ರಥಮ ವರ್ಷದ ಪುಣ್ಯಸ್ಮರಣೆ




ಶ್ರೀಯುತ ಚನ್ನಯ್ಯನವರು

ನಿವೃತ್ತ ಕೆ.ಇ.ಬಿ ಉದ್ಯೋಗಿ, ಬೆಳವಾಡಿ ನಿಧನ: 24.09.2021

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ಶ್ರೀಯುತರ ಧರ್ಮಪತ್ನಿ ಶ್ರೀಮತಿ ಚಾಮಮ್ಮ, ಪುತ್ರರಾದ ಬಿ.ಕಾಳಯ್ಯ, ಬೆಳವಾಡಿ ಶಿವಕುಮಾರಸ್ವಾಮಿ, ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು ಹಾಗೂ ಗ್ರಾಮಸ್ಥರು.

2ನೇ ವರ್ಷದ ಸವಿನೆನಪು



ಜಿ.ಚನ್ನಪ್ಪ

(ಲೇಟ್ ತಾಯಮ್ಮನ ಗಿರಿಗೌಡರ ಮಗ)

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನೀವು ತೋರಿಸಿಕೊಟ್ಟ ದಾರಿಯಲ್ಲಿ ನಡೆಯುತ್ತಿರುವ ಹಾಗೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಧರ್ಮಪತ್ನಿ ಲಕ್ಷ್ಮಿ, ಮಗಳು-ತನ್ಮಯಿ, ಮಂಜುಳ, ಶ್ರೀನಿವಾಸ್, ಲಲಿತ, ನಾಗರಾಜು, ಕುಟುಂಬವರ್ಗ ಕೆ.ಜಿ.ಕೊಪ್ಪಲು - ಜಯನಗರ ಹಾಗೂ ಚಿಕ್ಕಹರದನಹಳ್ಳಿ ಗ್ರಾಮಸ್ಥರು, ಮೈಸೂರು

ಹಸು ಕಾಣೆಯಾಗಿದೆ

ಒಂಟಿಕೊಪ್ಪಲಿನಿಂದ ಕಾಣೆಯಾಗಿದ್ದು, ಮಾಹಿತಿ ತಿಳಿದರೆ ತಕ್ಷಣ ಈ ಸಂಖ್ಯೆಗೆ ಸಂಪರ್ಕಿಸಿ: 8694066350 ಕುಮಾರ್ #2558/1, ವಾಲ್ಮೀಕಿ 3ನೇ ಕ್ರಾಸ್, ಒಂಟಿಕೊಪ್ಪಲು, ಮೈಸೂರು



